ತುರುವನೂರು: ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು

ಲಲಿತಮ್ಮ ಎನ್.

ಮಾರ್ಗದರ್ಶಕರು

ಡಾ.ಎಸ್.ವೈ.ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೫

ತುರುವನೂರು: ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರೌಢಪ್ರಬಂಧ)

ಸಂಶೋಧಕರು

ಲಲಿತಮ್ಮ ಎನ್.

ಮಾರ್ಗದರ್ಶಕರು

ಡಾ.ಎಸ್.ವೈ.ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಮಾರ್ಗದರ್ಶಕರ ದೃಢೀಕರಣ

ತುರುವನೂರು: ಸಾಂಸ್ಕೃತಿಕ ಅಧ್ಯಯನ ಎಂಬ ಪ್ರೌಢಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಲಲಿತಮ್ಮ ಎನ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರೌಢಪ್ರಬಂಧವು ಮೂಲ ವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಎಸ್.ವೈ.ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಘೋಷಣಾ ಪತ್ರ

ತುರುವನೂರು: ಸಾಂಸ್ಕೃತಿಕ ಅಧ್ಯಯನ ಎಂಬ ಪ್ರೌಢಪ್ರಬಂಧವನ್ನು **ಡಾ.ಎಸ್.ವೈ.ಸೋಮಶೇಖರ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಪ್ರೌಢಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Lalithamma .N

ಲಲಿತಮ್ಮ ಎನ್.
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ಪ್ರಸ್ತಾವನೆ

ಮಾನವನು ಪ್ರಾರಂಭದಲ್ಲಿ ಒಂದೇ ಕಡೆ ನೆಲೆಯೂರದೆ ಅಲೆಮಾರಿಯಾಗಿ ಅನುಕೂಲಕರ ಪ್ರದೇಶದಲ್ಲಿ ಅಲೆದಾಡುತ್ತಾ ಜೀವನ ಕಳೆಯುತ್ತಿದ್ದ. ನಂತರ ಅವನು ಅಭಿವೃದ್ಧಿಯಾದಂತೆ ಒಂದೇ ಕಡೆ ಶಾಶ್ವತವಾಗಿ ನೆಲೆನಿಂತು ತನಗೆ ಬೇಕಾದ ಆಹಾರ ಪದಾರ್ಥಗಳನ್ನು ತಾನೇ ಬೆಳೆದು ತಿನ್ನಲು ಪ್ರಾರಂಭಿಸಿದ. ಇದು ಮಾನವನ ಅಲೆಮಾರಿ ಮತ್ತು ಕೃಷಿ ಸಂಸ್ಕೃತಿಗಳ ವಿಕಾಸವನ್ನು ಸೂಚಿಸುತ್ತದೆ. ಈ ಬೆಳವಣಿಗೆ ನಂತರದ ಕಾಲಘಟ್ಟದಲ್ಲಿ ಗ್ರಾಮ ಸಂಸ್ಕೃತಿಯಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು. ಚರಿತ್ರೆ ಎಂದರೆ ಕೇವಲ ರಾಜ, ರಾಣಿ, ಅವರ ಅರಮನೆ, ಆಡಳಿತ, ಸಾಮ್ರಾಜ್ಯದ ವರ್ಣನೆ ಎಂದು ಅಷ್ಟೇ ಭಾವಿಸಲಾಗಿತ್ತು. ಆದರೆ ಪ್ರತಿಯೊಂದು ಗ್ರಾಮ, ತಾಲೂಕು, ಜಿಲ್ಲೆ ಹಾಗೂ ರಾಜ್ಯಕ್ಕೂ ತನ್ನದೇ ಆದ ಇತಿಹಾಸವಿದೆ. ಕೆಲವು ದಶಕಗಳಿಂದೀಚೆಗೆ ಸ್ಥಳೀಯ ಚರಿತ್ರೆಯಲ್ಲಿ ಗ್ರಾಮ, ಹೋಬಳಿ, ನಗರ, ತಾಲೂಕು, ಜಿಲ್ಲೆಗಳ ಮಟ್ಟದಲ್ಲಿ ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ. ಇಂತಹ ಅಧ್ಯಯನಗಳು ಸ್ಥಳೀಯ ಚರಿತ್ರೆಯನ್ನು ತಿಳಿಸುವುದರ ಜೊತೆಗೆ ರಾಜಕೀಯ ಇತಿಹಾಸದ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಪುನಃರೂಪಿಸಲು ನೆರವಾಗಿದೆ. ಆಯಾಯ ಪ್ರದೇಶದಲ್ಲಿ ಬದುಕಿ ಬಾಳಿದ ಮಾನವನ ಜೀವನ ವಿಧಾನ, ಸಮಸ್ಯೆ, ಜೀವನ ಮೌಲ್ಯ, ಭೌತಿಕ ಅವಶೇಷ ಮೊದಲಾದವುಗಳ ವಿಶ್ಲೇಷಣೆಯೇ ಅಧ್ಯಯನವಾಗಿದೆ. ಹಾಗಾಗಿ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಲು ಆಕರಗಳು ಬಹಳ ಮುಖ್ಯ. ಅಂತಹ ಆಕರಗಳಲ್ಲಿ ಪ್ರಧಾನವಾಗಿ ಪುರಾತತ್ವ ಆಕರಗಳು, ಮೌಖಿಕ ಆಕರಗಳು, ಸಾಹಿತ್ಯಿಕ ಆಕರಗಳು ಮುಖ್ಯವಾದವು. ಒಂದು ಪ್ರದೇಶದ ಅಧ್ಯಯನದಲ್ಲಿ ಸಾಹಿತ್ಯ, ಶಾಸನ, ಪುರಾತತ್ವೀಯ ಹಾಗೂ ಮೌಖಿಕ ಆಕರಗಳನ್ನು ವಿಶ್ಲೇಷಿಸುವುದರಿಂದ ಆಯಾ ಪ್ರದೇಶದ ಮಾನವನ ಚರಿತ್ರೆ ಹಾಗೂ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಕಟ್ಟಿಕೊಡಲಾಗಿದೆ 'ತುರವನೂರು: ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಇಡೀ ತುರುವನೂರು ಗ್ರಾಮದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಲಾಗಿದೆ. ಮಧ್ಯ ಕರ್ನಾಟಕದಲ್ಲಿ ಬರುವ ಚಿತ್ರದುರ್ಗ ಜಿಲ್ಲೆ ಪ್ರಾಗೈತಿಹಾಸಿಕ ಹಾಗೂ ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆದಿದೆ.

ಚಿತ್ರದುರ್ಗ ತಾಲೂಕಿನ ಗ್ರಾಮ ತುರುವನೂರು. ಇದು ಸ್ವಾತಂತ್ರ್ಯಪೂರ್ವಕಾಲದಲ್ಲೂ ಒಂದು ಹೋಬಳಿ ಕೇಂದ್ರವಾಗಿದ್ದು, ಈ ಪ್ರದೇಶವು ಪ್ರಾಗಿತಿಹಾಸ ಕಾಲದ ಮಾನವನ ವಾಸಕ್ಕೆ ಯೋಗ್ಯವಾದ ನೆಲೆಯಾಗಿದ್ದುದು ಅಲ್ಲಿನ ಬೃಹತ್‌ಶಿಲಾಸಮಾಧಿಗಳಿಂದ ಗುರುತಿಸಬಹುದಾಗಿದೆ. ಈ ಪ್ರದೇಶದಲ್ಲಿ ಬೃಹತ್‌ಶಿಲಾಯುಗದ ಕಾಲಾವಧಿಯಲ್ಲಿ ಶವಸಂಸ್ಕಾರವು ಮಾನವ ಸಂಸ್ಕೃತಿಯ ಒಂದು ಭಾಗವಾಗಿ ಬೆಳೆದುಬಂದಿರುವುದು ಅವರು ಬಳಸಿ ಬಿಟ್ಟುಹೋದಂತ ಪರಿಕರಗಳಿಂದ ತಿಳಿದುಬರುತ್ತದೆ. ಈ ಪ್ರದೇಶವು ನೈಸರ್ಗಿಕವಾಗಿ ಹಸಿರುಮಿಶ್ರಿತ ಶಿಲೆಯಿಂದ ಆವೃತ್ತಗೊಂಡಿದ್ದು, ನೆರಹೊರೆಯ ಗುಡ್ಡಗಾಡು ಪ್ರದೇಶಗಳಿಂದ ಸುತ್ತುವರಿದಿರುವುದು ವಿಶಿಷ್ಟವಾಗಿದೆ. ಭೌಗೋಳಿಕ ಅಂಶಗಳು ಇಲ್ಲಿನ ಚರಿತ್ರೆ ಮತು ಸಂಸ್ಕೃತಿಯ ಮೇಲೆ ಪ್ರಭಾವ ಬೀರಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಪ್ರಾಗಿತಿಹಾಸ ಸಂಸ್ಕೃತಿಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಬೃಹತ್‌ಶಿಲಾಯುಗ ಸಂಸ್ಕೃತಿಯ ಅಂಶಗಳು, ಈ ನೆಲೆಗೆ ಇರುವ ಸಂಬಂಧಗಳು ಹಾಗೂ ಸಂಸ್ಕೃತಿಯ ಪಸರಿಸುವಿಕೆಯನ್ನು ಕುರಿತು ಚರ್ಚಿಸಲಾಗುವುದು. ಚಾರಿತ್ರಿಕವಾಗಿ ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬ ಪಲ್ಲವರು, ಕಲಚೂರಿಗಳು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೆಯಗಾರರು, ಸ್ವಾತಂತ್ರ್ಯಹೋರಾಟ ಕುರಿತಾದ ಪ್ರಾಚೀನ ಚಾರಿತ್ರಿಕ ಮತ್ತು ಸಾಹಿತ್ಯಿಕ ಆಧಾರಗಳನ್ನು ಪ್ರಧಾನವಾಗಿಟ್ಟುಕೊಂಡು ವಿಶ್ಲೇಷಿಸಲಾಗಿದೆ. ನೈಸರ್ಗಿಕ ಹಾಗೂ ಸಾಂಸ್ಕೃತಿಕವಾಗಿ ಇಲ್ಲಿನ ಸ್ಥಳನಾಮಗಳು ವಿಶಿಷ್ಟವಾಗಿ ವೆ. ಅಂತಹ ಸ್ಥಳನಾಮ ಅಧ್ಯಯನಕ್ಕೆ ಅನುಗುಣವಾಗಿ ಭೌಗೋಳಿಕ, ಪ್ರಾಗ್ಯೆತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಚಾರಿತ್ರಿಕವಾಗಿ ಅಧ್ಯಯನದಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ, ದೇವಾಲಯ, ಕೋಟೆ, ಸ್ಮಾರಕಶಿಲ್ಪ, ಶಾಸನಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.ಇಲ್ಲಿನ ಕೋಟೆ ರಾಜಕೀಯ ಇತಿಹಾಸ ನಿರ್ಮಾಣದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದು, ಇವುಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾನ, ಪ್ರಸ್ತುತ ಸ್ಥಿತಿ ಎಂಬಿತ್ಯಾದಿಯಾದ ಸಂಗತಿಯನ್ನು ಸೋದಾಹರಣವಾಗಿ ಚರ್ಚಿಸಲಾಗಿದೆ.

ಅರಣ್ಯಸತ್ಯಾಗ್ರಹ ಕಾಲದ ಈಚಲುಮರದ ಚಳವಳಿಯಲ್ಲಿ ತುರುವನೂರಿನ ಪಾತ್ರ. ಅದರಿಂದಾದ ಪರಿಣಾಮಗಳನ್ನು ಕುರಿತಾಗಿ ಚರ್ಚಿಸಲಾಗಿದೆ. ಇನ್ನೂ ಮೌಖಿಕ ಸಾಹಿತ್ಯದ ಮೂಲಕ ಉಳಿದುಕೊಂಡು ಬಂದಿರುವ ಐತಿಹ್ಯ, ನಂಬಿಕೆ, ಆಚರಣೆ, ಹಬ್ಬಗಳು, ಜಾತ್ರೆ, ಉತ್ಸವಗಳನ್ನು ಕುರಿತು ಮಾಹಿತಿಯನ್ನು ವಿಶ್ಲೇಷಣೆ ಮಾಡುವುದು. ತುರುವನೂರನ್ನು ಕುರಿತಾಗಿ ಇದುವರೆಗು ಸಂಶೋಧಕರು ಬರೆದಿರುವ ಬಿಡಿ ಲೇಖನಗಳಲ್ಲಿರುವ ಮಾಹಿತಿಯನ್ನು ಸಂಗ್ರಹಿಸಿಕೊಂಡು ತುರುವನೂರನ್ನು ಅಧ್ಯಯನಕ್ಕೆ ಒಳಪಡಿಸಿ ಚರಿತ್ರೆಗೆ ಸೇರಿಸುವ ಸದುದ್ದೇಶದಿಂದ ಪ್ರಸ್ತುತ ಅಧ್ಯಯನವನು ಕೈಗೊಳ್ಳಲಾಗಿದೆ.

ಒಟ್ಟಾರೆ ಇಲ್ಲಿನ ಪುರಾತತ್ವೀಯ, ಮೌಖಿಕ, ಸಾಹಿತ್ಯಿಕ ಆಕರಗಳ ಮೂಲಕ ಇಡೀ ತುರುವನೂರು ಗ್ರಾಮದ ಸಮಗ್ರ ಅಧ್ಯಯನ ನಡೆಸುವ ಉದ್ದೇಶವನ್ನು ಒಳಗೊಂಡಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶ ತುರುವನೂರಿನ ಒಟ್ಟಾರೆ ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವುದು. ಕರ್ನಾಟಕದ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕ ಮಹತ್ವ ಪಡೆದಂತಹ ನೆಲೆ. ಇದೇ ತಾಲೂಕಿನಲ್ಲಿ ಬರುವ ತುರುವನೂರು ಮೂಲತಃ ಹೋಬಳಿ ಕೇಂದ್ರ, ಬಯಲುಸೀಮೆ ಪ್ರದೇಶ. ಯಾವುದೇ ಒಂದು ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಬೇಕಾದರೆ ಉದ್ದೇಶ ಬಹುಮುಖ್ಯ.

ಪ್ರಸ್ತುತ ಅಧ್ಯಯನವು ತುರುವನೂರು: ಸಾಂಸ್ಕೃತಿಕ ಅಧ್ಯಯನಎಂಬ ಶೀರ್ಷಿಕೆಯನ್ನು ಒಳಗೊಂಡಿದ್ದು, ಈ ಪ್ರದೇಶ ನೈಸರ್ಗಿಕವಾದ ನೆಲೆ. ಭೌಗೋಳಿಕವಾಗಿ ತುರುವನೂರು ಪರಿಸರ ಸುತ್ತಮುತ್ತ ಹಳೆ ಶಿಲಾಯುಗದಿಂದ ಹಿಡಿದು ಬೃಹತ್ ಶಿಲಾಯುಗದವರೆಗಿನ ಕೆಲವು ಸಂಗತಿಗಳನ್ನು ಬೆಳಕಿಗೆ ತರುವ ಮೂಲಕ ಇಲ್ಲಿನ ಪ್ರಾಚೀನ ಮಾನವನ ಸಂಸ್ಕೃತಿಯನ್ನು ಕುರಿತು ವಿಶ್ಲೇಷಿಸಲಾಗಿದೆ. ಸ್ಥಳನಾಮದ ಅಧ್ಯಯನಕ್ಕೆ ಅನುಗುಣವಾಗಿ ವಿಭಾಗಿಸಿಕೊಂಡು ಭೌಗೋಳಿಕ, ಪ್ರಾಗಿತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಚಾರಿತ್ರಿಕವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತುಶಿಲ್ಪ, ಮೂರ್ತಿಶಿಲ್ಪ, ದೇವಾಲಯ, ಕೋಟೆ ಮುಂತಾದವುಗಳ ಕುರಿತು ವಿವರಿಸಿದ್ದೇನೆ.

ಈ ಪರಿಸರದ ಪ್ರಾಚೀನ ದೇವಾಲಯಗಳು ಅವುಗಳ ವಾಸ್ತುಶೈಲಿ,ಮೂರ್ತಿಶಿಲ್ಪ ಮುಂತಾದವುಗಳನ್ನು ಚಾರಿತ್ರಿಕವಾಗಿ ನೋಡಲು ಪ್ರಯತ್ನಿಸಿದ್ದೇನೆ. ಚಿತ್ರದುರ್ಗ ಜಿಲ್ಲೆಯಲ್ಲೇ ಪ್ರಥಮವಾಗಿ ಈಚಲುಮರ ಕಡಿಯುವ ಮೂಲಕ ಅರಣ್ಯಸತ್ಯಾಗ್ರಹ ಚಳವಳಿಗೆ ಚಾಲನೆ ನೀಡಿದ ತುರುವನೂರಿನ ಪಾತ್ರ ಗಮನಾರ್ಹವಾದುದ್ದು. ಅಳಿದುಳಿದ ಅವಶೇಷಗಳ ಅಧ್ಯಯನ ಕೈಗೊಂಡು ಪ್ರಾಚೀನ ಇತಿಹಾಸ, ಸ್ಥಳೀಯ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಬೆಳಕನ್ನು ಚೆಲ್ಲುವುದು ಕ್ಷೇತ್ರಕಾರ್ಯದ ಮೂಲಕ ಪ್ರಚಲಿತದಲ್ಲಿರುವ ಐತಿಹ್ಯ ಮತ್ತು ಮೌಖಿಕ ಕಥೆಗಳನ್ನಾಧರಿಸಿ ಮಾಹಿತಿಯನ್ನು ದಾಖಲಿಸಿಕೊಳ್ಳುವುದು; ಸಂಗ್ರಹಿತ ಸಂಪನ್ಮೂಲಗಳನ್ನು ಸೂಕ್ಷ್ಮವಾಗಿ ವಿವೇಚಿಸುವ ಮೂಲಕ ತುರುವನೂರಿನ ಸಮಗ್ರ ಇತಿಹಾಸದ ಸಾಂಸ್ಕೃತಿಕ ಅಂಶಗಳನ್ನು ಕಟ್ಟಿಕೊಡುವುದೇ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಒಂದು ಕ್ಷೇತ್ರದ ಸಂಶೋಧನೆಗೆ ಅಧ್ಯಯನದ ವ್ಯಾಪ್ತಿ ಬಹಳ ಮುಖ್ಯ. ಇದು ನಿರ್ದಿಷ್ಟ ಹಾಗೂ ಉದ್ದೇಶಪೂರಿತ ಸಂಶೋಧನೆಯ ಯಶಸ್ಸಿಗೆ ತುಂಬಾ ಸಹಾಯಕಾರಿ. ಪ್ರಸ್ತುತ ಅಧ್ಯಯನವು

"ತುರುವನೂರು: ಸಾಂಸ್ಕೃತಿಕ ಅಧ್ಯಯನ"ವಾಗಿದ್ದು ತುರುವನೂರು ಗ್ರಾಮ ಪರಿಸರವನ್ನು ಒಳಗೊಂಡಿದೆ.

ಕಾಲದ ಹಿನ್ನೆಲೆಯಲ್ಲಿ ತುರುವನೂರಿನ ವ್ಯಾಪ್ತಿಯನ್ನು ಪ್ರಾಗಿತಿಹಾಸ ಕಾಲದಿಂದ ಹಿಡಿದು ಸ್ವಾತಂತ್ರ್ಯ ಹೋರಾಟದವರೆಗೆ ಅಧ್ಯಯನದ ಹಿನ್ನೆಲೆಯಲ್ಲಿ ಸೀಮಿತಗೊಳಿಸಲಾಗಿದೆ.

ಅಧ್ಯಯನದ ವಿಧಾನ

ಒಂದು ಕಾರ್ಯ ಯಶಸ್ವಿಯಾಗಿ ನಡೆಯಬೇಕಾದರೆ ಕ್ರಮಬದ್ಧತೆ ಅತ್ಯಂತ ಮುಖ್ಯ ಪ್ರಸ್ತುತ ತುರುವನೂರು: ಸಾಂಸ್ಕೃತಿಕ ಅಧ್ಯಯನವು ಹೆಚ್ಚಾಗಿ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಅಧ್ಯಯನ ವ್ಯಾಪ್ತಿಗೆ ಒಳಪಡುವ ತುರುವನೂರಿನ ಎಲ್ಲಾ ವಿಭಾಗಗಳಿಗೂ ಭೇಟಿಮಾಡಿ ಅವಶೇಷಗಳನ್ನು ಸಂಗ್ರಹಿಸಿ ಪರಿಶೀಲಿಸಿ ದಾಖಲಿಸಿಕೊಳ್ಳಲಾಗಿದೆ. ಈ ಪ್ರದೇಶದಲ್ಲಿ ಬರುವಂತ ಮೌಖಿಕ ಕಥನಗಳನ್ನು, ಐತಿಹ್ಯಗಳನ್ನು ತಿಳಿದಿರುವಂತ ಸಂಪನ್ಮೂಲ ವ್ಯಕ್ತಿಗಳನ್ನು ಭೇಟಿ ಮಾಡಿ ಅವರೊಡನೆ ಚರ್ಚಿಸಿ ವಿಷಯಗನ್ನು ಸಂಗ್ರಹಿಸಿದ್ದೇನೆ. ಕೊನೆಯದಾಗಿ ಅನುಬಂಧದಲ್ಲಿ ಗ್ರಂಥಋಣ, ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಛಾಯಾಚಿತ್ರಗಳು ನಕ್ಷೆಗಳನ್ನು ಅಳವಡಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ತುರುವನೂರು:ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯಲ್ಲಿ ಸೂಚಿಸಿರುವಂತೆ ಅಧ್ಯಯನವು ತುರುವನೂರು ಪ್ರದೇಶಕ್ಕೆ ಸೀಮಿತಗೊಂಡಿದ್ದು ಅಧ್ಯಯನದ ದೃಷ್ಟಿಯಿಂದ ಐದು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ.

ಮೊದಲನೆಯ ಅಧ್ಯಾಯನವು ಅಧ್ಯಯನದ ಪ್ರಸ್ತಾವನಯಾಗಿದ್ದು, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ, ಇದುವರೆಗು ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಕುರಿತಾಗಿದೆ.

ಎರಡನೆಯ ಅಧ್ಯಾಯದಲ್ಲಿ ತುರುವನೂರಿನ ಭೌಗೋಳಿಕ ಪರಿಸರ, ಲಕ್ಷಣಗಳಾದ ಭೂವಿಸ್ತೀರ್ಣ, ಜನಸಂಖ್ಯೆ, ಹವಾಗುಣ, ಮಣ್ಣು, ಸಸ್ಯಸಂಪತ್ತು, ಅಕ್ಷಾಂಶ, ರೇಖಾಂಶ, ಪ್ರಾಣಿಸಂಪತ್ತು; ತುರುವನೂರನ್ನೂ ಪ್ರಾಗಿತಿಹಾಸ ಕಾಲದಿಂದ ಆರಂಭಗೊಂಡು, ಚಾರಿತ್ರಿಕವಾಗಿ ಮೌರ್ಯರ ಕಾಲಾವಧಿಯಿಂದ ಚಿತ್ರದುರ್ಗದ ಪಾಳೆಗಾರರ ಕಾಲಾವಧಿಯವರೆಗೆ ವಿವರಿಸಲಾಗಿದೆ. ಆಧುನಿಕ ಇತಿಹಾಸಕ್ಕೆ ಬಂದಾಗ ತುರುವನೂರಿನ ಅರಣ್ಯಸತ್ಯಾಗ್ರಹ ಅವಧಿಯಲ್ಲಿ ನಡೆದ ಈಚಲುಮರದ ಚಳವಳಿಯ ಘಟನಾವಳಿಗಳ ಕುರಿತಾಗಿ ವಿವರವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಮೂರನೆಯ ಅಧ್ಯಾಯನವು ತುರುವನೂರಿನ ಕಲೆ ಮತ್ತು ವಾಸ್ತುಶಿಲ್ಪದ ಕುರಿತಿದೆ. ಇಲ್ಲಿ ದೇವಾಲಯಗಳು, ವೀರಗಲ್ಲು, ಶಾಸನ, ಕೋಟೆ, ಶೈವ, ವೈಷ್ಣವ, ಶಾಕ್ತ ಪಂಥಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ತುರುವನೂರಿನ ನಂಬಿಕೆ ಮತ್ತು ಆಚರಣೆಗಳನ್ನು ಮೌಖಿಕ, ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಒಂದು ಪ್ರದೇಶದ ಇತಿಹಾಸ ಕಟ್ಟಿಕೊಡುವಲ್ಲಿ ಮೌಖಿಕ ಆಕರಗಳು ಸಹಾಯಕವಾಗಿದ್ದು, ಅವು ಅಲಿಖಿತವಾದ ಆಕರಗಳಿವೆ. ಪ್ರಸ್ತುತ ಅಧ್ಯಯನದಲ್ಲಿ ಮಿತಿಗೆ ತಕ್ಕಂತೆ ಕೇವಲ ನಂಬಿಕೆ, ಆಚರಣೆ, ಉತ್ಸವ, ಜಾತ್ರೆ, ಹಬ್ಬಗಳು, ಐತಿಹ್ಯಗಳನ್ನು ಕುರಿತಾಗಿ ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ. ಸಾಂಸ್ಕೃತಿಕವಾಗಿ ಜಾತ್ರೆ ಉತ್ಸವಗಳು ಸ್ಥಳೀಯ ಸಂಸ್ಕೃತಿಯ ಮೇಲೆ ಬೀರಿರಬಹುದಾದ ಪ್ರಭಾವಗಳ ಕುರಿತಾಗಿ ವಿವರಿಸಲಾಗಿದೆ.

ಐದನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದು ಇಡೀ ಅಧ್ಯಾಯದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತದ ಸಂಕ್ಷಿಪ್ತ ರೂಪವಾಗಿದೆ.

ಅಧ್ಯಯನದ ಕೊನೆಯಲ್ಲಿ ಕೃತಿ, ಲೇಖನ, ಅಪ್ರಕಟಿತ ಸಂಶೋಧನ ಪ್ರೌಢಪ್ರಬಂಧಗಳ ವಿವರವುಳ್ಳ ಗ್ರಂಥಋಣ ಅಗತ್ಯ ನಕ್ಷೆ, ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಧ್ಯಯನ ಸಮೀಕ್ಷೆ

ತುರುವನೂರು ಕುರಿತಾಗಿ ಇದುವರೆಗೂ ಕೆಲವು ವಿದ್ವಾಂಸರು, ಸಂಶೋಧಕರು ಕೆಲವು ಸಂಶೋಧನಾ ಕಾರ್ಯಗಳನ್ನು ಕೈಗೊಂಡಿದ್ದಾರೆ. ತುರುವನೂರಿನ ಬೃಹತ್ ಶಿಲಾಗೋರಿ ನೆಲೆಗಳ ಬಗ್ಗೆ ಎಂ.ಎ.ಆರ್.ವರದಿಯಲ್ಲಿ(೧೯೪೮-೫೬) ಅಲ್ಲದೆ ನೊಳಂಬ ಪಲ್ಲವರ ಕಾಲದ ಶಾಸನ, ದೇವಾಲಯದ ಬಗ್ಗೆ ಉಲ್ಲೇಖಗೊಂಡಿದೆ. ಅದೇ ರೀತಿಯಾಗಿ ಕೆ.ಬಿ.ಶಿವತಾರಕ್‌ರವರ ಕರ್ನಾಟಕದ ಪುರಾತತ್ವ ನೆಲೆಗಳ ಶೋಧ ಎಂಬ ಗ್ರಂಥದಲ್ಲಿ ಉಲ್ಲೇಖಿತವಿದೆ. ಶರತ್‌ಬಾಬು ಕೆ.ಎಸ್. ಅವರ ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ ಎಂಬ ಎಂ.ಫಿಲ್.ನಿಬಂಧದಲ್ಲಿ ಬೃಹತ್‌ಶಿಲಾನೆಲೆ, ದೇವಾಲಯಗಳ ಬಗ್ಗೆ ವಿವರಿಸಿದ್ದಾರೆ.ತುರುವನೂರು ಗ್ರಾಮನಾಮದ ಬಗ್ಗೆ ಟಿ.ಗಿರಿಜಾ ಅವರ ಚಿತ್ರದುರ್ಗ ಜಿಲ್ಲಾದರ್ಶಿನಿಯಲ್ಲಿ ಉಲ್ಲೇಖಿತಗೊಂಡಿದೆ.

ಡಾ.ಎಸ್.ತಿಪ್ಪೇಸ್ವಾಮಿಯವರು ಚಿತ್ರದುರ್ಗ ಜಿಲ್ಲೆ: ರಕ್ಷಣಾ ವಾಸ್ತುಶಿಲ್ಪ ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧದಲ್ಲಿ ತುರುವನೂರಿನ ಕೋಟೆಯ ಬಗ್ಗೆ ಉಲ್ಲೇಖಿಸಿದ್ದಾರೆ.ತುರುವನೂರ ಸ್ವಾತಂತ್ರ್ಯ ಹೋರಾಟದ ಈಚಲು ಮರದ ಚಳವಳಿ ಬಗ್ಗೆ ಅನೇಕ ಗ್ರಂಥಗಳಲ್ಲಿ ಉಲ್ಲೇಖವಾಗಿರುವುದು ಕಂಡುಬಂದಿದೆ. ಚಂದ್ರವಳ್ಳಿ ಗ್ರಂಥದಲ್ಲಿ ರಾಮರತನ್ ಅವರು ಬರೆದ ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಎಂಬ ಲೇಖನದಲ್ಲಿ ತುರುವನೂರು ಅರಣ್ಯ ಸತ್ಯಾಗ್ರಹದ ಬಗ್ಗೆ ಉಲ್ಲೇಖಗೊಂಡಿದೆ. ಬಾ.ರಾ.ಗೋಪಾಲ ಅವರ ಚಿತ್ರದುರ್ಗ ಇತಿಹಾಸ ಮತ್ತು ಪುರಾತತ್ವ ಎಂಬ ಗ್ರಂಥದಲ್ಲಿ ಡಾ.ಎಂ.ವಿ.ಶ್ರೀನಿವಾಸಮೂರ್ತಿ ಅವರು ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ ಎಂಬ ಲೇಖನದಲ್ಲಿ ತುರುವನೂರಿನ ಈಚಲುಮರ ಚಳವಳಿ ಅರಣ್ಯ ಸತ್ಯಾಗ್ರಹ ಆಚರಣೆ ಕುರಿತಾಗಿ ವಿವರಿಸಿದ್ದಾರೆ. ಕೊಟಗಿ ಸಿದ್ದಲಿಂಗಪ ಹೋರಾಟದ ನೆನಹು ಸ್ಮರಣ ಸಂಚಿಕೆಯಲ್ಲಿ

ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಮ್ಮೇಳನ ಎಂಬ ಲೇಖನದಲ್ಲಿ ತುರುವನೂರು ಅರಣ್ಯ ಸತ್ಯಾಗ್ರಹ, ವಾರ್ತಪತ್ರಿಕೆ, ಪುಂಡಗಂದಾಯದ ಬಗ್ಗೆ ಉಲ್ಲೇಖಿಸಿದ್ದಾರೆ.

ಎಸ್.ಜಿ.ರಾಮಶೇಖರರಾವ್ ಅವರು ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯಹೋರಾಟದ ಮೊದಲ ಹೆಜ್ಜೆಗಳು ಎಂಬ ಲೇಖನದಲ್ಲಿ ತುರುವನೂರು ಈಚಲು ಮರ ಚಳವಳಿಯಲ್ಲಿ ಪಾಲ್ಗೊಂಡ ರಾಜಶೇಖರಯ್ಯ ಹಿರೇಮಠ, ವಾಸುದೇವರಾವ್, ಬಳ್ಳಾರಿ ಸಿದ್ಧಮ್ಮ, ನಾಗರತ್ನಮ್ಮ ಹಿರೇಮಠ, ತಿಪ್ಪಣ್ಣ, ರಾಮರೆಡ್ಡಿ ಮುಂತಾದವರ ಬಗ್ಗೆ ಉಲ್ಲೇಖವಿದೆ.

ಇದುವರೆಗೂ ನಡೆದ ಅಧ್ಯಯನಗಳನ್ನು ಗಮನಿಸಿದರೆ ತುರುವನೂರಿನ ಬಗ್ಗೆ ಕೇವಲ ಸಂಕ್ಷಿಪ್ತವಾಗಿ, ಪರಿಚಯಾತ್ಮಕವಾಗಿ ತಿಳಿಸಲಾಗಿದೆ. ತುರುವನೂರಿನ ಸ್ಥಳನಾಮ, ಇತಿಹಾಸ, ಸಾಂಸ್ಕೃತಿಕ ಸಂಗತಿಗಳು ನಂಬಿಕೆ, ಆಚರಣೆಗಳನ್ನು ಕುರಿತ ಸಮಗ್ರ ಅಧ್ಯಯನಗಳು ನಡೆದು ಬಂದಿಲ್ಲವೆಂದೇ ಹೇಳಬಹುದು. ಈ ನಿಟ್ಟಿನಲ್ಲಿ ತುರುವನೂರಿನ ಸಮಗ್ರ ಚರಿತ್ರೆಯನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಅಧ್ಯಾಯ ಎರಡು

ಭೌಗೋಳಿಕ ಪರಿಸರ ಮತ್ತು ಇತಿಹಾಸ

ಅಧ್ಯಾಯ ಎರಡು

ಭೌಗೋಳಿಕ ಪರಿಸರ ಮತ್ತು ಇತಿಹಾಸ

ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟಿರುವ ತುರುವನೂರು ಮಧ್ಯ ಕರ್ನಾಟಕದಲ್ಲಿರುವ ಐತಿಹಾಸಿಕ ಪ್ರಾಮುಖ್ಯತೆ ಪಡೆದ ಚಿತ್ರದುರ್ಗದ ತಾಲೂಕಿನ ಒಂದು ಹೋಬಳಿ ಗ್ರಾಮ. ಚಿತ್ರದುರ್ಗದಿಂದ ಉತ್ತರಕ್ಕೆ ೨೨ ಕಿ.ಮೀ. ದೂರಲ್ಲಿದೆ. ಫೆಡರಿಕ್ ಚಾಲ್ಮರ್ಸ್ ಹೇಳಿರುವಂತೆ ತುರುವನೂರು ಕ್ರಿ.ಶ. ೧೭ನೇ ಶತಮಾನದಲ್ಲಿಯೇ ಒಂಬತ್ತು ಗ್ರಾಮ ಮತ್ತು ನಾಲ್ಕು ಕೊಂಪೆಗಳಿಂದ ಕೂಡಿದ ಹೋಬಳಿ ಆಗಿತ್ತು.[೧]

ತುರುವನೂರು ಪೂರ್ವ ರೇಖಾಂಶ ೭೬°೨೬ರಿಂದ, ೧೪°೨೬ ರಲ್ಲಿ ನೆಲೆಗೊಂಡಿದ್ದು, ಸಮುದ್ರ ಮಟ್ಟದಿಂದ ೨೨೫೫ ಅಡಿ ಎತ್ತರವಿದೆ. ಹೋಬಳಿ ಕೇಂದ್ರವಾಗಿರು ವುದರಿಂದ ಇದರ ಆಡಳಿತಕ್ಕೆ ಒಂಬತ್ತು ಗ್ರಾಮ ಪಂಚಾಯಿತ್ತಿಗಳು, ಐವತ್ಮೂರು ಗ್ರಾಮಗಳು ಒಳಪಟ್ಟಿವೆ. ಪ್ರಸ್ತುತ ತುರುವನೂರಿನ ಜನಸಂಖ್ಯೆ ೧೫,೬೮೯ ಇದ್ದು, ಅದರಲ್ಲಿ ಪುರುಷರು ೭೦೭೩, ಮಹಿಳೆಯರು ೬೭೩೬ ಇದೆ. ೨೬೪೯ ಮನೆಗಳಿಂದ ಕೂಡಿದ್ದು, ನಾಡಕಛೇರಿ, ಪೋಲಿಸ್ ಠಾಣೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಮಳೆಮಾಪನ ಕೇಂದ್ರ, ಪದವಿ ಶಿಕ್ಷಣ ಸಂಸ್ಥೆಯನ್ನು ಒಳಗೊಂಡಿದೆ.[೨] ಪ್ರಸ್ತುತ ತುರುವನೂರಿನ ಉತ್ತರಕ್ಕೆ ಕಡಬನಕಟ್ಟೆ, ದಕ್ಷಿಣಕ್ಕೆ ಕೂನಬೇವು, ಪಶ್ಚಿಮಕ್ಕೆ ಬಂಗಾರಕ್ಕನ ಗುಡ್ಡ, ಪೂರ್ವಕ್ಕೆ ದೊಡ್ಡಘಟ್ಟ ಗ್ರಾಮಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ಪ್ರದೇಶಕ್ಕೆ ಚಿತ್ರದುರ್ಗ ಹಾಗೂ ಮುಸ್ಟೂರು ಮಾರ್ಗವಾಗಿರುವ ರಾಜ್ಯ ಹೆದ್ದಾರಿಯಿಂದ ಪ್ರಯಾಣಿಸಬಹುದು.

ಈ ಗ್ರಾಮವು ಹೆಚ್ಚಾಗಿ ಮಳೆಯನ್ನು ಆಶ್ರಯಿಸಿರುತ್ತದೆ. ಈ ಗ್ರಾಮವು ಜನಗಿಹಳ್ಳಕ್ಕೆ ಹೊಂದಿಕೊಂಡಿದ್ದು, ಸುತ್ತಮುತ್ತಲಿನ ಮುದ್ದಾಪುರ, ಚಿಪ್ಪಿನಕೆರೆ, ಕಡಬನಕಟ್ಟೆ, ದೊಡ್ಡಕಟ್ಟೆ ಕೆರೆಗಳಿಗೆ ನೀರುಣಿಸುವ ಮೂಲಕ ಮಾನವನ ಬದುಕಿಗೆ ಉಪಯೋಗವನಿಸಿದೆ.

ಪ್ರಸ್ತುತ ಪ್ರದೇಶವು ಮಳೆಯಾಶ್ರಿತ ಭೂಭಾಗವಾಗಿದ್ದು, ಫಲವತ್ತಾದ ಕಪ್ಪು, ಕೆಂಪು, ಮರಳು, ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಇವು ಉತ್ತಮ ಬೆಳೆ ಬೆಳೆಯಲು ಅನುಕೂಲಕರವಾದ

ಭೂಮಿ ಆಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ. ಅಲ್ಲಿನ ಜೌಗುಮಣ್ಣು, ಸುಣ್ಣದ ಮಣ್ಣು ಅಲ್ಪಪ್ರಮಾಣದಲ್ಲಿದ್ದು ವ್ಯವಸಾಯಕ್ಕೆ ನಿರುಪಯುಕ್ತವಾಗಿದೆ.

ಈ ಪ್ರದೇಶದ ಉಬ್ಬುತಗ್ಗುಗಳ ಸಮತಟ್ಟಾದ ಭೂ ಭಾಗವನ್ನು ಹೊಂದಿದೆ. ಬಂಗಾರಕ್ಕನ ಗುಡ್ಡ, ಗುಹೇಶ್ವರ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿದೆ. ಅಲ್ಲದೆ ಕಪ್ಪುಶಿಲೆಯಿಂದ ಆವೃತಗೊಂಡ ಭೂಭಾಗವಾಗಿದ್ದು, ಶಿಲಾಯುಗದ ಮಾನವನ ವಾಸಕ್ಕೆ ಯೋಗ್ಯವಾದ ನೆಲೆಯಾಗಿದೆ.

ಇಲ್ಲಿನ ವಾಯುಗುಣವು ಉಷ್ಣವಲಯದ ಮಾನ್ಸೂನ್ ಮಾದರಿಯದ್ದಾಗಿದೆ. ಡಿಸೆಂಬರ್‌ನಿಂದ ಫೆಬ್ರವರಿ ತಿಂಗಳಲ್ಲಿ ಅಧಿಕ ಚಳಿಗಾಲವಿದ್ದು, ಆಗ ಉಷ್ಣಾಂಶ ೨೩°ನಷ್ಟು ಇರುತ್ತದೆ. ಈ ಪ್ರದೇಶ ಭಾರತದ ಆಗ್ನೇಯ ಭಾಗದ ಆವರ್ತ ಮಾರುತಗಳಿಂದ ಉಂಟಾಗುವ ಚದುರಿದ ಮಳೆಯನ್ನು ಪಡೆಯುತ್ತದೆ. ಈ ಕಾಲಾವಧಿಯ ಗಾಳಿಯಲ್ಲಿ ತೇವಾಂಶ ಮಟ್ಟ ಹೆಚ್ಚಿರುತ್ತದೆ. ಮಾರ್ಚ್‌ನಿಂದ ಮೇ ತಿಂಗಳ ಅಂತ್ಯದವರೆಗೆ ಬಿಸಿ ಹವಾಗುಣವಿದ್ದು, ಈ ಅವಧಿಯಲ್ಲಿಯೂ ಒಮ್ಮೊಮ್ಮೆ ಅನಿರೀಕ್ಷಿತವಾಗಿಯೂ, ಮಳೆಯು ಆಗುತ್ತಿರುತ್ತದೆ. ಏಪ್ರಿಲ್–ಮೇ ತಿಂಗಳಲ್ಲಿ ೩೫ ಡಿಗ್ರಿ ಗರಿಷ್ಠ ಉಷ್ಣಾಂಶವಿರುತ್ತದೆ. ಪ್ರಸ್ತುತ ಪರಿಸರದಲ್ಲಿ ಸರಾಸರಿ ಮಳೆಯ ಪ್ರಮಾಣವು ೪೫೦ ರಿಂದ ೫೫೦ ಮೀ.ಮೀ. ಕಂಡುಬರುತ್ತದೆ.[೩] ತುರುವನೂರು ೧೮,೬೮೭–೦೧ ಹೆಕ್ಟೇರ್ ಭೂಪ್ರದೇಶವನ್ನು ಒಳಗೊಂಡಿದ್ದು, ಸಾಮಾನ್ಯವಾಗಿ ಮಳೆ ಆಶ್ರಿತ ಭೂಭಾಗವಾಗಿದೆ. ಇದರಲ್ಲಿ ೧೫,೫೪೬ ಹೆಕ್ಟೇರ್ ಸಾಗುವಳಿಗೆ ಒಳಪಟ್ಟಿದೆ.

ಮಳೆಯಾಶ್ರಿತ ಮತ್ತು ಅಂತರ್ಜಲ ಸಹಾಯದಿಂದ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತದೆ. ಹೆಚ್ಚಾಗಿ ಬೆದ್ದಲು ಭೂಮಿಯಾಗಿದ್ದು, ನೆಲಗಡಲೆ, ಹತ್ತಿ, ಸೂರ್ಯಕಾಂತಿ, ಉದ್ದು, ತೊಗರಿ, ಕಡಲೆ, ಹೆಸರು, ಮೆಕ್ಕೆಜೋಳ, ಜೋಳ, ರಾಗಿ, ಈರುಳ್ಳಿ, ಕನಕಾಂಬರ, ಸೇವಂತಿ ಮೊದಲಾದ ಬೆಳೆಯನ್ನು ನೀರಾವರಿಗೆ ಒಳಪಟ್ಟ ಭೂಮಿಯಲ್ಲಿ ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು, ಪಪ್ಪಾಯಿ, ದಾಳಿಂಬೆ ಬೆಳೆಯಲಾಗುತ್ತದೆ.

ತುರುವನೂರಿನ ಅರಣ್ಯ ಸಂಪತ್ತು ಈ ಪ್ರದೇಶ ಬಯಲು ಸೀಮೆ ಆಗಿರುವುದರಿಂದ ದಟ್ಟವಾದ ಅರಣ್ಯಗಳಿಂದ ಕೂಡಿಲ್ಲ. ಇಲ್ಲಿ ಕುರುಚಲು ಗಿಡಗಳು, ಪೊದೆಗಳು, ಈಚಲುಮರ, ಹುಣಸೆಮರ, ಮಾವಿನಮರ, ಬೇವಿನಮರ, ಹಿಪ್ಪೆಮರ, ಬ್ಯಾಲದಮರ, ತೇಗದಮರ, ನೀಲಗಿರಿ, ದಿಂಡಿಗ, ಎಕ್ಕೆ, ತಂಗಡಿಕೆ, ಬಂದರಿಕೆ, ತುಳಸಿ, ತುಂಬೆಯಂತಹ ಸಸ್ಯ ಜಾತಿಯು ಕಂಡುಬರುತ್ತದೆ. ತುರುವನುರಿನಲ್ಲಿ ಪ್ರಮುಖವಾಗಿ ಭೂಗುಡ್ಡ ಅರಣ್ಯದಲ್ಲಿ ಕತ್ತೆ, ಕಿರುಬ, ಕರಡಿ, ಕಾಡಂದಿ, ಜಿಂಕೆ, ನರಿ, ತೋಳ, ಮೊಲ, ಕಾಡುಬೆಕ್ಕು, ಅಳಿಲು, ನವಿಲು, ಮಂಗಗಳು ಕಂಡುಬರುತ್ತವೆ. ಊರೊಳಗೆ ಎತ್ತು, ಹಸು, ನಾಯಿ, ಎಮ್ಮೆ, ಕೋಣಗಳಿದ್ದು, ಹಸುಗಳು ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖವಾಗಿದ್ದು ರೈತರ ಒಂದು ಮುಖ್ಯ ಕಸುಬು ಕೃಷಿಯೊಡನೆ ಪಶುಸಂಗೋಪನೆ ನೆರವಾಗಿದೆ.

೨.೨. ಇತಿಹಾಸ

ಮಾನವನ ಇತಿಹಾಸ ಕುರಿತು ಅಧ್ಯಯನ ಮಾಡುವಾಗ ಇತಿಹಾಸವನ್ನು ಪ್ರಾಗೈತಿಹಾಸ ಕಾಲ ಮತ್ತು ಇತಿಹಾಸಕಾಲವೆಂದು ವಿಂಗಡಿಸಲಾಗಿದೆ. ಲಿಖಿತ ಆಧಾರಗಳಿಲ್ಲದಿರುವುದು ಪ್ರಾಗೈತಿಹಾಸ, ಲಿಖಿತ ದಾಖಲೆಗಳು ಇರುವುದು ಇತಿಹಾಸ ಕಾಲ. ಮಾನವನು ಈ ಎರಡೂ ಕಾಲಮಾನಗಳಲ್ಲೂ ತನ್ನದೇಯಾದ ದಾಖಲೆಗಳನ್ನು ಬಿಟ್ಟು ಹೋಗಿರುವುದರಿಂದ ಚರಿತ್ರೆಗೆ ಪ್ರಾಗಿತಿಹಾಸದಿಂದ ಕೊಡುಗೆ ನೀಡುತ್ತಾ ಬಂದಿದ್ದಾನೆ. ಇಂತಹ ಮಾನವನ ಕುರುಹುಗಳು ಕರ್ನಾಟಕದಾದ್ಯಂತ ಕಂಡುಬಂದಿವೆ. ಸಂಶೋಧಕರು ಅವುಗಳನ್ನು ಸ್ಥಳೀಯ ಹಂತದಿಂದಲೂ ಶೋಧಿಸಿ ಅಧ್ಯಯನ ಕೈಗೊಂಡು ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ.

ಪ್ರಾಗಿತಿಹಾಸ ಕಾಲ

ಆದಿಮಾನವನು ಮೊದಲು ಅಲೆಮಾರಿಯಾಗಿ ನೀರಿನ ಸೆಲೆಯನ್ನು ಆಶ್ರಯಿಸಿ ಬೇಟೆ, ಆಹಾರ ಸಂಗ್ರಹಣೆಗಾಗಿ ಶಿಲೆ, ಲೋಹ, ಮರ, ಮೂಳೆಗಳ ಉಪಕರಣಗಳನ್ನು ಬಳಸಲಾರಂಭಿಸಿದನು. ಹಾಗಾಗಿ ಈ ಕಾಲವನ್ನು ಪ್ರಾಗಿತಿಹಾಸ ಕಾಲವೆಂದು ಕರೆಯಲಾಗಿದೆ. ಚಿತ್ರದುರ್ಗ ಜಿಲ್ಲೆಯು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ವಾಸದ ನೆಲೆಯಾಗಿದ್ದು, ಜಿಲ್ಲೆಯಲ್ಲಿ ಹಳೆ ಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ನೆಲೆಗಳು ಕಂಡುಬಂದಿವೆ. ಅಧ್ಯಯನಕ್ಕೆ ಒಳಪಟ್ಟಿರುವ ತುರುವನೂರು ಗ್ರಾಮವು ಪ್ರಾಗಿತಿಹಾಸ ಮಾನವನ ನೆಲೆ. ಚಂದ್ರವಳ್ಳಿ ಹಾಗೂ ಬ್ರಹ್ಮಗಿರಿಗಳಲ್ಲಿ ನಡೆದ ಉತ್ಖನನಗಳು ಈ ನೆಲೆಯ ಮಹತ್ವವನ್ನು ಹೆಚ್ಚಿಸಿವೆ.

ಅಧ್ಯಯನದ ದೃಷ್ಟಿಯಿಂದ ಪ್ರಾಗಿತಿಹಾಸವನ್ನು ಹಳೆಶಿಲಾಯುಗ ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಎಂದು ವರ್ಗೀಕರಿಸಲಾಗಿದೆ. ಹಳೆ ಶಿಲಾಯುಗದ ನೆಲೆಗಳು ಕರ್ನಾಟಕದಲ್ಲಿ ಹುಣಸಗಿ, ನಿಟ್ಟೂರು, ಯಾಡಿಯಪುರ, ಧಾಣಕಶಿರೂರು, ಬೈಚಬಾಳ, ಮೇಣಸಗಿ, ಚಿತ್ರದುರ್ಗದಲ್ಲಿ ಕಂಡುಬಂದಿವೆ. ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ೧೮೭೩ರಲ್ಲಿ ರಾಬರ್ಟ್ ಬ್ರೂಸಫೂಟರು ತಾಳ್ಯ ಹಾಗೂ ಜಾನಕಲ್ಲಿನಲ್ಲಿ ಹಳೆ ಶಿಲಾಯುಗದ ಆಯುಧಗಳನ್ನು ಪತ್ತೆ ಮಾಡಿದ್ದಾರೆ. ಕೆಲವು ಆಯುಧಗಳು ಗುಜರಾತ್ ಹಾಗೂ ಅತ್ತಿರಪಕ್ಕಂ ಮಾದರಿಯಲ್ಲಿದ್ದುದು ತಿಳಿದುಬಂದಿದೆ.[೪] ನಾಗರಾಜಪ್ಪ ಎಸ್. ಅವರು ಗೊಡಬನಾಳುವಿನ ಕಳ್ಳಳ್ಳಿ ದಿಬ್ಬದಲ್ಲಿ ಮಚ್ಚುಕತ್ತಿ ಅಂಡಕಾರದ ಆಯುಧವನ್ನು ಪತ್ತೆ ಮಾಡಿರುವರು.[೫] ರಾಮದಾಸರೆಡ್ಡಿಯವರು ಯಾದಲಗಟ್ಟೆ ಪರಿಸರದಲ್ಲಿ ಚಕ್ಕೆ ತೆಗೆದ ಕಲ್ಲಿನ ಆಯುಧವನ್ನು ಪತ್ತೆ ಮಾಡಿರುವರು.[೬] ತುರುವನೂರು ಪರಿಸರದ ಕೂನಬೇವುನಲ್ಲಿ ಹಳೆಶಿಲಾಯುಗದ ಆಯುಧವನ್ನು

ಕೆ.ಶರತ್‌ಬಾಬು, ಎಸ್.ನಾಗರಾಜಪ್ಪನವರು ಪತ್ತೆ ಮಾಡಿರುವರು.[೭] ಇದರಿಂದಾಗಿ ಹಳೆ ಶಿಲಾಯುಗದ ಮಾನವನು ತುರುವನೂರು ಪರಿಸರಕ್ಕೂ ವ್ಯಾಪಿಸಿರುವುದು ದೃಢಪಟ್ಟಿದೆ. ಈ ಯುಗದ ಕಾಲಮಾನ ೧,೭೪,೦೦೦-೩೫,೦೦೦ ವರ್ಷಗಳು.[೮]

ಸೂಕ್ಷ್ಮಶಿಲಾಯುಗವು ಹಳೆ ಶಿಲಾಯುಗ ಹಾಗೂ ನವಶಿಲಾಯಗದ ನಡುವಿನ ಹಂತವಾಗಿದೆ. ಜೀವನ ನಿರ್ವಹಣೆಗಾಗಿ ಈ ಹಂತದ ಮಾನವನು ಹರಿತವುಳ್ಳ ಅತಿ ಸಣ್ಣ ನೀಳ ಅಲಗುಗಳನ್ನು ಬಳಸಿದನು. ಈ ಆಯುಧಗಳು ಸೂಕ್ಷ್ಮವಾಗಿದ್ದುದರಿಂದ ಇದನ್ನು ಸೂಕ್ಷ್ಮಶಿಲಾಯುಗ ಎಂದು ಕರೆಯಲಾಗಿದೆ. ಕರ್ನಾಟಕದಲ್ಲಿ ರಾಯಚೂರಿನಲ್ಲಿ ೧೮೪೨ರಲ್ಲಿ ಪ್ರಿಮ್‌ರೋಸ್ ಸೂಕ್ಷ್ಮ ಶಿಲಾಯುಧವನ್ನು ಮೊದಲು ಪತ್ತೆ ಮಾಡಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಮಹಾದೇವಪುರ, ಹಾನಗಲ್ಲು, ದೊಡ್ಡೇರಿ, ನುಂಕಿಮಲೆ, ಚಿಕ್ಕೆನಹಳ್ಳಿ ಮೊದಲಾದ ಕಡೆ ಸೂಕ್ಷ್ಮ ಶಿಲೋಪಕರಣಗಳು ಕಂಡುಬಂದಿವೆ. ಈ ಕಾಲದ ಮಾನವ ಚರ್ಟ್, ಅಗೇಟ್, ಕ್ವಾರ್ಟ್‌ಜೈಟ್ ಪ್ರಶಸ್ತ ಶಿಲೆಗಳಿಂದ ತಯಾರಾದ ಬೈರಿಗೆ, ಬಾಣ, ಗಾಳ, ಮೊನಚುಗಳನ್ನು ಆಯುಧಗಳಾಗಿ ಉಪಯೋಗಿಸುತ್ತಿದ್ದರು. ತುರುವನೂರು ಪರಿಸರದ ಸಂಗೇನಹಳ್ಳಿಯಲ್ಲಿ ಸೂಕ್ಷ್ಮಶಿಲಾಯುಗದ ಆವಶೇಷಗಳು ಕಂಡುಬಂದಿವೆ. ಇದರಿಂದ ಸೂಕ್ಷ್ಮಶಿಲಾಯುಗದ ಸಂಸ್ಕೃತಿ ತುರುವನೂರು ಪರಿಸರಕ್ಕೂ ವ್ಯಾಪಿಸಿದ್ದುದು ಸ್ಪಷ್ಟವಾಗುತ್ತದೆ. ಇದರ ಕಾಲಮಾನ ೨೦ರಿಂದ ೪೦,೦೦೦ ವರ್ಷಗಳೆಂದು ತಿಳಿಯುತ್ತದೆ.[೯]

ನೂತನ ಶಿಲಾಯುಗವು ಕಲ್ಲನ್ನು ನಯವಾಗಿ ಉಜ್ಜಿ ತಯಾರಿಸಿದ ಆಯುಧಗಳು ಕೃಷಿ, ಪಶುಪಾಲನೆಯನ್ನು ಪ್ರತಿನಿಧಿಸುವಂತದ್ದು. ಈ ಕಾಲದ ಮಾನವ ನದಿಮುಖಜ ಭೂಮಿ, ಗುಹೆ, ಬಂಡೆಗಳ ಇಳಿಜಾರು, ಕೆರೆ-ಹಳ್ಳಗಳ ದಂಡೆ, ಬಯಲು ಪ್ರದೇಶದಲ್ಲಿ ವಾಸವಾಗಿದ್ದ. ಕರ್ನಾಟಕ ಕೊಡೆಕಲ್ ತೆರೆದಾಳ, ಮಸ್ಕಿ, ಬ್ರಹ್ಮಗಿರಿ, ಚಂದ್ರವಳ್ಳಿ, ತೆಕ್ಕಲಕೋಟೆ, ಹಳ್ಳೂರು, ಹೆಮ್ಮಿಗೆ, ಚಿತ್ರದುರ್ಗದಲ್ಲಿ ಈ ಕಾಲದ ಅವಶೇಷಗಳು ಲಭ್ಯವಾಗಿವೆ. ತುರುವನೂರು ಪರಿಸರದ ಸಂಗೇನಹಳ್ಳಿಯಲ್ಲಿ ನಯಗೊಳಿಸಿದ ಕೈಗೊಡಲಿ, ಸ್ವಸ್ತಿಕ ಚಿಹ್ನೆ ಚಿತ್ರದ ಮಡಕೆ ಚೂರುಗಳು, ಕೆರೆದಂಡೆ ಬಳಿಯ ರೇಖಾಚಿತ್ರಗಳನ್ನು ಲಕ್ಷ್ಮಣ್ ತೆಲಗಾವಿ, ಡಾ.ಎಸ್.ವೈ.ಸೋಮಶೇಖರ್ ಅವರು ಬೆಳಕಿಗೆ ತಂದಿದ್ದಾರೆ.[೧೦] ಕೂನಬೇವುನಲ್ಲಿ ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಯನ್ನು ಶರತ್‌ಬಾಬು ಕೆ.ಎಸ್.ನಾಗರಾಜಪ್ಪ, ಪತ್ತೆ ಮಾಡಿದ್ದು[೧೧] ಗಮನಾರ್ಹವಾಗಿದೆ. ನೂತನ ಶಿಲಾಯುಗ ತುರುವನೂರು ಪರಿಸರಕ್ಕೂ ವ್ಯಾಪಿಸಿದ್ದುದು ಈ ಕುರುಹುಗಳ ಆಧಾರದಿಂದ ನೂತನ ಶಿಲಾಯುಗದ ಕಾಲಮಾನ ಕ್ರಿ.ಪೂ. ೨೩೦೦-೧೮೦೦ ಎಂದು ತಿಳಿಯಬಹುದು.[೧೨]

ಬೃಹತ್ ಶಿಲಾಯುಗ

ಬೃಹತ್‌ಗಾತ್ರದ ಶಿಲೆಯನ್ನು ಬಳಸಿಕೊಂಡು ವಿವಿಧ ನಮೂನೆಯ ಸಮಾಧಿಗಳನ್ನು ನಿರ್ಮಾಣ ಮಾಡಲು ಪ್ರಾರಂಭಿಸಿದುದರಿಂದ ಇದನ್ನು ಬೃಹತ್ ಶಿಲಾಯುಗವೆನ್ನುವರು. ಈ

ಯುಗದ ಜನರು ಕಬ್ಬಿಣದ ಅದಿರನ್ನು ಉಪಯೋಗಿಸಿಕೊಂಡು ಆಯುಧಗಳನ್ನು ತಯಾರಿಸಿದ್ದರಿಂದ ಕಬ್ಬಿಣ ಯುಗವೆಂತಲೂ ಕರೆಯಲಾಗಿದೆ.[೧೩] ಕರ್ನಾಟಕದಲ್ಲಿ ಮೊದಲಬಾರಿಗೆ ಮಡೋಸ್ ಟೇಲರ ಗುಲ್ಬರ್ಗ, ಬಳ್ಳಾರಿ, ರಾಯಚೂರಿನಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳನ್ನು ಶೋಧಿಸಿದರು. ೧೮೭೧-೧೮೭೬ರಲ್ಲಿ ರಾಬರ್ಟ್‌ಬ್ರೂಸಫೂಟ ತಾಳ್ಯ, ಚಂದ್ರವಳ್ಳಿಯಲ್ಲಿ ಬೃಹತ್ ಶಿಲಾ ಸಮಾಧಿಗಳನ್ನು ಪತ್ತೆ ಮಾಡಿದ್ದಾರೆ. ಕಲ್ಲು ಚಪ್ಪಡಿಗಳು, ಬೆಟ್ಟಗುಡ್ಡಗಳ ಸಮತಟ್ಟು, ಇಳಿಜಾರು ಪ್ರದೇಶಗಳಲ್ಲಿ ಬೃಹತ್ ಶಿಲಾ ನೆಲೆಗಳು ಕಂಡುಬಂದಿವೆ. ಕರ್ನಾಟಕದಲ್ಲಿ ಸಂಗನಕಲ್ಲು, ಬ್ರಹ್ಮಗಿರಿ, ಚಂದ್ರವಳ್ಳಿ, ಮಸ್ಕಿ, ರಾಜನಕೋಳೂರು, ಬನಹಳ್ಳಿ, ತೆರದಾಳ ಹೇರಳವಾಗಿ ಕಬ್ಬಿಣದ ನಿಕ್ಷೇಪವಿರುವ, ಆಭರಣದ ಮಣಿಗಳನ್ನು ತಯಾರಿಸುವ ಆಗೇಟ್, ಚಾಲ್ಸಿಡೋನ್, ಕಾರ್ನೇಲಿಯ, ಜಾಸ್ಪರ್ ಶಿಲೆಗಳು ದೊರೆಯುವಲ್ಲಿ ಬೃಹತ್ ಶಿಲಾಗೋರಿಗಳಿವೆ.[೧೪] ಇಲ್ಲಿನ ಜನರು ಶಿಲೆಗಿಂತ ಕಬ್ಬಿಣವನ್ನು ಹೆಚ್ಚು ಆಯುಧವಾಗಿ ಬಳಸಿಕೊಂಡು ಬೃಹತ್ ಬಂಡೆ ಉರುಳಿಸಲು, ಮರ ಕಡಿಯಲು ಬಳಸುತ್ತಿದ್ದರೇ ವಿನಃ ವಸತಿಗಲ್ಲ. ಬೃಹತ್ ಬಂಡೆಗಳಿಂದ ಸಮಾಧಿಗಳನ್ನು ನಿರ್ಮಿಸುವುದೇ ಮಾನವನ ಕಲೆ. ಅಂತಹ ಬೃಹತ್ ಶಿಲಾಯುಗದ ಸಮಾಧಿಗಳು ಅನೇಕ ವಿಧಗಳಲ್ಲಿ ಕಂಡುಬಂದಿವೆ. ಅವುಗಳೆಂದರೆ

೧. **ಗುಹಾಂತರ ಸಮಾಧಿಗಳು:** ಇದರಲ್ಲಿ ನಾಲ್ಕು ವಿಧಗಳು.

* ಕಂಬವಿರುವ ಗುಹಾಂತರ ಸಮಾಧಿಗಳು
* ಕಂಬವಿಲ್ಲದ ಗುಹಾಂತರ ಸಮಾಧಿಗಳು
* ಮುಚ್ಚಳವಿರುವ ಸಮಾಧಿಗಳು
* ಕೋಣೆಯ ಸಮಾಧಿಗಳು

೨. **ವುಡ್‌ಸ್ಟೋನ್ ಮತ್ತು ಟೋಪಿಕಲ್ಲು ಸಮಾಧಿಗಳು:** ಇವುಗಳಲ್ಲಿ ಎರಡು ವಿಧಗಳು.

* ಕುಳಸಮಾಧಿ: ಮೇಲೆ ವುಡ್‌ಸ್ಟೋನ್ ಮತ್ತು ಟೋಪಿಕಲ್ಲಿದ್ದು ನೆಲದ ಅಡಿಯಲ್ಲಿ ಮಾಡಿರುವ ಶವಸಂಸ್ಕಾರ ವೃತ್ತಾಕಾರದಲ್ಲಿರುತ್ತದೆ.
* ಆಯತಾಕಾರದ ವುಡ್‌ಸ್ಟೋನ್ ಮತ್ತು ಟೋಪಿಕಲ್ಲು ಸಮಾಧಿ

೩. **ನಿಲಸುಗಲ್ಲುಗಳು:** ಇದರಲ್ಲಿ ೩ ವಿಧಗಳು.

* ನಿಲಸುಕಲ್ಲು
* ಸಾಲಾಗಿ ನಿಲ್ಲಿಸಿದ ನಿಲಸುಕಲ್ಲುಗಳು
* ಎರಡು ಬದಿಗೆ ನಿಲ್ಲಿಸಿದ ಕಲ್ಲುಗಳು

೪. ಡಾಲ್‌ಮನೈಡ್ ಸಿಸ್ಟ್: ದೊಡ್ಡ ಕಲ್ಲುಗಳನ್ನು ವೃತ್ತಾಕಾರದಲ್ಲಿಟ್ಟು ಅದರ ಮಧ್ಯೆ ಅಂತರ್ಗತ ಶವಪೆಟ್ಟಿಗೆ ನಿರ್ಮಿಸಲಾಗಿರುತ್ತದೆ. ಇದರಲ್ಲಿ ೨ ವಿಧಗಳು.

* ಕಿಂಡಿಕೋಣೆ ಅಥವಾ ಹಾದಿಕೋಣೆ

* ಕಿಂಡಿಕೋಣೆ ಇಲ್ಲದ ಅಂತರ್ಗತ ಶವಪೆಟ್ಟಿಗೆಗಳು

೫. ಕೈರೆನ್ ವೃತ್ತಗಳು: ದೊಡ್ಡ ದೊಡ್ಡ ಕಲ್ಲುಗಳನ್ನು ವೃತ್ತಾಕಾರದಲ್ಲಿಟ್ಟು ಅದರ ಮಧ್ಯೆ ಚಿಕ್ಕ ಚಿಕ್ಕ ಕಲ್ಲುಗಳನ್ನು ನೆಟ್ಟಿರುತ್ತಾರೆ. ಇದನ್ನು ಅಗೆದಾಗ ಅಂತರ್ಗತ ಶವಪೆಟ್ಟಿಗೆ, ಇಲ್ಲವೆ ಶವಕುಳಿ, ಅರ್ನ್‌ಬರಿಯಲ್ ಲಭಿಸುತ್ತವೆ. ಇದರಲ್ಲಿ ೩ ವಿಧಗಳು

* ಶವಕುಳಿ

* ಸ್ಯಾರ್ಕೋಫೋಗಾಸ್

* ಅರ್ನ್‌ಬರಿಯಲ್

೬. ಕಲ್ಲಿನ ವೃತ್ತಗಳು: ದೊಡ್ಡಕಲ್ಲುಗಳ ವೃತ್ತವಾಗಿದೆ. ಇದರಲ್ಲಿ ಮೂರು ವಿಧಗಳು.

* ಶವಕುಳಿ

* ಸ್ಯಾರ್ಕೋಫೋಗಾಸ್

* ಅರ್ನ್‌ಬರಿಯಲ್

೭. ಶವಕುಳಿ ಸಮಾಧಿ: ಇದರಲ್ಲಿ ಭೂಮಿಯ ಮೇಲೆ ಏನು ಕಾಣುವುದಿಲ್ಲ. ನೆಲದಲ್ಲಿ ಅರ್ನ್‌ಬರಿಯಲ್ ಇರುತ್ತದೆ. ಇದನ್ನು ಅಗೆದಾಗ ಶವಕುಳಿ ಸಮಾಧಿ ಕಂಡುಬರುತ್ತದೆ.

೮. ಬ್ಯಾರೋಸ್: ವೃತ್ತ, ಆಯತ, ಚೌಕಾಕಾರದ ಮಣ್ಣಿನ ದಿಬ್ಬವಿದ್ದು, ಅದರಡಿಯಲ್ಲಿನ ಶವಸಂಸ್ಕಾರ. ಕರ್ನಾಟಕದಲ್ಲಿ ಬೃಹತ್ ಶಿಲಾಸಂಸ್ಕೃತಿಯಲ್ಲಿ ಏಳು ರೀತಿಯ ಸಮಾಧಿಗಳು ಕಂಡುಬರುತ್ತವೆ. ಅವುಗಳೆಂದರೆ,

* ಹಾದಿಕೋಣೆಗಳು

* ಕಿಂಡಿಕೋಣೆಗಳು

* ಕಲ್ಲುವೃತ್ತಗಳು

* ಚಕ್ಕೆಕಲ್ಲುಗಳು ತುಂಬಿದ ಕಲ್ಲುವೃತ್ತಗಳು

* ವರ್ತುಲಗಡ್ಡೆಗಳು

* ಶವಕುಣಿಗಳು

* ನಿಲುಸುಗಲ್ಲುಗಳು

ಚಿತ್ರದುರ್ಗದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಅನೇಕ ನೆಲೆಗಳು ಶೋಧನೆಗೊಂಡಿವೆ. ೧೯೪೭-೪೮ರಲ್ಲಿ ಮಾರ್ಟಿಮರ್ ವ್ಹೀಲರ್ ಬ್ರಹ್ಮಗಿರಿಯಲ್ಲಿ ೧೦ ಗೋರಿಗಳನ್ನು ಶೋಧಿಸಿದ್ದಾರೆ. ಅದರಲ್ಲಿ ಶವಕುಳಿ ಹಾಗೂ ಕಲ್ಲುವೃತ್ತ ಗೋರಿಗಳು ಕಂಡುಬಂದಿವೆ. ಅವುಗಳಲ್ಲಿ ಹೊಳಪಿನ ಕಪ್ಪು-ಕೆಂಪು, ಕೆಂಪು, ಕಪ್ಪು ವರ್ಣದ ಬೋಗಣಿ, ಆಲಿಕೆಯಂತ ಪಾತ್ರೆ, ವಿವಿಧ ಆಕಾರದ ಮಡಕೆಗಳು ಲಭ್ಯವಾಗಿವೆ. ೧೯೭೭-೭೮ರಲ್ಲಿ ಚಂದ್ರವಳ್ಳಿಯಲ್ಲಿ ಉತ್ಖನನದಿಂದ ಬೃಹತ್ ಶಿಲಾ ಸಂಸ್ಕೃತಿಯನ್ನು ಗುರುತಿಸಲಾಗಿದೆ.[೧೫] ತುರುವನೂರು ಪರಿಸರದ ಕೂನಬೇವು, ನರೇನಹಾಳ, ಹಿರೆಕಬ್ಬಿಗೆರೆ, ಚಿಕ್ಕಕಬ್ಬಿಗೆರೆ, ಬೆಳಗಟ್ಟಗಳಲ್ಲಿ ಡಾ.ಎಸ್.ವೈ.ಸೋಮಶೇಖರ್ ಹಾಗೂ ಡಾ.ಎಸ್.ತಿಪ್ಪೇಸ್ವಾಮಿ ನೂರಾರು ಬೃಹತ್ ಶಿಲಾಗೋರಿಗಳನ್ನು ಪತ್ತೆ ಮಾಡಿರುವರು.[೧೬]

ತುರುವನೂರಿನ ಬೃಹತ್ ಶಿಲಾಗೋರಿಗಳು

ಚಿತ್ರದುರ್ಗ ತಾಲೂಕಿನ ತುರುವನೂರು ಬೃಹತ್‌ಶಿಲಾಗೋರಿಯನ್ನು ಒಳಗೊಂಡಿದ್ದು, ಪ್ರಾಗಿತಿಹಾಸ ಕಾಲದ ಮಾನವನ ಪಟುವಟಿಕೆಯ ತಾಣವೆನಿಸಿದೆ. ಈ ನೆಲೆಗಳನ್ನು ಸ್ಥಳೀಯರು ಮೋರಿಯರಕಲ್ಲು, ಮೋರಿಯರ ಮಟ್ಟಿ ಎನ್ನುತ್ತಾರೆ. ಇಲ್ಲಿನ ಶಿಲಾಗೋರಿಗಳು ಬಹುತೇಕವಾಗಿ ಕೈರೇನ್ ವೃತ್ತ ಮಾದರಿಯಲ್ಲಿವೆ. ದೊಡ್ಡ ದೊಡ್ಡದಾದ ಬಂಡೆಗಳನ್ನು ವೃತ್ತಾಕಾರದಲ್ಲಿಟ್ಟು ಅದರ ಮಧ್ಯದಲ್ಲಿ ಚಿಕ್ಕ ಚಕ್ಕೆಗಳನ್ನು ಇಟ್ಟಿರುವುದೇ ಕೈರೇನ್ ವಿಧಾನ. ಇಲ್ಲಿನ ವೃತ್ತ ಗೋರಿಗಳ ರಚನೆಗೆ ಸ್ಥಳೀಯವಾದ ಕೆಂಪು ಮಿಶ್ರಿತ ಕಣಶಿಲೆ, ಕಪ್ಪುಶಿಲೆ ಬಳಸಿರುವರು. ತುರುವನೂರಿನಿಂದ ದೊಡ್ಡಘಟ್ಟಕ್ಕೆ ಹೋಗುವ ಮಾರ್ಗದ ಮೂಕಬಸಪ್ಪ ದೇವಾಲಯ ಮುಂಭಾಗದ ಆಳೂರು ನಿಂಗಪ್ಪನವರ ಜಮೀನಿನಲ್ಲಿ ಶಿಲಾಗೋರಿಗಳಿವೆ. ೨೪x೨೧ ಅಡಿ ಉದ್ದಳತೆ ಹೊಂದಿವೆ. ಈಗಾಗಲೇ ಬೃಹತ್ ಶಿಲಾ ಸಮಾದಿಗಳು ರೈತರು ದನಗಳ ಹಾವಳಿಯಿಂದ ನಾಶಗೊಳ್ಳುತ್ತಿವೆ.

ಮತ್ತೊಂದು ನೆಲೆಯು ಗ್ರಾಮದ ಗಂಗಾಧರೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿದೆ. ಇದನ್ನು ಸ್ಥಳೀಯರು ಮೋರಿಯರ ಕಲ್ಲು, ಮೋರಿಯರ ಮಟ್ಟಿ ಎನ್ನುತ್ತಾರೆ. ಪ್ರಸ್ತುತ ದಿನದಲ್ಲಿ ಆಧುನಿಕ ಕಾಲದ ಸ್ಮಶಾನದ ನೆಲೆಯಾಗಿದೆ. ಗ್ರಾಮದಿಂದ ಅರ್ಧ ಕಿ.ಮೀ.ದೂರದ ಎತ್ತರದ ಪ್ರದೇಶದಲ್ಲಿ ಕಂಡುಬಂದಿದೆ. ಈ ನೆಲೆಯ ಸಮಾಧಿಗಳು ವೃತ್ತಾಕಾರದಲ್ಲಿ ಬೃಹತ್ ಗಾತ್ರದ ಬಂಡೆಗಳಿಂದ ಸುತ್ತುವರಿಯಲ್ಪಟ್ಟಿವೆ. ಅದರಲ್ಲಿ ಮೂರು ಗೋರಿಗಳು ತ್ರಿಭುಜಾಕಾರದ ರಚನೆಯು ಮಧ್ಯದಲ್ಲಿರುವಂತೆ ಕಂಡುಬಂದಿದೆ. ಇವು ೨೩x೨೨ ಅಡಿವ್ಯಾಸ ಮತ್ತು ೧೨x೧೨ ಅಡಿ ವ್ಯಾಸದ ಸುತ್ತಳತೆ ಒಳಗೊಂಡಿವೆ. ತುರುವನೂರಿನ ನೆಲೆಯನ್ನು ಮೊದಲಬಾರಿಗೆ ೧೯೪೮-೫೬ರಲ್ಲಿ ಮೈಸೂರು ಪುರಾತತ್ವ ಇಲಾಖೆಯು ಅಧ್ಯಯನ ಕೈಗೊಂಡು ಹೊಳಪಿನ ಕೆಂಪು

ಬಣ್ಣದ ಮಡಕೆ ಚೂರುಗಳು ಮಣಿಗಳು, ಕಲ್ಲಿನ ಆಯುಧಗಳನ್ನು ಪತ್ತೆ ಮಾಡಿದ್ದಾರೆ. ಇದರಿಂದಾಗಿ ತುರುವನೂರಿನ ಬೃಹತ್ ಶಿಲಾಯುಗದ ಕಾಲಮಾನ ಕ್ರಿ.ಪೂ.೧೪೦೦ರಿಂದ ಕ್ರಿ.ಶ.೨೦೦.

ಇತಿಹಾಸ ಕಾಲ

ಇತಿಹಾಸ ಎಂದರೆ, ಹೀಗೆ ಇತ್ತಂತೆ, ಹೀಗೆ ನಡೆದಿತ್ತಂತೆ ಎಂಬ ವೃತ್ತಾಂತವಾಗಿರದೇ, ಯೋಚಿಸಲಾದ ವಿಷಯ ಹಾಗೂ ಘಟನೆಗಳ ದಾಖಲೆಯೇ ಇತಿಹಾಸ" ಎಂದು ಕ್ಲೈಡ್ ಮತ್ತು ಬಿಯರ್ಸ್ ಅಭಿಪ್ರಾಯಪಟ್ಟಿದ್ದಾರೆ.[೧೭] ಕರ್ನಾಟಕದಲ್ಲಿ ಮೌರ್ಯರು ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಯಲ್ಲಿ ಶಾಸನಗಳನ್ನು ಹಾಕಿಸುವ ಮುಖಾಂತರ ಇತಿಹಾಸ ಕಾಲಕ್ಕೆ ಅಡಿಪಾಯ ಹಾಕಿದರು. ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಟಿಪ್ಪು-ಹೈದರಾಲಿ, ಪಾಳೆಯಗಾರರು ಆಳ್ವಿಕೆ ನಡೆಸಿ, ಶಾಸನಗಳು ಮತ್ತು ಕೆಲವು ಪುರಾತತ್ವ ಆಕರ ಅವಶೇಷಗಳನ್ನು ಬಿಟ್ಟು ಹೋಗಿದ್ದಾರೆ. ಇವುಗಳನ್ನು ಅಧ್ಯಯನ ಮಾಡುವ ಮೂಲಕ ಸ್ಥಳೀಯ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

ಮೌರ್ಯರು

ಕರ್ನಾಟಕದಲ್ಲಿ ಇತಿಹಾಸ ಆರಂಭವಾಗುವುದು ಸದ್ಯ ನಮಗೆ ತಿಳಿದಿರುವಂತೆ ಕ್ರಿ.ಪೂ.ನಾಲ್ಕು ಮತ್ತು ಮೂರನೇ ಶತಮಾನಗಳಿಂದ.[೧೮] ಕರ್ನಾಟಕದ ಬಹುಭಾಗ ಮೌರ್ಯ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದಿತು. ಚಿತ್ರದುರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಗುಲ್ಬರ್ಗಾಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ. ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರಗಳಲ್ಲಿ ಅಶೋಕನ ಶಾಸನಗಳು ಮೌರ್ಯ ಸಾಮ್ರಾಜ್ಯದ ಆಳ್ವಿಕೆಯನ್ನು ಕುರಿತಾಗಿ ತಿಳಿಸುತ್ತವೆ. ಹೀಗಾಗಿ ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗ ಮೌರ್ಯರ ನೇರ ಆಳ್ವಿಕೆಗೆ ಒಳಪಟ್ಟಿತ್ತು. ಚಂದ್ರವಳ್ಳಿಯು ಮೌರ್ಯರ ಕಾಲದ ಒಂದು ಸಣ್ಣ ಊರಾಗಿತ್ತೆಂದು ತಿಳಿದುಬರುತ್ತದೆ.[೧೯]

ಅಶೋಕನು ಕಳಿಂಗಯುದ್ಧದ ನಂತರ ಬೌದ್ಧಧರ್ಮವನ್ನು ಸೇರಿ ಅಹಿಂಸಾ ತತ್ವ ಆಚರಣೆಗೆ ಮುಂದಾದನು. ಧರ್ಮ ಪ್ರಚಾರದ ಉದ್ದೇಶದಿಂದ ಶಾಸನವನ್ನು ಹಾಕಿಸಲು ಆರಂಭಿಸಿದ ಮೊದಲ ಸಾಮ್ರಾಟ. ಕರ್ನಾಟಕದಲ್ಲಿ ೧೭ ಶಾಸನಗಳಿದ್ದು, ಅವುಗಳಲ್ಲಿ ೧೩ ಲಘು ಶಾಶನಗಳು, ೪ ಶಿಲಾಶಾಸನಗಳನ್ನು ಒಳಗೊಂಡಿವೆ.[೨೦] ಬ್ರಹ್ಮಗಿರಿ ಶಾಸನದಲ್ಲಿ 'ದೇವಾನಾಂ ಪ್ರಿಯ ಪ್ರಿಯದರ್ಶಿ' ಎಂದು ರಚಿತಗೊಂಡಿದೆ. ಮಸ್ಕಿ ಶಾಸನದಲ್ಲಿ 'ಅಶೋಕಸ' ಎಂಬ ಉಲ್ಲೇಖ ಮಹತ್ವದ್ದೆನಿಸಿದೆ. ಪ್ರಸ್ತುತ ಪರಿಸರದ ಜಗಳೂರು ತಾಲ್ಲೂಕಿನ ಆಸಗೋಡುನಲ್ಲಿ

ಅಶೋಕನು ತಂಗಿದ್ದನೆಂಬುದು ಗಮನಾರ್ಹವಾಗಿದೆ.[೨೧] ಇದರಿಂದ ಚಂದ್ರವಳ್ಳಿಯು ಮೌರ್ಯರ ಕಾಲದ ಮುಖ್ಯ ಕೇಂದ್ರವಾಗಿತ್ತು. ಈ ಎಲ್ಲಾ ಆಧಾರಗಳಿಂದ ಮೌರ್ಯರ ಸಾಮ್ರಾಜ್ಯ ೧೪° ಅಕ್ಷಾಂಶಕ್ಕೆ ಮಾತ್ರ ಸೀಮಿತವಾಗಿರದೆ, ೧೨° ಅಕ್ಷಾಂಶದ ವ್ಯಾಪ್ತಿಗೆ ಒಳಪಟ್ಟಿರುವುದಾಗಿ ಹೇಳಬಹುದು.[೨೨]

ಇತ್ತೀಚೆಗೆ ನಡೆಸಿದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಜಿಲ್ಲೆಯ ಪೂರ್ಣ ಭಾಗವನ್ನು ಒಳಗೊಂಡಿತ್ತೆಂದು ತಿಳಿಯಲು ಅನೇಕ ಆಧಾರಗಳು ದೊರೆತಿವೆ. ಮೋರಿಯರ ಕಲ್ಲು, ಮೋರಿಯರ ಮಟ್ಟಿ ಎಂದು ಕರೆಯಲ್ಪಡುವ ಅನೇಕ ಬೃಹತ್ ಶಿಲಾ ಸಮಾಧಿಗಳು ಅನೇಕ ಕಡೆ, ತುರುವನೂರಲ್ಲಿ ಕಂಡುಬಂದಿವೆ. ಈ ಬೃಹತ್ ಶಿಲಾ ಸಮಾಧಿಗಳು ಮೌರ್ಯರೊಂದಿಗೆ ಇರುವ ಸಂದರ್ಭವನ್ನು ಸೂಚಿಸುತ್ತವೆ ಎಂದು ಮಾರ್ಟೀಮರ್ ವೀಲರ್ ಅಭಿಪ್ರಾಯ ಪಟ್ಟಿದ್ದಾರೆ. ಬೃಹತ್ ಶಿಲಾಯುಗದ ಜನ ಕಬ್ಬಿಣವನ್ನು ಬಳಸುತ್ತಿದ್ದು, ಬೆಟ್ಟದ ಇಳಿಜಾರುಗಳಲ್ಲಿ ವಾಸಿಸುತ್ತಿದ್ದರು. ಇವರು ಕಬ್ಬಿಣದ ಅದಿರನ್ನು ಕರಗಿಸುವುದು ಮತ್ತು ಕಮ್ಮಾರಿಕೆಯಲ್ಲಿ ತೀರಾ ಪರಿಣಿತರಾಗಿರುತ್ತಿದ್ದರು. ಈ ಕಾರಣಕ್ಕಾಗಿಯೇ ಅಶೋಕ ತನ್ನ ಗಮನವನ್ನು ಇತ್ತ ಹರಿಸಿದನೆಂದು ಹೇಳಲಾಗಿದೆ. ಒಟ್ಟಾರೆ ತುರುವನೂರನ್ನು ಒಳಗೊಂಡಂತೆ ಇಡೀ ಚಿತ್ರದುರ್ಗ ಜಿಲ್ಲೆ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು.

ಸಾತವಾಹನರು

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮೌರ್ಯರ ತರುವಾಯ ಶಾತವಾಹನರ ಆಳ್ವಿಕೆ ಕಂಡುಬರುವುದು. ಕರ್ನಾಟಕದಲ್ಲಿ ದೊರೆತ ಆರವತ್ತಕ್ಕೂ ಹೆಚ್ಚು ಪ್ರಾಕೃತ ಶಾಸನಗಳು ಶಾತವಾಹನರ ಆಳ್ವಿಕೆಯನ್ನು ಕುರಿತು ಪ್ರಸ್ತಾಪಿಸುತ್ತವೆ.[೨೩] ಮೌರ್ಯರ ಸಾಮಂತರಾಗಿ ಆಡಳಿತ ನಿರ್ವಹಿಸುತ್ತಿದ್ದ ಶಾತವಾಹನರು ಕ್ರಿ.ಪೂ.೩೨೫ರಿಂದ ಕ್ರಿ.ಶ.೨೨೦ರ ವರೆಗೆ ರಾಜ್ಯಭಾರ ಮಾಡಿದರು. ಇವರ ರಾಜಧಾನಿ ಪೈಠಾಣ. ಸಾಮ್ರಾಜ್ಯದ ಸ್ಥಾಪಕ ಸಿಮುಖ. ಎರಡನೇ ಶಾತಕರಣಿ, ಗೌತಮಿಪುತ್ರ, ವಶಿಷ್ಠಪುತ್ರ ಪುಳುಮಾಯಿ, ಯಜ್ಞಶ್ರೀ ಶಾತಕರಣಿ, ಇನ್ನು ಪ್ರಮುಖ ರಾಜರು ಆಳ್ವಿಕೆ ಮಾಡಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಮಧ್ಯಪ್ರದೇಶ ಇವರ ಆಡಳಿತದ ವ್ಯಾಪ್ತಿಗೆ ಒಳಪಟ್ಟಿದ್ದವು. ಚೈತ್ಯಾಲಯಗಳು ಸ್ತೂಪಗಳ ನಿರ್ಮಾಣದಲ್ಲಿ, ನಾಣ್ಯಗಳ ಮುದ್ರಣ, ಮಡಕೆಗಳ ಉಪಯೋಗ ಇವರ ಆರ್ಥಿಕತೆ, ಸಾಮಾಜಿಕತೆಗೆ ಹಿಡಿದ ಕನ್ನಡಿಯಾಗಿದೆ.

ಶಾತವಾಹನರ ಕಾಲದಲ್ಲಿ ಚಂದ್ರವಳ್ಳಿ ಪ್ರಮುಖ ಪಟ್ಟಣವಾಗಿತ್ತು, ಸುಮಾರು ೩ ತಲೆಮಾರುಗಳ ಹಿಂದೆ ಚಂದ್ರವಳ್ಳಿ ಕಣಿವೆಯಿಂದ ಹರಿಯುವ ಮಳೆ ನೀರನ್ನು ಕೆರೆಗೆ ಕೊಂಡೊಯ್ಯಲು ಕಾಲವೆ ತೋಡುತ್ತಿದ್ದಾಗ ಅನೇಕ ಸೀಸದ ನಾಣ್ಯಗಳು ಸಿಕ್ಕಿವೆ. ಇ.ಜೆ.ರ್‍ಯಾಂಪ್ಸನ್

ಎಂಬ ಪ್ರಸಿದ್ಧ ನಾಣ್ಯ ಶಾಸ್ತ್ರಜ್ಞ ಇವುಗಳನ್ನು ಪರೀಕ್ಷಿಸಿ ೧೮೦೦ ವರ್ಷಗಳ ಹಿಂದೆ ಚಂದ್ರವಳ್ಳಿ ಪ್ರದೇಶವನ್ನಾಳುತ್ತಿದ್ದ ಶಾತವಾಹನ ಮಾಂಡಲೀಕರಸರ ನಾಣ್ಯಗಳೆಂದು ತೋರಿಸಿಕೊಟ್ಟ. ಅನಂತರ ೧೯೭೮ರಲ್ಲಿ ಎಂ.ಹೆಚ್.ಕೃಷ್ಣರವರು ನಡೆಸಿದ ಉತ್ಖನನದಿಂದ ಐದನೆ ಗುಂಡಿಯಲ್ಲಿ ಇಟ್ಟಿಗೆಯ ಚೂರುಗಳು, ಕಟ್ಟಡದ ಅವಶೇಷಗಳು ನಾಣ್ಯಗಳು ನಾನಾ ವಿಧವಾದ ಮಣಿಗಳು ಆಭರಣಗಳು ಬಿಳಿಬಣ್ಣದ ರೇಖಾಚಿತ್ರದಿಂದ ಕೂಡಿದ ಮಣ್ಣಿನ ಪಾತ್ರೆಗಳು ದೊರೆತವು. ಇವೆಲ್ಲ ಶಾತವಾಹನರ ಆಳ್ವಿಕೆಗೆ ಸಂಬಂಧಿಸಿವೆ. ಚಂದ್ರವಳ್ಳಿಯಲ್ಲಿ ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ದೊರೆತ ಪ್ರಮಾಣವನ್ನು ಗಮನಿಸಿದರೆ, ಇದು ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದೂ ಊಹಿಸಬಹುದಾಗಿದೆ.[೨೪] ಪ್ರಸ್ತುತ ತುರುವನೂರಲ್ಲಿ ಶಾತವಾಹನರ ಕಾಲಾವಧಿಯ ಸೀಸದ ನಾಣ್ಯವು ಡಾ.ಎಸ್.ವೈ. ಸೋಮಶೇಖರ್ ಅವರಿಗೆ ದೊರಕಿದ್ದು, ಈ ನಾಣ್ಯ ೧೨ ಗ್ರಾಂ ತೂಕವನ್ನು ಹೊಂದಿದೆ. ನಾಣ್ಯದ ಒಂದು ಭಾಗದಲ್ಲಿ 'ರಾಣೋ ಮುದನಂದಸ' ಎಂದು ಬ್ರಾಹ್ಮಿ ಲಿಪಿ ಹಿಂಬದಿಯಲ್ಲಿ ಬೌದ್ಧವೃಕ್ಷ, ನಂದಿಪಾದ, ಚೈತ್ಯ ಲಕ್ಷಣ ಮುದ್ರಿತಗೊಂಡಿದೆ. ಈ ನಾಣ್ಯದ ಆಧಾರದ ಮೇಲೆ ತುರುವನೂರು ಶಾತವಾಹನರ ಮಾಂಡಲಿಕರಾದ ಚುಟುಕುಲಾನಂದರ ಆಡಳಿತದ ಪ್ರಭಾವಕ್ಕೆ ಒಳಪಟ್ಟಿತ್ತೆಂದು ದೃಢವಾಗಿದೆ.[೨೫] ಸಮೀಪದ ಚಿಪ್ಪಿನಕೆರೆ, ಇವರ ಕಾಲದ ನಾಣ್ಯಗಳು ದೊರಕಿದ್ದು, ತುರುವನೂರು ಶಾತವಾಹನರ ಆಳ್ವಿಕೆಗೆ ಒಳಪಟ್ಟ ನೆಲೆಯಾಗಿದೆ.

ಕದಂಬರು

ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಕದಂಬರು ಉತ್ತರ ಕರಾವಳಿ, ದಕ್ಷಿಣ ಕರಾವಳಿ, ಧಾರವಾಡ, ಬೆಳಗಾವ್, ದಾವಣಗೆರೆ ಶಿವಮೊಗ್ಗ ಹಾಗೂ ಚಿತ್ರದುರ್ಗ ಭಾಗಗಳಲ್ಲಿ ಕ್ರಿ.ಶ.೩ನೇ ಶತಮಾನದ ಅಂತ್ಯದಿಂದ ಕ್ರಿ.ಶ.೬ನೇ ಶತಮಾನದ ಮಧ್ಯಭಾಗದವರೆಗೂ ಸುಮಾರು ೩೬೫ ವರ್ಷಗಳಕಾಲ ಆಳಿದರು.[೨೬] ಶಾತವಾಹನರ ಆಳ್ವಿಕೆ ಸುಮಾರು ಕ್ರಿ.ಶ.ಮೂರನೇ ಶತಮಾನದ ವೇಳೆಗೆ ಮುಕ್ತಾಯಗೊಂಡು ಅವರ ಸಾಮ್ರಾಜ್ಯ ಹರಿದು ಹಂಚಿಹೋಗುತ್ತಿದ್ದ ವೇಳೆಗೆ ದಕ್ಷಿಣ ಹಾಗೂ ಪಶ್ಚಿಮ ಭಾಗಗಳ ಒಡೆತನವು ಆಗತಾನೇ ತಲೆಎತ್ತಿದ್ದ ಕದಂಬರ ವಶವಾಯಿತು. ಕದಂಬರ ಆಳ್ವಿಕೆ ಜಿಲ್ಲೆಯಲ್ಲಿ ಆರಂಭವಾಗುವುದು ಮಯೂರ ವರ್ಮನಿಂದ. ಚಂದ್ರವಳ್ಳಿ ಶಾಸನವನ್ನು ಪ್ರಥಮ ಬಾರಿಗೆ ಎಂ.ಹೆಚ್.ಕೃಷ್ಣರವರು ಶೋಧಿಸಿ ಪ್ರಕಟಿಸಿದರು. ನಂತರ ಚಿತ್ರದುರ್ಗದ ಸಂಶೋಧಕರಾದ ಬಿ.ರಾಜಶೇಖರಪ್ಪರವರು ಈ ಶಾಸನವನ್ನು ಪುನರ್ ಅಧ್ಯಯನ ಮಾಡಿ ಕೆಲ ಗಮನಾರ್ಹ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಕಂಚಿಯಲ್ಲಿ ಪಲ್ಲವರಿಂದ ಅವಮಾನಗೊಂಡ ತರುವಾಯ ಬ್ರಾಹ್ಮಣತ್ವ ತ್ಯಜಿಸಿ ಕ್ಷತ್ರಿಯತ್ವ ಸ್ವೀಕರಿಸಿ ರಾಜ್ಯ ಕಟ್ಟುವ ಪೂರ್ವದಲ್ಲಿ ದುರ್ಗಮವಾದ ಪರ್ವತಾರಣ್ಯದಲ್ಲಿ ವಾಸವಾಗಿದ್ದ. ಅದು ಚಿತ್ರದುರ್ಗ ಮತ್ತು ಚಂದ್ರವಳ್ಳಿಯ ದವಳಪ್ಪನ ಗುಡ್ಡದ ಸುತ್ತಲಿನ ಪ್ರದೇಶವೆಂದು ಅಭಿಪ್ರಾಯಪಡಲಾಗಿದೆ.[೨೭]

ತುರುವನೂರು ಗ್ರಾಮ ಚಂದ್ರವಳ್ಳಿಯ ಸಮೀಪವಿರುವುದರಿಂದ ಕದಂಬರ ನೇರ ಆಡಳಿತಕ್ಕೆ ಒಳಪಟ್ಟಿತೆಂಬುದು ಗಮನಾರ್ಹವಾಗಿದೆ.

ಚಾಲುಕ್ಯರು

ಬಾದಾಮಿ ಚಾಲುಕ್ಯರು ಕ್ರಿ.ಶ.೬ ರಿಂದ ೮ನೇ ಶತಮಾನದವರೆಗೆ ಆಳ್ವಿಕೆ ನಡೆಸಿದರು. ಜಯಸಿಂಹ ಬಾದಾಮಿ ಚಾಲುಕ್ಯರ ಮೂಲ ಪುರುಷ. ಚಾಲುಕ್ಯರಲ್ಲಿ ಮೂರು ಶಾಖೆಗಳಿವೆ. ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ವೆಂಗಿ ಚಾಲುಕ್ಯರು. ಚಾಲುಕ್ಯರು ಮತ್ತು ಪಲ್ಲವರ ಮನೆತನಗಳಲ್ಲಿ ನಡೆಯುತ್ತಿದ್ದ ಕಾದಾಟದಿಂದ ಎರಡು ರಾಜ್ಯಗಳ ಗಡಿಭಾಗಗಳಲ್ಲಿದ್ದ ಚಿತ್ರದುರ್ಗ ಜಿಲ್ಲೆಯ ಪ್ರದೇಶಗಳಲ್ಲಿ ಅಶಾಂತಿ ಏರ್ಪಟ್ಟಿದ್ದಿತೆಂಬುದಾಗಿ ತಿಳಿಯಲಾಗಿದೆ.

ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ನೊಳಂಬವಾಡಿ ೩೨,೦೦೦ ಪ್ರಾಂತ್ಯವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಚಿತ್ರದುರ್ಗ ಜಿಲ್ಲೆಯು ಕಲಹಕ್ಕೆ ಕಾರಣವಾದ ಪ್ರದೇಶವಾಗಿದ್ದಿತು. ಬಾದಾಮಿಯ ಚಾಲುಕ್ಯರಿಗೆ ಪಲ್ಲವರು ವೈರಿಗಳಾಗಿದ್ದರೆ, ಕಲ್ಯಾಣಿ ಚಾಲುಕ್ಯರಿಗೆ ಚೋಳರು ವೈರಿಗಳಾಗಿದ್ದರು. ಚೋಳ ಮತ್ತು ಕಲ್ಯಾಣಿ ಚಾಲುಕ್ಯ ರಾಜ್ಯಗಳ ನಡುವೆ ಅನೇಕ ಬಾರಿ ಯುದ್ಧಗಳು ನಡೆದವು. ಚಳ್ಳಕೆರೆ ತಾಲೂಕಿನ ೨ನೇ ಜಯಸಿಂಹನ ಶಾಸನದಿಂದ ಮತ್ತು ಇತರ ದಾಖಲೆಗಳಿಂದಲೂ ಇವನು ರೊಡ್ಡಾ, ಶಿರಾ, ನೊಳಂಬವಾಡಿ, ಕದಂಬಳಿಗೆ ಮುಂತಾದ ಇತರ ಪ್ರಾಂತ್ಯಗಳನ್ನು ಆಳುತ್ತಿದ್ದನು. ಕ್ರಿ.ಶ.೧೦೬೭ರ ಚಿತ್ರದುರ್ಗ ತಾಲೂಕಿನ ಮತ್ತೊಂದು ಶಾಸನವು ತ್ರೈಲೋಕ್ಯಮಲ್ಲನು ಕದಂಬಳಿಗೆಯಲ್ಲದೆ ಇನ್ನೂ ಅನೇಕ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[೨೮] ಕ್ರಿ.ಶ.೯೭೦ರ ಗಂಜಿಗಟ್ಟೆ ಶಾಸನದಲ್ಲಿ 'ಶ್ರೀಬಿಜಾಜೆ' ಎಂಬ ಉಲ್ಲೇಖವಿದ್ದು, ಈ ಪದ ಬಾದಾಮಿ ಚಾಲುಕ್ಯರ ಲಿಪಿಯನ್ನು ಹೋಲುತ್ತಿರುವ ಕಾರಣ ಆ ಕಾಲಕ್ಕೆ ಸೇರಿಸಲಾಗಿದೆ.[೨೯] ಈ ಶಾಸನಗಳ ಆಧಾರದ ಮೇರೆಗೆ ತುರುವನೂರು ಗ್ರಾಮವು ಚಾಲುಕ್ಯರ ಆಳ್ವಿಕೆಯ ಪ್ರಭಾವಕ್ಕೆ ಒಳಪಟ್ಟಿತ್ತೆಂಬುದು ದೃಢವಾಗಿದೆ.

ರಾಷ್ಟ್ರಕೂಟರು

ತುರುವನೂರನ್ನು ಒಳಗೊಂಡಂತೆ ಇಡೀ ಚಿತ್ರದುರ್ಗ ಜಿಲ್ಲೆ ಕ್ರಿ.ಶ.೭೯೮ ರಿಂದ ೯೮೨ ರವರೆಗೆ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತು. ಬಾದಾಮಿ ಚಾಲುಕ್ಯರ ಅರಸ ಎರಡನೇ ಕೀರ್ತಿವರ್ಮನನ್ನು ಸೋಲಿಸುವುದರ ಮೂಲಕ ದಂತಿದುರ್ಗನು ಕ್ರಿ.ಶ.೮ನೇ ಶತಮಾನದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪಿಸಿದ. ಇವರ ರಾಜಧಾನಿ ಮಾನ್ಯಖೇಟ. ಚಿತ್ರದುರ್ಗ ಇವರ ಆಳ್ವಿಕೆಗೆ ಒಳಪಟ್ಟಿದ್ದರು ರಾಷ್ಟ್ರಕೂಟರ ಶಾಸನಗಳು ಬಹುಸಂಖ್ಯೆಯಲ್ಲಿ ದೊರತಿಲ್ಲ. ೩ನೇ ಗೋವಿಂದ, ೨ನೇ ಕೃಷ್ಣ, ೩ನೇ ಅಮೋಘವರ್ಷ, ೩ನೇ ಕೃಷ್ಣ, ಖೊಟ್ಟಿಗ ಹಾಗೂ ೨ನೇ ಕರ್ಕ ಇವರುಗಳ ಕಾಲದ ಶಾಸನಗಳು ದೊರತಿವೆ. ಚಳ್ಳಕೆರೆ ತಾಲೂಕಿನ ಶಾಸನಗಳಿಂದ

ನೊಳಂಬರ ರಾಜ ಚಾರು ಪೊನ್ನೆರನು ಜಗತ್ತುಂಗ ಪ್ರಭೂತವರ್ಷ ಗೋವಿಂದನ ಸಾಮಂತನಾಗಿ ಬಾಳಿದುದನ್ನು ಬರೆದಿದೆ. ಈ ಜಿಲ್ಲೆಯ ಇತರೆ ಭಾಗಗಳು(ಕದಂಬಳಿಗೆ–೧೦೦೦, ಮಂಡಲ–೧೦೦೦), ನೊಳಂಬವಾಡಿ ೩೨,೦೦೦ದಲ್ಲಿ ಅಂತರ್ಗತವಾಗಿ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿವೆ. ಚಿತ್ರದುರ್ಗ ತಾಲೂಕಿನ ಇಸಮುದ್ರದ ಬೋಗೇಶ್ವರ ದೇವಾಲಯ, ಅಲ್ಲಿನ ಮಠ, ಅಲ್ಲಿಗೆ ಓದಲು ಬರುವ ವಿದ್ಯಾರ್ಥಿಗಳಿಗೆ, ಗುರುಗಳಾದ ಬಾಳ ಚಂದ್ರಭಟ್ಟಾರಕರಿಗೆ ದತ್ತಿ ಬಿಟ್ಟ ಸಂಗತಿ ಮೂರನೇಯ ಅಮೋಘವರ್ಷನ ಶಾಸನವೊಂದರಲ್ಲಿ ವಿವರಿಸಲಾಗಿದೆ.[೨೦] ಈ ಶಾಸನದ ಆಧಾರದ ಮೇಲೆ ತುರುವನೂರು ಗ್ರಾಮ ರಾಷ್ಟ್ರಕೂಟರ ಆಡಳಿತದ ಪ್ರಭಾವಕ್ಕೆ ಒಳಪಟ್ಟಿತ್ತು.

ನೊಳಂಬರು

ನೊಳಂಬ ಪಲ್ಲವ ಕರ್ನಾಟಕದ ಪ್ರಾಚೀನ ಮತ್ತು ಪ್ರಮುಖ ರಾಜ ಮನೆತನಗಳಲ್ಲಿ ಒಂದಾಗಿದೆ. ಕಂಚಿಯ ಪಲ್ಲವರೊಂದಿಗೆ ಮೂಲವನ್ನು ಕಲ್ಪಿಸಿಕೊಳ್ಳುವ ಕರ್ನಾಟಕದ ಆಗ್ನೇಯ ಭಾಗದಲ್ಲಿ ಕ್ರಿ.ಶ.ಎಂಟನೆಯ ಶತಮಾನದಿಂದ ಮೂರು ಶತಮಾನಗಳ ಕಾಲ ಆಳಿದರು. ಹೆಂಜೇರು ಅಥವಾ ಹೇಮಾವತಿ ಮೊದಲ ರಾಜಧಾನಿ ನಂತರ ಕಂಪಿಲಿಗೆ ವರ್ಗಾಯಿಸಿದರು. ಕ್ರಿ.ಶ.೮ನೇ ಶತಮಾನದ ಪೂರ್ವಾರ್ಧದಲ್ಲಿ ಉದಯಿಸಿದ ನೊಳಂಬ ಪಲ್ಲವರು ಬಾದಾಮಿ ಚಾಲುಕ್ಯ ಹಾಗೂ ಕಂಚಿಯ ಪಲ್ಲವರ ನಡುವಿನ ಗಡಿ ಪ್ರಾಂತ್ಯಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಶತಮಾನಗಳವರೆಗೆ ಗಂಗ, ಚಾಲುಕ್ಯ, ಚೋಳ ಮತ್ತು ಹೊಯ್ಸಳರ ಮಹಾ ಸಾಮಂತರಾಗಿ ಆಳಿದರು.[೨೧] ನೊಳಂಬರಲ್ಲಿ ಮಂಗಳ, ಸಿಂಹಪೋತ, ಚಾರುಪೊನ್ನೇರ, ಪೊಳಾಳ ಚೋರ, ಮಹೇಂದ್ರ, ನನ್ನೀಗ, ಅಯ್ಯಪ್ಪದೇವ, ಅಣ್ಣಿಗ ಮತ್ತು ದೀಲಿಪ ಆಳ್ವಿಕೆ ಮಾಡಿದ ರಾಜರು. ನೊಳಂಬರ ಆಳ್ವಿಕೆಯ ಕೊನೆಯ ವೇಳೆಗೆ ೩೨,೦೦೦ ಪ್ರದೇಶಗಳನ್ನು ಅಧೀನಕ್ಕೆ ತೆಗೆದುಕೊಂಡಾಗ ಸಾಮ್ರಾಜ್ಯ ವಿಸ್ತಾರವಾಯಿತು. ಚಿತ್ರದುರ್ಗ, ತುಮಕೂರು, ಬಳ್ಳಾರಿ, ಅನಂತಪುರ, ಕೋಲಾರ, ಬೆಂಗಳೂರು ಜಿಲ್ಲೆಗಳು ಇವರ ವ್ಯಾಪ್ತಿಗೆ ಬರುತ್ತವೆ.[೨೨] ಚಳ್ಳಕೆರೆ ತಾಲೂಕು ಚಿಕ್ಕ ಮಧುರೆ ಗ್ರಾಮದಲ್ಲಿ ಮಲ್ಲೇಶ್ವರ ದೇವಾಲಯದಲ್ಲಿರುವ ಸ್ತಂಭ ಶಾಸನದಿಂದ ಸಿಂಹಪೋತನ ಮಗ ಪರಮೇಶ್ವರ ಪಲ್ಲವರಾಜಾಧಿರಾಜ ಮತ್ತು ಅವನ ಮಗ ಪಲ್ಲವಮಲ್ಲ ಇವರು ರಾಷ್ಟ್ರಕೂಟರ ಸಾಮಂತರಾಗಿ ಕೆಲವು ನಾಡುಗಳ ಆಡಳಿತ ನಡೆಸುತ್ತಿದ್ದರೆಂಬುದು ತಿಳಿಯುತ್ತದೆ. ಅದೇ ರೀತಿಯಾಗಿ ಬಾಗೇನಹಾಳು ಈಶ್ವರ ದೇವಾಲಯದ ಕ್ರಿ.ಶ.೯೧೮ ಶಾಸನ ಮತ್ತು ಜಗಳೂರು ತಾಲೂಕು ಮುಸ್ಟೂರು ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿನ ಕ್ರಿ.ಶ.೯೨೦ರ ಶಾಸನ.[೨೩] ತುರುವನೂರಿನ ರಾಮಲಿಂಗ ದೇವಾಲಯದಲ್ಲಿನ ಲಿಂಗವು ೯–೧೦ನೇ ಶತಮಾನಕ್ಕೆ ಸೇರಿದೆ. ಊರಿನ ಗಾವುಂಡರಲ್ಲಿ ಸೇರಿ ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದ್ದರು ಎಂಬ

ವಿಷಯ ಎಂ.ಎ.ಆರ್.ವರದಿಯಲ್ಲಿ ದಾಖಲಾಗಿದೆ. ಈ ಮಾಹಿತಿಯ ಆಧಾರದ ಮೇರೆಗೆ ತುರುವನೂರು ನೊಳಂಬರ ಆಡಳಿತಕ್ಕೆ ಒಳಪಟ್ಟಿರುವ ಗ್ರಾಮ.

ಕಲಚೂರಿಗಳು

ಉತ್ತರ ಭಾರತ, ಮಧ್ಯಭಾರತ ಹಾಗೂ ದಕ್ಷಿಣ ಭಾರತವನ್ನು ಕ್ರಿ.ಶ.೫೫೦ರಿಂದ ೧೧೮೩ ರವರೆಗೆ ಕಳಚೂರಿಗಳು ಆಳ್ವಿಕೆ ಮಾಡಿರುವರು. ಕಲಚೂರಿ, ಕಲಾಟ್‌ಚೂರಿ, ಕಲಿಚೂರಿ ಎಂಬ ಪದಗಳು ಶಾಸನಗಳಲ್ಲಿ ಕಂಡುಬಂದಿದೆ.[೩೪] ಜೋಗಮ ಕಲಚೂರಿಗಳ ವಂಶದ ಸ್ಥಾಪಕ. ಪೆರ್ಮಾಡಿ ಬಿಜ್ಜಳ, ಮೈಲುಗಿದೇವ, ಸೋವಿದೇವ, ಸಂಕಮ ಅಹವಮಲ್ಲ, ಸಿಂಗಣ, ಬ್ರಹ್ಮರಸರು ಕಲಚೂರಿಗಳ ಆಡಳಿತಗಾರರಾಗಿದ್ದರು. ಕ್ರಿ.ಶ.೧೧೮೩ರಲ್ಲಿ ದಂಡನಾಯಕ ಬ್ರಹ್ಮರಸ ಕಲ್ಯಾಣ ಚಾಲುಕ್ಯರ ನಾಲ್ಕನೇ ಸೋಮೇಶ್ವರನಿಗೆ ಅಧಿಕಾರ ಬಿಟ್ಟುಕೊಟ್ಟನು. ಈ ಮೂಲಕ ಕರ್ನಾಟಕದಲ್ಲಿ ಕಲಚೂರಿಗಳ ಆಳ್ವಿಕೆ ಅಂತ್ಯಗೊಂಡಿತು. ಬಿಜ್ಜಳ ಕಲ್ಯಾಣದ ಕಲಚೂರಿಗಳ ಆಳ್ವಿಕೆಗೆ ಅಡಿಪಾಯ ಹಾಕಿದನು. ಮೂರನೇ ತೈಲಪನು ಕ್ರಿ.ಶ.೧೧೫೫ ರಿಂದ ೧೧೬೧ ರವರೆಗೆ ನಾಮಮಾತ್ರ ಚಕ್ರವರ್ತಿಯಾಗಿದ್ದು, ಬಿಜ್ಜಳ ಸಾಮ್ರಾಟನಾಗಿದ್ದ. ಕ್ರಿ.ಶ.೧೧೬೮ರ ಬಳ್ಳಿಗಾವೆಯ ಶಾಸನವು ತನ್ನ ಆಳ್ವಿಕೆಯ ಕಾಲದಲ್ಲಿ ಪುತ್ರನಾದ ಸೋವಿದೇವನಿಗೆ ಉತ್ತರಾಧಿಕಾರತ್ವ ನೀಡಿದನೆಂದು ತಿಳಿಸುತ್ತದೆ.[೩೫] ತುರುವನೂರಿನಲ್ಲಿ ಕಲಚೂರಿಗಳ ಕಾಲದ ಯಾವುದೇ ಕುರುಹುಗಳು ಕಂಡುಬಂದಿಲ್ಲವಾದರೂ, ಯಳಗೋಡು ಶಾಸನದಲ್ಲಿ ಸೋಮಿದೇವನ ಉಲ್ಲೇಖವಿರುವುದರಿಂದ.[೩೬] ತುರುವನೂರು ಕಲಚೂರಿಗಳ ಆಳ್ವಿಕೆಗೂ ಒಳಪಟ್ಟಿತ್ತು.

ಹೊಯ್ಸಳರು

ಕ್ರಿ.ಶ.೧೧ನೆಯ ಶತಮಾನದಲ್ಲಿ ಅಧಿಕಾರಕ್ಕೆ ಹೊಯ್ಸಳರು ಕರ್ನಾಟಕ ಹಾಗೂ ತಮಿಳುನಾಡಿನ ನಾನಾ ಭಾಗದಲ್ಲಿ ಕ್ರಿ.ಶ.೧೦೨೨ ರಿಂದ ೧೩೪೨ರವರೆಗೆ ಆಡಳಿತ ನಡೆಸಿದರು. ಹೊಯ್ಸಳ ಸಾಮ್ರಾಜ್ಯ ಸ್ಥಾಪಕ ಸಳ. ರಾಜಧಾನಿ ದ್ವಾರಸಮುದ್ರವನ್ನಾಗಿ ಮಾಡಿಕೊಂಡು ವಿನಯಾದಿತ್ಯ, ಎರೆಯಂಗ, ೧ನೇ ಬಲ್ಲಾಳ, ವಿಷ್ಣುವರ್ಧನ, ವಿನಯಾದಿತ್ಯ, ೧ನೇ ನರಸಿಂಹ, ರಾಮನಾಥ, ೩ನೇ ಬಲ್ಲಾಳ, ವಿಶ್ವನಾಥ, ೪ನೇ ಬಲ್ಲಾಳರ ಕಾಲದಲ್ಲಿ ಕರ್ನಾಟಕದ ಇತಿಹಾಸಕ್ಕೆ ವಿಶೇಷವಾದ ಕೊಡುಗೆ ಲಭ್ಯವಾಗಿದೆ. ಪರಿಸರದಿಂದ ೧೦ ಕಿ.ಮೀ. ದೂರದಲ್ಲಿರುವ ಕಲ್ಲೇದೇವರಪುರದ ಹೊಯ್ಸಳರ ಕಾಲದ ತ್ರಿಕೂಟಾಚಲ ದೇಗುಲ ಹಾಗೂ ಕಲ್ಲೇಶ್ವರ ದೇವಾಲಯಗಳು ವಾಸ್ತು ಶೈಲಿಯಲ್ಲಿ ಮಹತ್ವ ಪಡೆದಿವೆ. ದೇವಾಲಯದ ಆವರಣದಲ್ಲಿರುವ ಶಾಸನವು ೩ನೇ ಸೋಮೇಶ್ವರನು ಗಂಗವಾಡಿ ೯೬,೦೦೦ ಮತ್ತು ನೊಳಂಬವಾಡಿ ೩೨,೦೦೦ ನಾಡುಗಳನ್ನು ಆಳುತ್ತಿದ್ದ ಮುಂತಾದ ವಿವರಣೆಗಳಿವೆ. ಈ ಹಿನ್ನೆಲೆಯಲ್ಲಿ ತುರುವನೂರು ಸಹ ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿದ್ದಿತು.

ವಿಜಯನಗರ ಸಾಮ್ರಾಜ್ಯ

ಹೊಯ್ಸಳರ ಸಾಮ್ರಾಜ್ಯವು ಪತನ ಹೊಂದಿದ ತರುವಾಯ ಹಿಂದೂಧರ್ಮದ ರಕ್ಷಣೆಗೆಂದು ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತು. ಇದನ್ನು ಇತಿಹಾಸಕಾರರು ಮರೆತು ಹೋದ ಮಹಾಸಾಮ್ರಾಜ್ಯ ಹಾಗೂ ಮರೆಯಲಾಗದ ಮಹಾಸಾಮ್ರಾಜ್ಯ ಎಂದು ಕರೆದಿದ್ದಾರೆ. ಕ್ರಿ.ಶ.೧೩೩೬ ರಿಂದ ೧೫೬೫ರ ವರೆಗೆ ಆಡಳಿತ ನಡೆಸಿದ ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದ ಪ್ರಮುಖ ಭಾಗವನ್ನಾಗಿಸಿಕೊಂಡು ಆಳಿದರು.[೩೭] ಕ್ರಿ.ಶ.೧೩೫೬ ರಿಂದ ಅಳಿಯ ರಾಮರಾಯನ ಕಾಲದವರೆಗೆ ಆಳಿದ ಅರಸರ ಶಾಸನಗಳು ಈ ಜಿಲ್ಲೆಯಲ್ಲಿ ಕಂಡು ಬಂದಿದೆ.[೩೮] ವಿಜಯನಗರದ ಆಡಳಿತದ ಕೇಂದ್ರ ಬೆಮ್ಮತ್ತನಕಲ್ಲು ಆಗಿದ್ದಿತು. ಕ್ರಿ.ಶ.೧೩೫೫–೧೩೫೬ರ ಶಾಸನಗಳು ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿ ಮಲ್ಲಿನಾಥ ಒಡೆಯನೆಂಬುವವನು ಬೆಮ್ಮತ್ತನ ಕಲ್ಲನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದನೆಂಬುದಾಗಿ ಸೂಚಿಸುತ್ತದೆ. ೧೫ನೆಯ ಶತಮಾನದಲ್ಲಿ ಪಾಳೆಯಗಾರರು ತಲೆಯೆತ್ತಿದ ಮೇಲೆ ವಿಜಯನಗರದ ಪರೋಕ್ಷ ಆಡಳಿತವು ಇಲ್ಲಿಂದ ಆರಂಭವಾಯಿತು. ಅಚ್ಚುತರಾಯನ ಕಾಲದಲ್ಲಿ ೨೦೦ಕ್ಕಿಂತ ಹೆಚ್ಚು ನಾಯಕರಿಗೆ ಭಾಗಮಾಡಲ್ಪಟ್ಟಿದ್ದಿತೆಂದು ತಿಳಿಯುವುದು.[೩೯] ಚಿತ್ರದುರ್ಗ ಜಿಲ್ಲೆಯಲ್ಲಿನ ವಿಜಯನಗರ ಕಾಲದ ಶಾಸನಗಳಿಂದಾಗಿ ಇಲ್ಲಿನ ಅರಸರು ತಮ್ಮ ಅನುಕೂಲಕ್ಕಾಗಿ ಅನೇಕ ಆಡಳಿತದ ವಿಭಾಗಗಳನ್ನು ಮಾಡಿಕೊಂಡಿದ್ದರೆಂದು, ದೇಶ, ರಾಜ್ಯ, ವಳಿತ, ವೇಂಠಿ, ಕಸಬೆ, ವಿತ್ತಿ ಎಂಬ ಬೇರೆ ಬೇರೆ ಪ್ರಾದೇಶಿಕ ವಿಭಾಗಗಳು ಪ್ರದೇಶದಲ್ಲಿ ಕಂಡುಬಂದಿರುವುದರಿಂದ[೪೦] ತುರುವನೂರು ವಿಜಯನಗರದ ಆಳ್ವಿಕೆಗೆ ಒಳಪಟ್ಟಿದ್ದಿತು.

ಪಾಳೆಯಗಾರರು

ಕರ್ನಾಟಕದಲ್ಲಿ ಪ್ರಸಿದ್ಧರಾದ ಚಿತ್ರದುರ್ಗದ ಪಾಳೆಯಗಾರರು ಈ ಜಿಲ್ಲೆಯಲ್ಲಿ ಸುಮಾರು ೨೧೧ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಈ ಮನೆತನದಲ್ಲಿ ಹದಿನಾಲ್ಕು ಜನ ರಾಜರು ಚಿತ್ರದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು.[೪೧] ಇವರು ಕ್ರಿ.ಶ.೧೫೬೮ ರಿಂದ ೧೭೭೯ರವರೆಗೂ ಆಡಳಿತ ಮಾಡಿ ಹರಪನಹಳ್ಳಿ, ಗುಡೇಕೋಟೆ, ರಾಯದುರ್ಗ, ಬಿಳಿಚೋಡು, ತರೀಕೆರೆ, ಪಾಳೆಯಪಟ್ಟುಗಳೊಡನೆ ಸಂಬಂಧವನ್ನು ಹೊಂದಿದ್ದರು. ತಿಮ್ಮಣ್ಣನಾಯಕ, ಓಬಣ್ಣ ನಾಯಕ(೧ನೇ ಮದಕರಿ), ೧ನೇ ಕಸ್ತೂರಿರಂಗಪ್ಪ ನಾಯಕ, ಇಮ್ಮಡಿ ಮದಕರಿನಾಯಕ, ಲಿಂಗಣ್ಣ, ಭರಮಣ್ಣ, ಹಿರೇಮದಕರಿ, ೨ನೇ ಕಸ್ತೂರಿರಂಗಪ್ಪ, ೫ನೇ ಮದಕರಿನಾಯಕರು, ಏಳು ಸುತ್ತಿನ ಕೋಟೆಯನ್ನು ಕಟ್ಟಿಕೊಂಡು ಆಡಳಿತ ನಡೆಸಿ ಪ್ರಖ್ಯಾತರೆನಿಸಿದ್ದಾರೆ. ಪ್ರಸ್ತುತ ತುರುವನೂರಲ್ಲಿರು ವಂತ ಕೋಟೆ, ಕಾವಲುಗೋಪುರ, ದೇವಾಲಯಗಳು ವೀರಮಾಸ್ತಿ ಕಲ್ಲುಗಳು, ತುರುವನೂರು ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆಯುವ ಶಾಸನಗಳು, ಕೋಟೆಗಳು, ಬುರುಜುಗಳು, ದೇವಾಲಯಗಳು, ಪಾಳೆಯಗಾರರ ಕೊಡುಗೆಗಳಾಗಿವೆ. ಕ್ರಿ.ಶ.೧೭೭೬ರಲ್ಲಿ

ಪಾಳೆಯಗಾರರ ಪರವಾಗಿ ಧರ್ಮಣ್ಣನಿಗೂ ಮತ್ತು ಮರಾಠರ ಪರವಾಗಿದ್ದ ವಿರೋಜಗೂ ಯುದ್ಧವಾಗಿತ್ತು.[೪೨] ಈ ಹೋರಾಟದಲ್ಲಿ ಪಾಳೆಯಗಾರರು ಸೋತು ಮರಾಠರಿಗೆ ಪೊಗದಿಯನ್ನು ನೀಡಿದರು. ಇಂದಿಗೂ ಕೂನಬೇವಿನ ಜಮೀನ್ದಾರರ ಮನೆಯಲ್ಲಿ ಪಾಳೆಯಗಾರರ ಬಾಕು, ಖಡ್ಗ ಇರುವುದನ್ನು ಗಮನಿಸಬಹುದು. ಪ್ರಸ್ತುತ ತುರುವನೂರಲ್ಲಿ ಇರುವ ೧೮ನೇ ಶತಮಾನದ ಕೋಟೆಯು ಪಾಳೆಯಗಾರ ಯುದ್ಧದ ಅಂಶಗಳನ್ನು ತಿಳಿಯಲು ನೇರವಾಗಿದೆ. ಈ ಕೋಟೆಯ ಲಕ್ಷಣಗಳು ಹರತಿಪಾಳೆಗಾರ, ಐಮಂಗಳ ಕೋಟೆಯ ಲಕ್ಷಣಗಳು ಒಂದೇ ರೀತಿಯಲ್ಲಿದೆ. ಮಹಾಸತಿಕಲ್ಲುಗಳು, ಕಲ್ಲಿನ ಮಂಟಪ, ದೇವಾಲಯಗಳು ಕಂಡುಬಂದಿವೆ. ಇವುಗಳ ಆಧಾರದ ಮೇಲೆ ತುರುವನೂರು ಪಾಳೆಯಗಾರರ ಕಾಲದಲ್ಲಿ ಆಡಳಿತದ ಪ್ರಮುಖ ಭಾಗವಾಗಿತ್ತು.

ಸ್ವಾತಂತ್ರ್ಯ ಹೋರಾಟ

ಚಿತ್ರದುರ್ಗ ಜಿಲ್ಲೆಯು ೧೭೯೯ರ ನಂತರ ಬ್ರಿಟಿಷ್ ಭಾರತದೊಂದಿಗೆ ಪರೋಕ್ಷ ರಾಜಕೀಯ ಸಂಪರ್ಕ ಪಡೆಯಿತು. ಏಕೆಂದರೆ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಧಾರವಾಡ ಮತ್ತು ಬಳ್ಳಾರಿ ಚಿತ್ರದುರ್ಗ ಜಿಲ್ಲೆಯ ಗಡಿಪ್ರದೇಶಗಳಾಗಿದ್ದವು. ಜೊತೆಗೆ ಇಂಗ್ಲಿಷ್ ಪಾಶ್ಚಾತ್ಯ ಶಿಕ್ಷಣವು ಕಾರಣವಾಗಿತ್ತು. ಈ ಅವಧಿಯಲ್ಲಿ ಆಲೂರು ವೆಂಕಟರಾಯ, ಗಳಗನಾಥ ಶಾಂತಕವಿ, ವಾಸುದೇವಾಚಾರ್ಯ ಮುಂತಾದವರು ರಾಷ್ಟ್ರೀಯವಾದಿಗಳ ಮೇಲೆ ತೀವ್ರ ಪ್ರಭಾವ ಬೀರಿದರು. ಜನಜಾಗೃತಿ ಸಂಪರ್ಕಗಳು, ಸುದ್ದಿ ಮಾಧ್ಯಮಗಳು, ತಾಂತ್ರಿಕ ಸೌಕರ್ಯಗಳಿಂದಾಗಿ, ಸ್ವಾತಂತ್ರ್ಯ ಚಳವಳಿ ಹೊಸ ಸ್ವರೂಪ ಪಡೆಯಿತು. ಇತರೆ ಭಾಗಗಳಲ್ಲಿ ನಡೆದಂತಹ ಯುದ್ಧಗಳು ಕ್ರಾಂತಿಗಳು ಭಾರತದ ಸ್ವಾತಂತ್ರ್ಯ ಚಳವಳಿಯ ಮೇಲೆ ಪ್ರಭಾವ ಬೀರಿದವು.[೪೩] ೧೯೨೦ರ ನಾಗಪುರ ಕಾಂಗ್ರೆಸ್ ಅಧಿವೇಶನವು ಕಾಂಗ್ರೆಸ್ ಸಮಿತಿಗಳನ್ನು ಪ್ರಾದೇಶಿಕ ಭಾಷೆಯ ಆಧಾರದ ಮೇಲೆ ೨೧ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳನ್ನು ರಚಿಸಿತು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ್ನು "ಮೈಸೂರು ಜಿಲ್ಲಾ ಕಾಂಗ್ರೆಸ್" ಎಂದು ಕರೆಯಲಾಯಿತು.[೪೪] ೧೯೨೪ರ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಗಾಂಧೀಜಿಯವರು ವಹಿಸಿಕೊಂಡ ನಂತರ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಚಟುವಟಿಕೆ ಬಿರುಸಾಗತೊಡಗಿತು. ಗಾಂಧೀಜಿಯವರ ಭಾಷಣ ಚಿತ್ರದುರ್ಗ ಜಿಲ್ಲೆಯಲ್ಲಿನ ಎಸ್.ನಿಜಲಿಂಗಪ್ಪ ನವರು ರಾಜಕೀಯವನ್ನು ರೂಪಿಸಲು ನೆರವಾಯಿತು. ೧೯೨೯ರಲ್ಲಿ ಲಾಹೋರ್ ಕಾಂಗ್ರೆಸ್‌ನಲ್ಲಿ ಅಂಗೀಕೃತವಾದ ಪೂರ್ಣ ಸ್ವರಾಜ್ಯ ನಿರ್ಣಯದಿಂದ ಪ್ರಭಾವಿತರಾದ ವಾಸುದೇವರಾವ್ ಎಸ್., ಚಿತ್ರದುರ್ಗದಲ್ಲಿ ಮೊದಲ ಬಾರಿ ಸೇವಾದಳ ಕಾರ್ಯಕರ್ತರೊಂದಿಗೆ ಧ್ವಜವಂದನಾ ಕಾರ್ಯಕ್ರಮ ಏರ್ಪಡಿಸಿದ್ದರು. ಆಗಲೇ ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿತ್ತು.[೪೫]

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಗಾಂಧೀಜಿ ನೇತೃತ್ವದಲ್ಲಿ ಬ್ರಿಟೀಷರಿಗೆ ಅಸಹಾಕಾರ ಕಾನೂನು ಚಳವಳಿಯನ್ನು ಕೈಗೊಂಡರು. ಅದರ ಫಲವಾಗಿ ಮೈಸೂರು ಸಂಸ್ಥಾನದ ಸರ್ಕಾರ ಕಾಂಗ್ರೇಸ್ ಕೋರಿಕೆಯಂತೆ ಪಾನ ನಿರೋಧವನ್ನು ೧೯೩೯ ಸೆಪ್ಟೆಂಬರ್ ೧೮ ರಂದು ಜಾರಿಗೆ ತಂದಿರುವುದರಿಂದ ಮತ್ತು ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಅರಣ್ಯ ಸತ್ಯಾಗ್ರಹವನ್ನು ಆರಂಭಿಸಲಾಯಿತು. ಅರಣ್ಯ ಸತ್ಯಾಗ್ರಹ ಚಳವಳಿಯು ಪ್ರಥಮವಾಗಿ ಚಿತ್ರದುರ್ಗ ತಾಲೂಕಿನ "ತುರುವನೂರಲ್ಲಿ" ಆರಂಭವಾಯಿತು. ಇದರ ಮೂಲ ಉದ್ದೇಶವೆಂದರೆ, ಮೈಸೂರು ಸಂಸ್ಥಾನದ ಸರ್ಕಾರಿ ಜಮೀನಿನಲ್ಲಿರುವ ಈಚಲು ಮರದ ಕಾಡನ್ನು ಕಡಿದು ಸಂಸ್ಥಾನದಾದ್ಯಂತ ಮಾರಾಟವಾಗುತ್ತಿದ್ದ ಹೆಂಡದ ಮಾರಾಟವನ್ನು ನಿಲ್ಲಿಸುವುದಾಗಿತ್ತು.[೪೬] ಇಂತಹ ಚಳವಳಿಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರನ್ನು, ಯುವಕರನ್ನು ಮತ್ತು ರೈತರನ್ನು ಸರ್ಕಾರ ದಸ್ತಗಿರಿ ಮಾಡಿ ದೂರದ ಕಾಡುಗಳಲ್ಲಿ ಮಧ್ಯರಾತ್ರಿಯಲ್ಲಿ ಬಿಟ್ಟು ಚಿತ್ರಹಿಂಸೆ ಕೊಡಲಾಗುತ್ತಿತ್ತು. ಸರ್ಕಾರದ ಉದ್ದೇಶ ಚಳವಳಿಗಳಲ್ಲಿ ಭಾಗವನಿಸದಂತೆ ತಡೆಯುವುದಾಗಿತ್ತು. ಇದನ್ನೇ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿಯಲ್ಲಿ ಅರಣ್ಯ ಸತ್ಯಾಗ್ರಹವೆಂದು ಕರೆಯಲಾಗಿದೆ. ಇದು ಚಿತ್ರದುರ್ಗ ತಾಲೂಕಿನ ತುರುವನೂರನ್ನು ಒಳಗೊಂಡಂತೆ ಹೊಳಲ್ಕೆರೆಯ ರಂಗಾಪುರ, ಹೊಸದುರ್ಗದ ಬಾಗೂರು, ದಾವಣಗೆರೆಯ ಮಾಯಕೊಂಡ, ಹಿರಿಯೂರಿನ ಕಸ್ತೂರಿರಂಗಪ್ಪನಹಳ್ಳಿ ಮತ್ತು ಮರಡಿಹಳ್ಳಿ ಅರಣ್ಯ ಸತ್ಯಾಗ್ರಹ ನಡೆಯಿತು.

ಅರಣ್ಯ ಸತ್ಯಾಗ್ರಹ ತುರುವನೂರು

ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ೧೯೩೯ ಸೆಪ್ಟೆಂಬರ್ ೧೮ರಲ್ಲಿ ಚಿತ್ರದುರ್ಗ ತಾಲೂಕಿನಿಂದ ೨೨ ಕಿ.ಮೀ. ದೂರದ ತುರುವನೂರು ಗ್ರಾಮದಲ್ಲಿ ಮೈಸೂರು ಕಾಂಗ್ರೇಸ್ ವತಿಯಿಂದ ಸ್ವಾತಂತ್ರ್ಯ ಹೋರಾಟದ ಅಂಗವಾಗಿ ನಡೆದ ಅರಣ್ಯ ಸತ್ಯಾಗ್ರಹವು ರಾಜ್ಯಾದಾದ್ಯಂತ ಗಮನ ಸೆಳೆದ ಘಟನೆಯಾಗಿದೆ. ಈ ಅರಣ್ಯ ಸತ್ಯಾಗ್ರಹದ ಮುಖಂಡತ್ವವನ್ನು ಎಸ್.ನಿಜಲಿಂಗಪ್ಪ ಮತ್ತು ಬಳ್ಳಾರಿ ಸಿದ್ದಮ್ಮನವರು ವಹಿಸಿಕೊಂಡಿದ್ದರು. ಇದೊಂದು ವ್ಯವಸ್ಥಿತವಾಗಿ ನಡೆದ ಸತ್ಯಾಗ್ರಹ ಚಳವಳಿಯಾಗಿದೆ.. ಮುಖಂಡರುಗಳ ನಿರ್ದೇಶನದಂತೆ ಪ್ರತಿದಿನ ೧೫ ಜನ ಈಚಲು ಮರ ಕಡಿಯಲು ಹೋಗುವುದೆಂಬ ಅವರ ತೀರ್ಮಾನ ಗಮನಾರ್ಹವಾದುದು. ಈ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದವರು ತಂಡದೋಪಾದಿಯಲ್ಲಿ ವಿಭಾಗಿಸಿಕೊಳ್ಳಲು ಮುಖ್ಯವಾದ ಕಾರಣವೆಂದರೆ, ಸರ್ಕಾರ ಒಂದೇ ಬಾರಿಗೆ ಎಲ್ಲರನ್ನು ದಸ್ತಗಿರಿ ಮಾಡಿದರೆ, ಮತ್ತೊಂದು ತಂಡದ ಮೂಲಕ ಸತ್ಯಾಗ್ರಹ ಮುಂದುವರಿಯುತ್ತಿತ್ತು. ಹೀಗೆ ಒಂದೊಂದು ತಂಡದ ಸತ್ಯಾಗ್ರಹಿಗಳು ಪಾಲ್ಗೊಳ್ಳುವುದೆಂದು ತೀರ್ಮಾನಿಸಲಾಯಿತು. ಸತ್ಯಾಗ್ರಹ ಪ್ರಾರಂಭವಾದ ದಿನವೇ ರಾಜಶೇಖರಯ್ಯ ಹಿರೇಮಠ, ಎಂ.ರಾಮರೆಡ್ಡಿ, ತಿಮ್ಮನಗೌಡ್ರು, ನೆಟ್ಕಲ್‌ತಿಪ್ಪೇರುದ್ರಪ್ಪ, ಹನುಮಂತಪ್ಪ ಇನ್ನು

ಮುಂತಾದವರು ಈಚಲುಮರಗಳನ್ನು ಕಡಿಯಲು ಗ್ರಾಮದೇವತೆಯಾದ ಮಾರಮ್ಮನ ದೇವಾಲಯದ ಹತ್ತಿರ ಬಂದರು. ೧೯೩೯ ಸೆಪ್ಟೆಂಬರ್ ೧೮ ರಂದು ಅನೇಕ ಜನರು ದೇವಸ್ಥಾನದ ಹತ್ತಿರ ಸೇರಿದ್ದರು. ಈ ಸತ್ಯಾಗ್ರಹಿಗಳಿಗೆ ಗ್ರಾಮದ ಜನರು ಹೂವಿನ ಹಾರ ಹಾಕಿ ಕುಂಕುಮ ಹಚ್ಚಿ ಶುಭ ಹಾರೈಸುವುದರೊಂದಿಗೆ ನಾನಾ ರೀತಿಯ ಘೋಷಣೆಗಳನ್ನು ಕೂಗಿದರು.

ಗ್ರಾಮಕ್ಕೆ ಎರಡು ಮೈಲಿ ದೂರದಲ್ಲಿರುವ 'ದೇವರ ಮರ' ಹಳ್ಳದ ಹತ್ತಿರಕ್ಕೆ ಸತ್ಯಾಗ್ರಹಿಗಳ ಮೆರವಣಿಗೆ ಹೊರಟಿತು. ಹಳ್ಳದಲ್ಲಿ ಸಾವಿರಾರು ಈಚಲುಮರಗಳಿದ್ದವು. ಆ ಮರಗಳಿಗೆ ಹೆಂಡ ಇಳಿಸಲು ಮಡಕೆಗಳನ್ನು ಕಟ್ಟಿದ್ದರು. ಸ್ಥಳಕ್ಕೆ ಬಂದ ತಕ್ಷಣ ಎಸ್.ನಿಜಲಿಂಗಪ್ಪ, ಬಳ್ಳಾರಿಸಿದ್ದಮ್ಮ, ನಾಗರತ್ನಮ್ಮ ಹಿರೇಮಠ, ಎಸ್.ವಾಸುದೇವರಾವ್, ಚೆನ್ನರೆಡ್ಡಿ ಮುಂತಾದ ನಾಯಕರು ಭಾಷಣ ಮಾಡುತ್ತಾ ಅರಣ್ಯ ಸತ್ಯಾಗ್ರಹದ ಉದ್ದೇಶ ಅದರ ಮಹತ್ವವನ್ನು ವಿವರಿಸಿದರು. ಪ್ರತಿಯೊಬ್ಬ ಸತ್ಯಾಗ್ರಹಿಯು ಒಂದೊಂದು ಮರದ ಬಳಿ ಹೋಗಿ ಕಡಿಯುತ್ತಿರುವ ವೇಳೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಬಂದು ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿದರು. ಸುತ್ತಮುತ್ತ ರೈತರಿಂದ ಕೂಡಿದ ಗುಂಪು ಯಾವುದೇ ರೀತಿಯ ಹಿಂಸಾತ್ಮಕ ಘಟನೆಗಳಲ್ಲಿ ತೊಡಗಲಿಲ್ಲ. ಅಂದಿನ ಮಧ್ಯರಾತ್ರಿ ೧೯೩೯ ಸೆಪ್ಟೆಂಬರ್ ೧೯ರ ಬೆಳಗಿನ ಜಾವ ಎಸ್.ನಿಜಲಿಂಗಪ್ಪನವರನ್ನು ಬಂಧಿಸಲಾಯಿತು. ಅನಂತರ ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ ಹಿರೇಮಠ, ಸಿ.ಚೆನ್ನಾರೆಡ್ಡಿ, ವಾಸುದೇವರಾವ್ ಇನ್ನು ಮುಂತಾದವರನ್ನು ಅವರ ಮನೆಯಲ್ಲಿಯೇ ದಸ್ತಗಿರಿ ಮಾಡಿದರು.[೪೭] ಇವರೆಲ್ಲರಿಗೂ ಎರಡು ವರ್ಷದಿಂದ ಮೂರು ವರ್ಷದವರೆಗೂ ಜೈಲು ಶಿಕ್ಷೆಯಾಯಿತು. ಮಾರನೆಯದಿನ ಗೌಡ್ರು ಜಡಿಯಪ್ಪ, ಏಕಾಂತಪ್ಪ, ನೆಟ್ಕಲ್ ತಿಪ್ಪೇರುದ್ರಪ್ಪ, ಎಸ್.ತಿಪ್ಪಣ್ಣ, ತೋರಣ ಘಟ್ಟದ ಕೃಷ್ಣಪ್ಪ, ದಾಸಪ್ಪ ಮುಂತಾದವರನ್ನು ದಸ್ತಗಿರಿ ಮಾಡಲಾಯಿತು. ಇವರಿಗೆ ಒಂದರಿಂದ ಒಂದೂವರೆ ವರ್ಷ ಜೈಲು ಶಿಕ್ಷೆ ನೀಡಲಾಯಿತು. ತುರುವನೂರಿನ ಬಹುತೇಕ ಜನರೆಲ್ಲರೂ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ಅವರ ಮೇಲೆ ಸರ್ಕಾರ 'ಪುಂಡಗಂದಾಯ' ವಿಧಿಸಿತು. ಈ ತುರುವನೂರ ಈಚಲು ಮರದ ಸತ್ಯಾಗ್ರಹ ಕೇವಲ ಮೈಸೂರು ಸಂಸ್ಥಾನಕ್ಕೆ ಮಾತ್ರ ಸೀಮಿತವಾಗಿರಲಿಲ್ಲ.

೧೯೩೭ರಲ್ಲಿ ಸರ್ಕಾರಿ ಕಟ್ಟಡಗಳ ಮೇಲೆ ಧ್ವಜಾರೋಹಣ

ತುರುವನೂರ ಜನತೆ ೧೯೩೭ರ ಕಾಲಾವಧಿಯಲ್ಲಿ ಸರ್ಕಾರಿ ಶಾಲಾ ಕಟ್ಟಡ, ಆಸ್ಪತ್ರೆಗಳ ಮೇಲೆ ರಾಷ್ಟ್ರೀಯ ಘೋಷಣೆಗಳನ್ನು ಕೂಗುವುದರ ಮೂಲಕ ತ್ರಿವರ್ಣ ಧ್ವಜವನ್ನು ಹಾರಿಸಿದರು. ಅದನ್ನು ತಡೆಯಲು ಬಂದ ಪೊಲೀಸರನ್ನು ತಡೆದು ಈ ಬಾವುಟಗಳನ್ನು ಸ್ವತಂತ್ರ ಬರುವವರೆಗೂ ಹಾರಾಡುತ್ತಿರಬೇಕು ಇಲ್ಲವಾದರೆ, ರಾಷ್ಟ್ರೀಯ ಧ್ವಜ ನಿಮ್ಮ ಠಾಣೆಯ ಮೇಲೆ ಹಾರಾಡುವುದೆಂದು ಎಚ್ಚರಿಕೆ ನೀಡಿದರು. ಬಲಪ್ರಯೋಗ ಮಾಡಲುಬಂದ ದಫೇದಾರ ಹಾಗೂ ಪೊಲೀಸ್‌ರಿಂದ ಲಾಠಿ ಕಸಿದುಕೊಂಡು ಠಾಣೆಗೆ ನುಗ್ಗಿ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ವಂದೇ

ಮಾತರಂ ಘೋಷಣೆ ಕೂಗಿ ಪೊಲೀಸರಿಗೆ ಗಾಂಧಿ ಟೋಪಿ ಹಾಕಿಸಿ ಅವರನ್ನು ಆ ಒಂದು ದಿನಕ್ಕೆ ರಾಷ್ಟ್ರೀಯ ಪೊಲೀಸರನ್ನಾಗಿ ಮಾಡಿದರು.

ತುರುವನೂರ ಮೇಲೆ ಸರ್ಕಾರದ 'ಪುಂಡಗಂದಾಯ'

೧೯೩೯-೪೦ರಲ್ಲಿ ಅಂದಿನ ಮೈಸೂರು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ಲರು ಬಂದಾಗ ಜನತೆ ದಿಕ್ಕಾರ ಕೂಗಿದರು. ಊರಿನ ಜನತೆಯ ಸತ್ಯಾಗ್ರಹ ಹೋರಾಟ ಹಾಗೂ ತಮ್ಮನ್ನು ಅವಮಾನ ಮಾಡಿದರೆಂದು ಸರ್ಕಾರ ಅವರ ಮೇಲೆ ಪುಂಡಗಂದಾಯ ವಿಧಿಸಿತು. ರಾಜಕೀಯ ರಾಷ್ಟ್ರೀಯ ಹೋರಾಟದಲ್ಲಿ ಮೈಸೂರು ರಾಜ್ಯದಲ್ಲಿ ಪುಂಡಗಂದಾಯಕ್ಕೆ ಒಳಪಟ್ಟ ಪ್ರಥಮ ಗ್ರಾಮವೇ ತುರುವನೂರು. ತುರುವನೂರ ಈಚಲು ಮರದ ಚಳವಳಿ, ಪುಂಡಗಂದಾಯ ವಿಧಿಸಿದ ವಿಷಯ ಗಾಂಧೀಜಿಯವರಿಗೂ ತಿಳಿಯುತ್ತದೆ. ತಕ್ಷಣ ಆಪ್ತ ಪ್ರತಿನಿಧಿಗಳಾಗಿದ್ದ ಶ್ರೀ ಮಹಾದೇವ ದೇಸಾಯಿ, ಜೆ.ಸಿ.ಕುಮಾರಪ್ಪ, ಮೊಮ್ಮಗ ಕೃಷ್ಣದಾಸಗಾಂಧಿ ಇವರನ್ನು ತುರುವನೂರಿಗೆ ಕಳುಹಿಸಿಕೊಟ್ಟರು. ೧೯೩೯ ಡಿಸೆಂಬರ್ ೧೨ ರಂದು ಮೈಸೂರು ಸಂಸ್ಥಾನಕ್ಕೆ ಬಂದ ಇವರು ತುರುವನೂರ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿ ಮಾಡಿ ಸತ್ಯಾಗ್ರಹ ಕುರಿತು ಮಾಹಿತಿ ಸಂಗ್ರಹಿಸಿದರು. ಸತ್ಯಾಗ್ರಹಿಗಳಿದ್ದ ಜೈಲು, ಆಸ್ಪತ್ರೆಗಳಿಗೆ ಭೇಟಿ ಮಾಡಿದರು. ಪೊಲೀಸ್‌ರ ದೌರ್ಜನ್ಯ ಮತ್ತು ಸರ್ಕಾರದ ದುರಾಡಾಳಿತವನ್ನು ಖಂಡಿಸುವಂತೆ ಮನವಿಪತ್ರವನ್ನು ಜನತೆ ನೀಡಿದರು. ಈ ಸಂದರ್ಭದಲ್ಲಿ ಗಾಂಧೀಜಿಯವರ ಅನುಯಾಯಿಗಳು ತುರವನೂರ ಜನತೆಗೆ ಹಿಂಸಾ ಮಾರ್ಗವನ್ನು ತ್ಯಜಿಸಿ ಅಹಿಂಸಾಮಾರ್ಗದ ಹೋರಾಟವನ್ನು ನಡೆಸಬೇಕು ಸ್ವಾತಂತ್ರ್ಯ ಹೋರಾಟದ ಅಂತಿಮ ಹಂತದಲ್ಲಿದ್ದೇವೆ ಶಾಂತಿ ಶಿಸ್ತಿಗೆ ಕರೆ ನೀಡಿದರು.

೧೯೪೨ರಲ್ಲಿ ಅಸಹಕಾರ ಚಳವಳಿ ಮುಂದುವರೆದು ಜನರು ಹೆಂಡದ ಅಂಗಡಿಗಳನ್ನು ಸುಡುವುದು, ಶಾಲಾ-ಕಾಲೇಜುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಬಳಕೆ, ಖಾದಿ ಬಂಡಾರದ ಸ್ಥಾಪನೆ, ಟೆಲಿಗ್ರಾಫ್ ತಂತಿ ಕತ್ತರಿಸುವುದು, ಪೊಲೀಸ್ ಠಾಣೆಯ ಲೂಟಿ, ಅಲ್ಲಲ್ಲಿ ಪ್ರಚೋದಕರ ಭಾಷಣಗಳು ಇನ್ನು ಮುಂತಾದ ಘಟನೆಗಳು ನಡೆದವು. ಈ ಘಟನೆಗಳಿಗೆ ಸಂಬಂಧಿಸಿದಂತೆ ಜಿ.ತಿಪ್ಪೇಸ್ವಾಮಿಗೌಡ, ಎಂ.ಶಿವಯ್ಯ, ಆರ್.ವಿರೂಪಣ್ಣ, ಕುಮತಿ ಸಂಜೀವರೆಡ್ಡಿ, ಸಾದಾನಾರಾಯಣರೆಡ್ಡಿ, ಬುಡೇನ್ ಸಾಬ್, ವೀರಣ್ಣರೆಡ್ಡಿ, ಎಂ.ಹನುಮಂತಪ್ಪ, ಕಡಬನಕಟ್ಟೆ ನರಸಿಂಹಪ್ಪ, ಮುಂತಾದವರನ್ನು ಸಿಕ್ಕಲ್ಲೇ ಬಂಧಿಸಿ ಬೆಂಗಳೂರು, ಬಳ್ಳಾರಿ, ಕೂಡ್ಲಿಗಿ ಬಂಧಿಖಾನೆಗೆ ಕಳುಹಿಸಿ ೬ ರಿಂದ ೨ ವರ್ಷದವರೆಗೆ ಶಿಕ್ಷೆ ವಿಧಿಸಲಾಯಿತು. ೧೯೪೦ರಲ್ಲಿ ಕೆ.ಟಿ.ಭಾಷ್ಯಂ ಅಧ್ಯಕ್ಷತೆಯಲ್ಲಿ ಶಿವಮೊಗ್ಗದ ಅಖಿಲ ಮೈಸೂರು ಸಂಸ್ಥಾನದ ಮಹಾ ಅಧಿವೇಶನದಲ್ಲಿ ತುರುವನೂರ ಹೋರಾಟವನ್ನು ಸ್ಮರಿಸಲಾಯಿತು. ೧೯೪೭ರಲ್ಲಿ ಜೆ.ಮಹಾಲಿಂಗಪ್ಪನವರು ತಮ್ಮ ಉಪಾಧ್ಯಾಯ ವೃತ್ತಿಗೆ ತಿಲಾಂಜಲಿ ಹಾಡಿ ಚಿತ್ರದುರ್ಗ ಕೋರ್ಟ್ ಮೇಲೆ ಧ್ವಜಾರೋಹಣದಲ್ಲಿ ಭಾಗಿಯಾಗಿ ೬ ತಿಂಗಳು ಶಿಕ್ಷೆಗೆ ಒಳಗಾದರು. ಅಂತಹ ಸಂದರ್ಭದಲ್ಲಿ ಬುಡೇನ್ ಸಾಬ್,

ಗಾರೆಮನೆ ರಾಮರೆಡ್ಡಿ, ಎಂ.ಕೆ.ಯರ‍್ರಪ್ಪ, ಎಲ್.ತಿಪ್ಪೇರುದ್ರಪ್ಪ, ಎನ್.ಲಕ್ಷ್ಮಣ ರೆಡ್ಡಿ, ಗಣೇಕಲ್ ಹನುಮಂತಪ್ಪ, ಕಾರ್‍ಮೂರು ನಾರಾಯಣರೆಡ್ಡಿ, ನರಸಿಂಹ ರೆಡ್ಡಿ ಮುಂತಾದವರನ್ನು ಚಿತ್ರದುರ್ಗ, ಜಗಳೂರಿನಲ್ಲಿ ಬಂಧಿಸಲಾಯಿತು. ಸ್ವಾತಂತ್ರ್ಯ ಬಂದ ನಂತರ ಇವರೆಲ್ಲ ಬಿಡುಗಡೆ ಗೊಂಡರು. ಸ್ವಾತಂತ್ರ್ಯ ನಂತರ ೧೯೪೮ರಲ್ಲಿ ಊರಿನ ಮಧ್ಯದ ಕೇಂದ್ರ ಬಿಂದು ಆಗಿರುವ ಪಾಳೆಯಗಾರರ ಕಾಲದ ಕೋಟೆಯ ಮೇಲೆ ಮಹಾತ್ಮಾಗಾಂಧಿಯವರ ೮ ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಈಗಲೂ ಅದು ಗಾಂಧಿಕೋಟೆ ಎಂದು ಕರೆಯಲ್ಪಟ್ಟಿದೆ.

೨.೪. ಸ್ಥಳನಾಮ

ಅಲೆಮಾರಿ ಜೀವನದಿಂದ ಆರಂಭವಾದ ಮಾನವನ ಬದುಕು ಕ್ರಮೇಣ ಕೃಷಿಯ ಬೆಳವಣಿಗೆಯೊಂದಿಗೆ ಒಂದೆಡೆ ಸ್ಥಿರವಾಗಿ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು, ಭೌಗೋಳಿಕ ಪರಿಸರದಲ್ಲಿನ ನದಿ, ಬಂಡೆ, ಬೆಟ್ಟದ ಅಂಚಿನಲ್ಲಿ ನೆಲೆಸುತ್ತಿದ್ದರು. ಕೆಲವು ಹಂತಗಳಲ್ಲಿ ಅಲೆಮಾರಿತನವನ್ನು ತೊರೆದ ಸಮುದಾಯಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದವು. ಈ ಹಂತವು ಸಮುದಾಯವು ನೆಲೆಸುವಿಕೆಯ ಗ್ರಾಮ ಕಲ್ಪನೆಯ ಪೂರ್ವಸಿದ್ಧತೆ ಯಾಗಿದೆ. ದೇಶದ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಗ್ರಾಮಗಳ ಪಾತ್ರ ಬಹುದೊಡ್ಡದು. ವಿಶೇಷ ಘಟನಾತ್ಮಕ ಹಿನ್ನೆಲೆಯಲ್ಲಿ ರಚನೆಗೊಂಡ ಪ್ರತಿಗ್ರಾಮವು ಇತಿಹಾಸ ರಚನೆಯಲ್ಲಿ ಪಾತ್ರಗೊಳ್ಳುತ್ತದೆ. ಈ ಕಾರಣದಿಂದ ಗ್ರಾಮ ನಾಮಗಳ ಅಧ್ಯಯನ ಬಹು ಅವಶ್ಯಕವಾಗಿದೆ.[೪೪] ಸ್ಥಳನಾಮಗಳು ಜೀವಂತ ಪಳೆಯುಳಿಕೆಗಳು. ಮೇಲ್ನೋಟಕ್ಕೆ ಸಾಮಾನ್ಯ ಗುರುತಿನ ಚಿಹ್ನೆಗಳಾಗಿ ಕಂಡರು, ಭಾಷಾ ಶಾಸ್ತ್ರಜ್ಞರು, ಇತಿಹಾಸಕಾರರು, ಪುರಾತತ್ವ ಶಾಸ್ತ್ರಕಾರರು ಅವುಗಳನ್ನು ತನ್ನ ಶಾಸ್ತ್ರಕ್ಕೆ ಅನುಗುಣವಾಗಿ ಒರೆಹಚ್ಚಿ ನೋಡಿದಾಗ ಅವುಗಳಿಂದ ಅತ್ಯಂತ ಕುತೂಹಲಕಾರಿ ಅಂಶಗಳು ಹೊರಬರುತ್ತವೆ. ನಮ್ಮ ಹಿಂದಿನ ತಲೆಮಾರಿನವರ ಭಾಷೆ, ಜೀವನ ವಿಧಾನ, ದೃಷ್ಟಿ ವೈಶಾಲ್ಯ, ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳ ಮೇಲೆ ಸ್ಥಳನಾಮಗಳ ಅಧ್ಯಯನವು ಹೊಸ ಬೆಳಕನ್ನು ಚೆಲ್ಲುತ್ತದೆ. ಪರಸ್ಪರ ಹೋಲಿಕೆ ಇರುವ ಸ್ಥಳನಾಮಗಳು ಪ್ರಪಂಚದ ಯಾವುದೇ ಭಾಗದಲ್ಲಿರಲಿ, ಒಂದೇ ರೀತಿಯ ಹೋಲಿಕೆಯುಳ್ಳ ನಾಗರೀಕತೆ ಕುರುಹುಗಳನ್ನು ಕಾಣಲು ಸಾಧ್ಯವಿದೆಯೆಂದು ಸ್ಥಳನಾಮ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಮಾನವರ ನಾಗರೀಕತೆಗಳಲ್ಲಿ ಭಾಷೆಗೆ ವಿಶಿಷ್ಟವಾದ ಸ್ಥಾನವಿದೆ. ಮಾನವ ನಿರ್ಮಿತ ಕೋಟೆ, ಕೊತ್ತಲ, ದೇವಾಲಯಗಳು ಅಮೂಲ್ಯ ವಸ್ತ್ರಾಭರಣಗಳು, ಶಿಲ್ಪಗಳು, ದಾಖಲೆಗಳು, ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಹೇಳಲು ಹೆಸರಿಲ್ಲದೇ ಹೋಗಬಹುದು. ಆದರೆ ನಾವು ಆಡುವ ಭಾಷೆಗಳು ನಮ್ಮ ಜೊತೆಯಲ್ಲಿಯೇ ಜೀವಂತವಾಗಿ ಉಳಿದುಕೊಂಡು ಬರುತ್ತವೆ. ಹೆಚ್ಚೆಂದರೆ ಪರಿಸರಕ್ಕೆ ಹೊಂದಿಕೊಂಡು ಅದರೆಲ್ಲ ಅಲ್ಪಸ್ವಲ್ಪ ಬದಲಾವಣೆಗಳು ಉಂಟಾಗುವುದಲ್ಲದೆ,

ಅಮೂಲಾಗ್ರವಾಗಿ ನಶಿಸಿ ಹೋಗುವ ಸಾಧ್ಯತೆಗಳಂತು ತೀರಾ ಕಡಿಮೆ. ಇಂತಹ ಭಾಷೆಗಳನ್ನು ನಾವು ಜೀವಂತವಾಗಿ ಸ್ಥಳನಾಮಗಳಲ್ಲಿ ಕಾಣಬಹುದು.[೪೯] ಇತ್ತೀಚಿನ ದಿನಗಳಲ್ಲಿ ಸ್ಥಳನಾಮಗಳ ಅಧ್ಯಯನ ಪ್ರಾಮುಖ್ಯತೆ ಪಡೆದಿದೆ. ವೈಜ್ಞಾನಿಕ ಅಧ್ಯಯನಗಳಲ್ಲಿ ಸ್ಥಳನಾಮವು ಒಂದು. ಒಂದು ಮಗುವಿಗೆ ಹುಟ್ಟಿದಾಗ ಇಡುವ ಹೆಸರು ಹಾಗೂ ಅಡ್ಡ ಹೆಸರನ್ನು ಕೊಡುವುದು ಸ್ವಾಭಾವಿಕವಾಗಿದೆ.[೫೦] ಅಂದರೆ ಹೆಸರಿಲ್ಲದೇ ಇರುವಂತಹ ಯಾವುದೇ ಗ್ರಾಮ, ಊರುಗಳಾಗಲೀ, ಇರುವಂತ ಹೆಸರಿಗೂ ಅರ್ಥವಿಲ್ಲದೆ ಇಲ್ಲ. ಗ್ರಾಮಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅದರ ನಿಷ್ಪತ್ತಿ ಅದ್ಯಯನ ಬಹುಮುಖ್ಯವಾದುದು. ಆರಂಭಿಕ ಹಂತದಲ್ಲಿ ಪ್ರಕೃತಿ ನಿಷ್ಠ ಗ್ರಾಮನಾಮಗಳು ಹುಟ್ಟಿಕೊಂಡರು, ಕಾಲಾಂತರದಲ್ಲಿ ವ್ಯಕ್ತಿ ವಾಚಕ, ಸಮುದಾಯವಾಚಕ ಮತ್ತು ವಸ್ತುವಾಚಕ ಮುಂತಾದವುಗಳಿಂದ ಗ್ರಾಮನಾಮವನ್ನು ಹೆಸರಿಸಲಾಯಿತು. ಪ್ರಸ್ತುತ ತುರುವನೂರು ಗ್ರಾಮನಾಮವನ್ನು ಪರಿಶೀಲಿಸಿ ಅದನ್ನು ವ್ಯಕ್ತಿವಾಚಕ, ಪ್ರಾಣಿವಾಚಕ ಎಂದು ವರ್ಗೀಕರಿಸಲಾಗಿದೆ.

ವ್ಯಕ್ತಿ ವಾಚಕ

ವ್ಯಕ್ತಿಗಳ ನಾಮದಿಂದಾದ ಊರ ಹೆಸರುಗಳು. ಇವು ಅಧಿಕ ಪ್ರಮಾಣದಲ್ಲಿ ಇಲ್ಲದಿದ್ದರು ಅವು ಪ್ರಾಚೀನವಲ್ಲವೆಂದು ನಾಗರಿಕತೆಯ ಉಚ್ಛ್ರಾಯ ಸಮಯದಲ್ಲಿ ಅವು ರೂಢಿಗೆ ಬಂದಂತಹವೆಂದು ತಜ್ಞರು ಅಭಿಪ್ರಾಯಪಡುತ್ತಾರೆ.[೭೧] ಪ್ರಾರಂಭದಲ್ಲಿ ನಿರ್ದಿಷ್ಟ ಸ್ಥಳವನ್ನು ಪ್ರಕೃತಿ ದತ್ತವಾಗಿ ಗುರುತಿಸುತ್ತಿದ್ದರು. ಕಾಲಾನಂತರದಲ್ಲಿ ಅಲ್ಲಿನ ಪ್ರಮುಖ ವ್ಯಕ್ತಿಯ ಮೂಲಕ ಸ್ಥಳವನ್ನು ಗುರುತಿಸುವ ರೂಢಿ ಮುಂದುವರಿದುಕೊಂಡು ಬಂದಿತು. ಈ ರೀತಿಯಾಗಿ ವ್ಯಕ್ತಿ ವಾಚಕ ನಾಮಗಳು ಬೆಳೆದುಕೊಂಡು ಬಂದವೆ. ತುರುವನೂರಿನ ವ್ಯಕ್ತಿ ವಾಚಕ ಸ್ಥಳನಾಮವನ್ನು ತಿಳಿಯುವುದಾದರೆ,

ಐತಿಹ್ಯ: ಸ್ಥಳೀಯ ಜನಪದರ ಪ್ರಕಾರ ತುರುವನೂರಲ್ಲಿ ಗವಿಮಾದರಿಯಾದ ಇದನ್ನು ಊರಿನ ಸ್ಥಳೀಯ ನಾಯಕನಾದ 'ತುರುವಪ್ಪ' ಎನ್ನುವವನ ಹೆಸರಿನಲ್ಲಿ ನಿರ್ಮಿಸಲಾಗಿದೆ. ಅದು ಕ್ರಮೇಣ ತುರುವಪ್ಪನ ಗುಡಿ ಎಂದು ಕರೆಯಲ್ಪಟ್ಟಿತು. ಅದೇ ವ್ಯಕ್ತಿಯ ಹೆಸರಿನಲ್ಲಿ ತುರುವಪ್ಪನ + ಊರು= ತುರುವನೂರು ಆಗಿ ಮಾರ್ಪಾಟಾಗಿದೆ.

ಪ್ರಾಣಿವಾಚಕ ಸ್ಥಳನಾಮ

ಪ್ರಾಣಿ ನಾಮದಿಂದಾದ ಊರುಗಳು ಆಗಿದ್ದು, ಇವು ಅಧಿಕ ಪ್ರಮಾಣದಲ್ಲಿ ಇವು ಪ್ರಾಚೀನವಾದವುಗಳೆಂದೇ ತಿಳಿಯಬಹುದು. ಈ ಸ್ಥಳಕ್ಕೆ ಮೊದಲು 'ತುರಬಯಲು' ಎಂದು ಕರೆಯಲಾಗುತ್ತಿತ್ತು. ಇದು ಅತ್ಯಂತ ದಟ್ಟವಾದ ಅರಣ್ಯ, ಬೆಟ್ಟಗಳಿಂದ ಕೂಡಿದ ದುರ್ಗಮವಾದ

ಮಲೆನಾಡಿನ ಕೊನೆಯ ಪ್ರದೇಶವಾಗಿತ್ತು. ಇದಕ್ಕೆ ಸಾಕ್ಷಿಯಾಗಿ ಪಕ್ಕದಲ್ಲಿ ಕಡಬನಕಟ್ಟೆ ಇದೆ. ಮಲೆನಾಡಿನಂತೆ ಕಂಗೊಳಿಸುತ್ತಿದ್ದ ಈ ಭಾಗವು ಅತ್ಯಂತ ಆಕರ್ಷಕವು, ಬೃಹತ್ತಾದ ಹುಲ್ಲುಗಾವಲಿನಿಂದ ಆವೃತಗೊಂಡಿದ್ದಿತು. ಅದಕ್ಕಾಗಿ ಇಲ್ಲಿಗೆ ಮೇವನ್ನು ಮೇಯಲು ತುರುಗಳನ್ನು ತಂದು ಬಿಡಲಾಗುತ್ತಿತ್ತು. ಇಲ್ಲಿನ ಹುಲ್ಲನ್ನು ತಿಂದು, ನೀರನ್ನು ಕುಡಿದರೆ ತುರುಗಳು ಬೇಗ ಗರ್ಭಧರಿಸಿ ಉತ್ತಮ ಕರುಗಳಿಗೆ ಜನ್ಮ ನೀಡುತ್ತಿದ್ದವು ಎಂಬ ಕಲ್ಪನೆಯಿದ್ದಿತು. ಹಾಗಾಗಿ ಈ ಪ್ರದೇಶವನ್ನು ತುರಾಬಯಲು ಎಂದು ಕರೆಯುತ್ತಿದ್ದರು. ಚಿತ್ರದುರ್ಗದ ನಾಯಕರು, ಮೈಸೂರು ಸಂಸ್ಥಾನದ ಕಡೆಗಳಿಂದ ತುರುಗಳನ್ನು ತಂದು ಇಲ್ಲಿ ಬಿಡುತ್ತಿದ್ದರು. ಕಾಲಾಂತರದಲ್ಲಿ ತುರುಗಳು ಇದ್ದಂತ ವನ, ತುರುವನ ಆಯಿತೆಂದು ಹೇಳಬಹುದಾಗಿದೆ.

ತುರ+ಬಯಲು=ತುರಬಯಲು: ತುರು ಎಂದರೆ ಹಸು, ಬಯಲು ಎಂದರೆ ಮೈದಾನ, ವನ.

ತುರ+ವನ=ತುರವನ, ಹಸು+ವನ= ತುರುಗಳನ್ನೊಳಗೊಂಡ ವನ, ತುರುಕರುಗಳನೂರು.

ತುರ್ನೂರು, ತುರವನೂರು ಆಗಿ ಮಾರ್ಪಟ್ಟಿತು.

ತುರುವನೂರಿನ ಪರಿಸರದಲ್ಲಿ ನವಶಿಲಾಯುಗ, ಬೃಹತ್ ಶಿಲಾ ನೆಲೆಗಳಿದ್ದು, ನವಶಿಲಾಯುಗದ ಪಶುಪಾಲಕರೇ ಈ ಪ್ರದೇಶಕ್ಕೆ ಆರಂಭದಲ್ಲಿ ಬಂದು ಹೋಗಿರಬಹುದು. ಅದು ಅಲ್ಲಿಂದ ಬೃಹತ್ ಶಿಲಾ ನೆಲೆಯಾಗಿ ಮಾರ್ಪಟ್ಟಿದೆ. ಮಾನವನ ಪಶುಪಾಲನ ವೃತ್ತಿಯ ಹಿನ್ನೆಲೆಯಲ್ಲಿ ಈ ಭೂಪ್ರದೇಶ ತುರುವನೂರು ಎನ್ನುವಂತಹ ಹೆಸರನ್ನು ಪಡೆದಿದೆ.

ಅಡಿಟಿಪ್ಪಣಿಗಳು

೧. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾದರ್ಶಿನಿ,** ಪು.೧೦೨

೨. ತುರುವನೂರು ನಾಡಾಕಚೇರಿ ಹಾಗೂ ಗಣಕಯಂತ್ರ ಮಾಹಿತಿ

೩. ತುರುವನೂರು ಮಳೆ ಮಾಪನ ಕೇಂದ್ರದ ಮಾಹಿತಿ.

೪. ರಾಮದಾಸರೆಡ್ಡಿ ಎಸ್.ಜಿ., ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಪು.೧೫೦

೫. ನಾಗರಾಜಪ್ಪ ಎಸ್., **ಚಿತ್ರದುರ್ಗ ತಾಲೂಕಿನ ಕೆಲವು ಪ್ರಾಗೈತಿಹಾಸಿಕ ನೆಲೆಗಳು, ಇತಿಹಾಸ ದರ್ಶನ, ಸಂಪುಟ ೨೯,** ಪು.೧೮

೬. ರಾಮದಾಸರೆಡ್ಡಿ ಎಸ್.ಜಿ., **ಪೂರ್ವೋಕ್ತ,** ಪು.೬೮

೭. ನಾಗರಾಜಪ್ಪ ಎಸ್., ಶರತ್‌ಬಾಬು ಕೆ.ಎಸ್., *ಕೂನಬೇವು ಪರಿಸರದ ಇತ್ತೀಚಿನ ಪ್ರಾಗೈತಿಹಾಸಿಕ ಶೋಧಗಳು,* **ಇತಿಹಾಸದರ್ಶನ, ಸಂಪುಟ ೨೭, ಪು.೮-೯**

೮. **ಷೇಕ್ ಆಲಿ ಬಿ.,** ಪೂರ್ವೋಕ್ತ, ಪು.೧೪೪

೭. ವಿಜಯ್ ತಂಬಂಡ ಪೂಣಚ್ಚ(ಸಂ), **ಚರಿತ್ರೆ ವಿಶ್ವಕೋಶ,** ಪು.೭೬

೮. ವೆಂಕಟರತ್ನ ಎಂ.ವಿ. ಮತ್ತು ಪದ್ಮ ಎಂ.ಬಿ., **ಇತಿಹಾಸ ಸಂಶೋಧನಾ ಮಾರ್ಗ,** ಪು.೧

೯. ಷೇಕ್ ಅಲಿ ಬಿ., **ಕರ್ನಾಟಕ ಚರಿತ್ರೆ ಸಂ.೧,** ಪು.೨೮೬

೧೦. ಸೋಮಶೇಖರ ಎಸ್.ವೈ., **ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು,** ಪು.೧೬-೧೭

೧೧. **ಸಂಯುಕ್ತ ಕರ್ನಾಟಕ** ೧೯-೦೩-೨೦೧೦, ಪು.೨

೧೨. ಷೇಕ್ ಅಲಿ ಬಿ., **ಪೂರ್ವೋಕ್ತ,** ಪು.೧೭೦

೧೩. ಜಯಣ್ಣ ಯು., **ಪೂರ್ವೋಕ್ತ,** ಪು.೧೦೬

೧೪. ಷೇಕ್ ಅಲಿ ಬಿ., **ಪೂರ್ವೋಕ್ತ,** ಪು.೧೭೩

೧೫. ಶಿವತಾರಕ್ ಕೆ.ಬಿ., **ಪೂರ್ವೋಕ್ತ,** ಪು.೩೩

೧೬ ಸೋಮಶೇಖರ್ ಎಸ್.ವೈ., ತಿಪ್ಪೇಸ್ವಾಮಿ ಎಸ್., ೫-೧-೨೦೧೧, ಕೂನಬೇವು ಬಳಿ ಬೃಹತ್‌ಶಿಲಾಸಮಾಧಿ ಪತ್ತೆ, ಸಂಯುಕ್ತ ಕರ್ನಾಟಕ, ದಿನಾಂಕ ೧೫.೧೨.೨೦೦೫

೧೭ ವೆಂಕಟರತ್ನ ಎಂ.ವಿ. ಮತ್ತು ಪದ್ಮ ಎಂ.ಬಿ., **ಇತಿಹಾಸ ಸಂಶೋಧನಾ ಮಾರ್ಗ,** ಪು.೧

೧೮. ಷೇಕ್ ಅಲಿ ಬಿ., **ಪೂರ್ವೋಕ್ತ,** ಪು.೨೮೬

೧೯. ಮಹಂತೇಶ್ ಎನ್.ಎಸ್., **ಹೊಸದುರ್ಗ ತಾಲೂಕು ಪರಿಸರ: ಸಾಂಸ್ಕೃತಿಕ ಅಧ್ಯಯನ,** ಪು.೨೫

೨೦. ತೆಲಗಾವಿ ಲಕ್ಷ್ಮಣ್, **ಮೌರ್ಯ ಮತ್ತು ಶಾತವಾಹನಯುಗ,** ಪು.೩೭

೨೧. ಸೂರ್ಯನಾಥ ಕಾಮತ್ ಯು., **ಕರ್ನಾಟಕದ ಗ್ಯಾಜಿಟಿಯರ್, ಭಾಗ ೩,** ಪು.೫೧೧

೨೨. ಲಕ್ಷ್ಮಣ್ ತೆಲಗಾವಿ, **ಚಂದ್ರವಳ್ಳಿ,** ಪು.೨

೨೩. ಮಹಂತೇಶ್ ಎನ್.ಎಸ್., **ಪೂರ್ವೋಕ್ತ,** ಪು.೨೫-೨೬

೨೪. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ,** ಪು.೭

೨೫. ಶರತ್‌ಬಾಬು ಕೆ.ಎಸ್., **ತುರುವನೂರು ಹೋಬಳಿ ಪುರಾತತ್ವೀಯ ಅಧ್ಯಯನ(ಅಪ್ರಕಟಿತ ಎಂ.ಫಿಲ್.ನಿಬಂಧ),** ಪು.೧೨

೨೬. ಶ್ರೀನಿವಾಸಮೂರ್ತಿ ಎಚ್.ಎಂ., ರಾಮಕೃಷ್ಣ ಆರ್., **ಸಮಗ್ರ ಕರ್ನಾಟಕ ಚರಿತ್ರೆ,** ಪು.೪೭

೨೭. ರಾಜಶೇಖರಪ್ಪ ಬಿ., **ಇತಿಹಾಸ ಕಥನ,** ಪು.೩೭, ೩೯

೨೮. ದೀಕ್ಷಿತ ಸಿ.ಕೆ.ವೈ., *ಚಿತ್ರದುರ್ಗ ಜಿಲ್ಲೆಯಲ್ಲಿ ಚಾಲುಕ್ಯರ ಆಳ್ವಿಕೆ,* **ಚಂದ್ರವಳ್ಳಿ,** ಶ್ರೀನಿವಾಸ

ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು.೧೭-೨೦

೨೯. ರಾಜಶೇಖರಪ್ಪ ಬಿ., **ಇತಿಹಾಸ ಕಥನ**, ಪು.೧೨೪

೩೦. ಸೀತಾರಾಂ ಜಾಗೀರ್‌ದಾರ್, *ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಆಳ್ವಿಕೆ*, **ಚಂದ್ರವಳ್ಳಿ**, ಪೂರ್ವೋಕ್ತ, ಪು.೨೩-೨೪

೩೧. ಕೃಷ್ಣಮೂರ್ತಿ ಎಂ.ಎಸ್., *ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು*, **ಹರಿತಿಸಿರಿ**, ಲಕ್ಷ್ಮಣ ತೆಲಗಾವಿ(ಸಂ), ಪು.೩೬೫

೩೨. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ, ಸಂಪುಟ** ೧, ಆದಿ ಕಾಲದಿಂದ ವಿಜಯನಗರ ದವರೆಗೆ, ಪು.೧೬೪

೩೩. ಎಪಿಗ್ರಾಫಿ ಕರ್ನಾಟಕ, ಸಂಪುಟ ೧೧, ಶಾಸನಸಂಖ್ಯೆ ೨೯, ೩೩, ೬೨

೩೪. ದಿವಾಕರ ಆರ್.ಆರ್., **ಪೂರ್ವೋಕ್ತ**, ಪು.೩೪೬

೩೫. ಅದೇ, ಪು.೩೫೧, ೩೫೨

೩೬. ಎಪಿಗ್ರಾಫಿ ಕರ್ನಾಟಕ, ಸಂಪುಟ ೧೧, ಶಾಸನಸಂಖ್ಯೆ ೭೨

೩೭. ಶಿವಣ್ಣ ಕೆ.ಎಸ್., *ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ*, **ಚಂದ್ರವಳ್ಳಿ**, ಪೂರ್ವೋಕ್ತ, ಪು.೮೭

೩೮. ಅಪರ್ಣ ಕೂ.ಸ., **ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಗೋಪಾಲ್ ಆರ್.(ಸಂ)., ಪು.೧೫, ೧೯೬

೩೯. ಶಿವಣ್ಣ ಕೆ.ಎಸ್., **ಪೂರ್ವೋಕ್ತ**, ಪು.೬೧, ೮೫

೪೦. ಕೃಷ್ಣಮೂರ್ತಿ ಪಿ.ವಿ., **ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ**, ಪು.೬೧

೪೧. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), *ಚಿತ್ರದುರ್ಗ ಪಾಳೆಗಾರರ ಆಳ್ವಿಕೆ*, **ಚಂದ್ರವಳ್ಳಿ**, ಪು.೭೮

೪೨. ಗಿರಿಜಾ ಟಿ., **ಪೂರ್ವೋಕ್ತ**, ಪು.೯೦

೪೩. ಶಂಕರನಾರಾಯಣರಾವ್ ಎನ್., **ಸ್ವಾತಂತ್ರ್ಯ ಗಂಗೆಯ ಸಾವಿರ ತೂರಗಳು**, ಪು.೭೯

೪೪. ವೀರತಪ್ಪ ಕೆ., **ಮೈಸೂರು ಸಂಸ್ಥಾನದ ಸ್ವತಂತ್ರ್ಯ ಚಳವಳಿ**, ಪು.೧೧, ೧೨

೪೫. ಸೂರ್ಯಕಾಥ್ ಕಾಮತ್ ಯು.(ಸಂ), **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೨**, ಪು.೫೨೬

೪೬. ವೀರತಪ್ಪ ಕೆ., **ಪೂರ್ವೋಕ್ತ,** ಪು.೫೬

೪೭. ಬಸವರಾಜಪ್ಪ ಹೆಚ್.ಇ., **ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿಗಳು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ**(ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪು.೨೦೨

೪೮. ಸೋಮಶೇಖರ್ ಎಸ್.ವೈ., **ಜಗಳೂರು,** *ಸ್ಥಳನಾಮಗಳು,* ಅಜೇಯಕುಮಾರ್ ಎಚ್., ಪು.೧೫

೪೯. ಗೋಪಾಲಕೃಷ್ಣ ಎ., **ಸ್ಥಳನಾಮ ಅಧ್ಯಯನಗಳು,** ಪು.೩೯

೫೦. ರಾಜೇಗೌಡ ಹೊಸಳ್ಳಿ, **ಹಾಸನ ಜಿಲ್ಲೆಯ ಸ್ಥಳನಾಮಗಳು,** ಪು.೧೨೯

ಅಧ್ಯಾಯ ಮೂರು

ಕಲೆ ಮತ್ತು ವಾಸ್ತುಶಿಲ್ಪ

ಅಧ್ಯಾಯ ಮೂರು

ಕಲೆ ಮತ್ತು ವಾಸ್ತುಶಿಲ್ಪ

೩.೧. ದೇವಾಲಯಗಳು

ಅಲೆಮಾರಿಯಾಗಿದ್ದ ಮಾನವ ನೆಲೆಯಾಗಿ ನಿಲ್ಲಬೇಕೆಂದೂ ಸುರಕ್ಷಿತ ಪ್ರದೇಶದಲ್ಲಿ ವಾಸಿಸಬೇಕೆಂದೂ ಬಯಸಿದನೋ ಅಂದಿನಿಂದ ತನಗಾಗಿ 'ಮನೆ'ಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದನು. ಸುತ್ತಲೂ ಗೋಡೆ, ಅದರ ಮೇಲೆ ವಿವಿಧ ಆಕಾರದ ಮುಚ್ಚಿಗೆ, ಮುಂಭಾಗದಲ್ಲಿ ಬಾಗಿಲು, ಅದರ ಮೇಲೆ ಗಾಳಿ-ಬೆಳಕು ಬರಲು ಕಮಾನು ಹೀಗೆ ಅವನ ಮನೆ ರೂಪಗೊಂಡಿತು. ಇದು ವಾಸ್ತುಶಿಲ್ಪದ ಪ್ರಾಥಮಿಕ ಹೆಜ್ಜೆ.[೧]

ಮಾನವ ಶಕ್ತಿಗೆ ಮೀರಿದ ನಮ್ಮನ್ನು ತಂತಾನೇ ನಿಯಂತ್ರಿಸುವ ಬೇರೆಯದೆಯಾದ ಶಕ್ತಿ ಜೊತೆಗೆ ಪ್ರಾಣಿ, ಮಳೆ, ಗುಡುಗು, ಸಿಡಿಲು ಮುಂತಾದ ಪ್ರಕೃತಿಯ ಶಕ್ತಿಗಳಿಂದ ಭಯಭೀತನಾಗಿ ತನ್ನ ರಕ್ಷಣೆಗಾಗಿ ದೇವರ ಮೊರೆ ಹೋಗತೊಡಗಿದನು. ಅಷ್ಟೇ ಅಲ್ಲದೆ ನಿಸರ್ಗ ಶಕ್ತಿಗಳನ್ನು ಪವಿತ್ರ, ಪ್ರೇಮ, ಪೂಜಾರ್ಹ, 'ಆಶ್ಚರ್ಯವತ್ ಪಶ್ಯತಿ' ಎಂದು ಭಾವಿಸಕೊಂಡನು. ಇದರಿಂದ ಅಂತಹ ಆಗೋಚರ ಶಕ್ತಿಗೆ ಒಂದು ರೂಪ ನೀಡಿ, ಅದನ್ನು ಪ್ರತಿಮೆಯನ್ನಾಗಿಸಿ ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ಕ್ರಮೇಣ ಇಂತಹ ಪವಿತ್ರ ಸ್ಥಳಕ್ಕೆ ಬೇರೆ ಯಾರು ಅಜಾಗರೂಕರಾಗಿ ಓಡಾಡುವುದನ್ನು ನಿಷೇಧಿಸಿ, ಅದಕ್ಕೆ ರಕ್ಷಣೆಯನ್ನು ಒದಗಿಸಬೇಕೆಂದು ದೇವಾಲಯಗಳ ರಚನೆ ಪ್ರಾರಂಭವಾಯಿತು.[೨] ತನಗಾಗಿ ಕಟ್ಟಿಕೊಂಡ ಮನೆ 'ಗೃಹವಾಸ್ತುಶಿಲ್ಪ' ಎನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು, 'ಧಾರ್ಮಿಕ ವಾಸ್ತುಶಿಲ್ಪ' ಅಥವಾ 'ದೇವಾಲಯ ವಾಸ್ತುಶಿಲ್ಪ' ಎನಿಸಿತು.[೩] ಇಂದಿಗೂ ಸ್ಥಳೀಯ ಚರಿತ್ರೆಯ ರಚನೆಗೆ ಸಹಾಯಕವಾಗಿರುವ ಆಕರಗಳಲ್ಲಿ ದೇವಾಲಯಗಳು ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ. ಇಂತಹ ದೇವಾಲಯಗಳ ಅಧ್ಯಯನದಿಂದ ಸಂಸ್ಕೃತಿ ಕಲೆ, ವಾಸ್ತುರಚನೆ, ಮೂರ್ತಿಶಿಲ್ಪ, ರಾಜಾಶ್ರಯ, ದತ್ತಿ, ಧರ್ಮ, ಹಬ್ಬ ಹರಿದಿನಗಳು, ಜಾತ್ರೆ ಮತ್ತು ಉತ್ಸವಗಳು, ಸಂಗೀತ, ಶಿಕ್ಷಣ ನ್ಯಾಯಿಕವಾದ ಅಂಶಗಳನ್ನು ತಿಳಿಯಲು ಸಹಾಯಕವಾಗಿದೆ.

ಪರಿಸರದಲ್ಲಿ ಆಳ್ವಿಕೆ ಮಾಡಿದ ರಾಜ ಮನೆತನಗಳಿಂದ ಅನೇಕ ರಚನಾತ್ಮಕ ದೇವಾಲಯಗಳು ನಿರ್ಮಾಣಗೊಂಡಿದ್ದು, ಆ ರಾಜಮನೆತನಗಳ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

೩.೧.೧. ವಾಸ್ತುಶಿಲ್ಪದ ಪ್ರಾಚೀನತೆ

ಗರುಡ ಪುರಾಣವು ಗ್ರಾಮಗಳು, ನಗರಗಳು, ಕೋಟೆಗಳು, ಪಟ್ಟಣಗಳು, ಮಠಗಳು, ವಾಸ್ತುಗಳೆಂದು ಹೇಳಿದೆ.[೪] "ನಿವಾಸಾತ್ ಸರ್ವ ಭೂತಾನಾಂ ವಾಸ್ತುರೀತಿ ಶಬ್ದಿತಃ" ಎಲ್ಲಾ ಪ್ರಾಣಿಗಳ ವಸತಿಗಾಗಿ ವಾಸ್ತುಪದವು ಬಳಕೆಗೊಂಡಿದೆ. ಇದು ಅಮರಕೋಶದ ವ್ಯಾಖ್ಯೆ ಮಯಮತ ಗ್ರಂಥವು ವಾಸ್ತುಶಬ್ಧವನ್ನು ಎರಡು ಹಂತಗಳಲ್ಲಿ ವಿವರಿಸಿದೆ. ಅಮರ್ತ್ಯಾಶ್ಚೈವ ಮರ್ತ್ಯಾಶ್ಚಯತ್ರ ಯತ್ರವಸಂತಿ ಹಿ ತದ್ವಸ್ತು ಇತಿ ಮತಂ ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ವಸ್ತುವನ್ನು ಆಶ್ರಯಿಸಿದುದು ವಾಸ್ತು. "ಪ್ರಾಸಾದಾದೀನಿ ವಾಸ್ತೂನಿ ದಾಸ್ತುತ್ವಾತ್ ವಸ್ತು ಸಂಶ್ರಯುತ್" ಪ್ರಸಾದ, ಹರ್ಮ್ಯ ಇತ್ಯಾದಿಗಳು ವಸ್ತುವನ್ನು ಆಶ್ರಯಿಸಿದ್ದು, ವಾಸ್ತು ಎಂದೆನಿಸಿಕೊಳ್ಳುತ್ತದೆ. ಆದ್ದರಿಂದ ವಾಸ್ತು ಎಂದಲ್ಲಿ ವಸತಿ ಯೋಗ್ಯ ಭೂಮಿ ಹಾಗೂ ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ.[೫] ತುರುವನೂರು ಗ್ರಾಮದಲ್ಲಿ ಕಂಡುಬರುವ ದೇವಾಲಯಗಳನ್ನು ಅಧ್ಯಯನ ಮಾಡುವುದಕ್ಕಿಂತ ಮುಂಚೆ ವಿವಿಧ ಕಾಲಘಟ್ಟದಲ್ಲಿ ದೇವಾಲಯಗಳು ವಿಕಾಸ ಹೊಂದಿದ ರೀತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ದೇವಾಲಯ ಧಾರ್ಮಿಕ, ಶ್ರದ್ಧೆ, ನಂಬಿಕೆ, ಭಕ್ತಿಯ ಸಂಕೇತವಾಗಿದೆ. ದೇವಾಲಯವನ್ನು ದೇವ+ಆಲಯ ಎಂದು ಬಿಡಿಸಿದಾಗ ದೇವ ಎಂದರೆ ದೇವರು ಆಲಯ ಎಂದರೆ, ಕಟ್ಟಡ ಎಂಬಂತ ಅರ್ಥವನ್ನು ಪಡೆದುಕೊಳ್ಳುತ್ತದೆ. ಅಂದರೆ ದೇವರು ವಾಸಿಸಲು ಇರುವ ಜಾಗ, ಸ್ಥಾನ, ಎಡೆ ಎಂದರ್ಥವಾಗುತ್ತದೆ.[೬]

ಶುಕ್ರ ನೀತಿಸಾರ ಗ್ರಂಥವು ದೇವಾಲಯ, ಅರಮನೆ ಅಥವಾ ರಾಜಗೃಹ ದೇವತಾ ಮೂರ್ತಿಗಳ ರಚನೆ ಸರ್ವಜನ ಉಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳನ್ನು ಶಿಲ್ಪಶಾಸ್ತ್ರದ ಅಡಿಯಲ್ಲಿ ಗುರುತಿಸುತ್ತದೆ.[೭] ಮೂರ್ತಿಗಳ ಪೂಜೆ ಆರಂಭವಾದ ಬಳಿಕ ಅವುಗಳ ರಕ್ಷಣೆಗೆ ವಾಸ್ತುರೂಪ ನೀಡಲಾಯಿತು. ಕಾಲಾನಂತರದಲ್ಲಿ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಮೌರ್ಯರಿಗೆ ಸಲ್ಲುತ್ತದೆ.[೮] ಈ ದೃಷ್ಟಿಯಿಂದ ಅಶೋಕನ ಕಾಲ ಬಹಳ ಮುಖ್ಯವಾದುದು. ಅಲ್ಲಿಯವರೆಗೆ ಅಂದರೆ ಕ್ರಿ.ಪೂ.೩ನೇ ಶತಮಾನದವರೆಗೆ ಭರತಖಂಡದ ವಾಸ್ತುಶಿಲ್ಪದ ಚರಿತ್ರೆ ಅಸ್ಪಷ್ಟವೆಂದೇ ಹೇಳಬೇಕು. ಧಾರ್ಮಿಕ ಅಶೋಕನ ಕಾಲದಲ್ಲಿ ಬೌದ್ಧಧರ್ಮ ರಾಜನ ಧರ್ಮ ಆದುದಲ್ಲದೆ ರಾಜ್ಯದ ಧರ್ಮವು ಆಯಿತು. ವಾಸ್ತುಶಿಲ್ಪದ ಮೇಲೆ ಬೌದ್ಧಧರ್ಮ ಅಚ್ಚಳಿಯದ ಪ್ರಭಾವವನ್ನು ಬೀರಿತು. ಬುದ್ಧನ ಅವಶೇಷಗಳ ರಕ್ಷಣೆಗಾಗಿ ಅನೇಕ ಸ್ತೂಪಗಳು ನಿರ್ಮಾಣವಾದವು. ಕಲ್ಲುಗಳನ್ನು ಕೊರೆದು

ಗುಹೆಗಳನ್ನು ನಿರ್ಮಿಸಿದರು. ಇವು ವಾಸ್ತುಶಿಲ್ಪದ ಮೇಲೆ ಅಚ್ಚಳಿಯದೇ ಪ್ರಭಾವವನ್ನು ಬೀರಿದವು. ಕ್ರಿ.ಶ.೨೫೦ ರಿಂದ ೪೫೦ರವರೆಗೆ ಬೆಳೆದು ಬಂದ ವಾಸ್ತುಶಿಲ್ಪದ ಯುಗವನ್ನು ಗಾಂಧಾರ ರೀತಿಯ ವಾಸ್ತುಶಿಲ್ಪ ಎಂದು ಕರೆಯಲಾಗಿದೆ. ಇವುಗಳೆಲ್ಲ ಪ್ರಾರಂಭದ ಕಟ್ಟಡಗಳು ಒರಟು ರೂಪದ ಕಲ್ಲು ಗುಂಡುಗಳಿಂದ ನಿರ್ಮಿತವಾಗುತ್ತಿದ್ದವು. ಗಾಂಧಾರ ವಾಸ್ತುಶಿಲ್ಪದ ಕಲೆಯಲ್ಲಿಯೇ ಮೂಡಿಬಂದ ಮತ್ತೊಂದು ಮಾದರಿಯೆಂದರೆ, ಮಥುರಾ ರೀತಿ. ಚೈತ್ಯಾಲಯಗಳ ಕಮಾನುಗಳನ್ನು ಮತ್ತು ಅದರ ಮುಖ್ಯ ಅಂಶಗಳನ್ನು ಮಥುರಾ ರೀತಿಯು ಅನುಕರಿಸಿತು.[೯]

ಹಿಂದೂ ದೇವಾಲಯಗಳನ್ನು ಕಲ್ಲಿನಿಂದ ನಿರ್ಮಿಸುವುದರಲ್ಲಿ ಹೊಸ ಹೆಜ್ಜೆಯನ್ನಿಟ್ಟಿದ್ದು ಗುಪ್ತರ ಯುಗ. ಹಿಂದೂ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಗುಪ್ತರಿಂದ ದೇವಾಲಯಗಳ ರಚನೆಗೆ ವಿಶೇಷ ಪ್ರೋತ್ಸಾಹ ಪೋಷಣೆಗಳು ಸಿಕ್ಕವು. ಇದರ ಕಾಲದಲ್ಲಿ ಅಂದರೆ ೪ನೇ ಶತಮಾನದಿಂದ ೬ನೇ ಶತಮಾನದವರೆಗೆ ದೇವಾಲಯದ ನಿರ್ಮಾಣ ಕಲೆ ಗಮನಾರ್ಹವಾದ ವಿಕಾಸವನ್ನು ಪಡೆಯಿತು. ಕರ್ನಾಟಕದಲ್ಲಿ ಚಾಲುಕ್ಯರಿಗಿಂತ ಹಿಂದೆ ನಿರ್ಮಿತವಾದ ಎಲ್ಲಾ ದೇವಾಲಯಗಳನ್ನು ಮಾರ್ಶ್ಯಾಸ್‌ರವರು 'ಕದಂಬಶೈಲಿ' ಎಂದು ಕರೆದಿದ್ದಾರೆ. ಹಲಸಿಯ ಹಟ್ಟಿಕೇಶ್ವರ, ಕಲ್ಲೇಶ್ವರ, ನರಸಿಂಹ ದೇವಾಲಯಗಳು ಕದಂಬರ ಕಾಲದ ವಾಸ್ತುಶಿಲ್ಪ ಶೈಲಿಯ ದ್ಯೋತಕಗಳಾಗಿವೆ. ಕರ್ನಾಟಕದ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ನಡೆಸಿದ ಕೀರ್ತಿ ಬಾದಾಮಿ ಚಾಲುಕ್ಯರ ಮನೆತನಕ್ಕೆ ಸಲ್ಲುತ್ತದೆ. ಇವರ ಕಾಲದಲ್ಲಿ ದ್ರಾವಿಡ, ನಾಗರ, ವೇಸರ ಶೈಲಿಗಳ ದೇಗುಲಗಳನ್ನು ನಿರ್ಮಿಸಿದ್ದಾರೆ. ಇವರ ಕಾಲದ ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ, ಪಾಪನಾಥ, ಐಹೊಳೆಯಲ್ಲಿ ಲಾಡಾಖಾನ್, ದುರ್ಗಾ ದೇವಾಲಯ, ಮೇಗುತಿ ದೇವಾಲಯ ಮುಂತಾದ ಗುಹಾಲಯಗಳನ್ನು ಕಾಣುತ್ತೇವೆ. ಇವರು ವಾಸ್ತುಶಿಲ್ಪಕ್ಕೆ ನೀಡಿದ ಅಪಾರ ಕೊಡುಗೆಯಿಂದಾಗಿ ಈ ಕಾಲವನ್ನು 'ಸುವರ್ಣಯುಗ'[೧೦] ಎನ್ನುತ್ತಾರೆ.

ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ವಾಸ್ತುಶಿಲ್ಪ ಕ್ಷೇತ್ರ ಗಟ್ಟಿಯಾದ ಸ್ವರೂಪವನ್ನು ಪಡೆಯಿತು. ಇದರ ವಾಸ್ತುಶೈಲಿಯನ್ನು ಎಲ್ಲೋರಾದ ಕೈಲಾಸನಾಥ ದೇವಾಲಯ ಮತ್ತು ಅಲ್ಲಿನ ಗುಹಾಲಯಗಳಲ್ಲಿ ಕಾಣಬಹುದು. ನಂತರದಲ್ಲಿ ಕಲ್ಯಾಣಿ ಚಾಲುಕ್ಯರು ಕರ್ನಾಟಕದ ವಾಸ್ತುಶಿಲ್ಪ ಕ್ಷೇತ್ರಕ್ಕೆ ನವೀನತೆಯನ್ನು ತುಂಬಿದರು. ಚಾಲುಕ್ಯರು ಬಳಸಿದ ಒರಟಾದ ಕೆಂಪು ಮರಳು ಶಿಲೆಯನ್ನು ಬಿಟ್ಟು ಮೃದು ಮತ್ತು ನಯವಾದ ನೀಲಿ ಛಾಯೆಯ ಬಳಪದ ಕಲ್ಲನ್ನೇ ಬಳಸಿದ್ದಾರೆ. ಇವರ ಕಾಲದ ದೇವಾಲಯಗಳೆಂದರೆ, ಗದಗಿನ ತ್ರಿಕೂಟೇಶ್ವರ, ಹಾನಗಲ್ಲಿನ ತಾರಕೇಶ್ವರ, ಬಂಕಾಪುರದ ೬೦ ಕಂಬದ ದೇವಾಲಯ[೧೧] ಇನ್ನು ಮುಂತಾದವುಗಳು ಕಂಡುಬಂದಿವೆ. ಹೊಯ್ಸಳರ ಕಾಲವನ್ನು ದೇವಾಲಯಗಳ ವಿಕಾಸದಲ್ಲಿ ಆಕರ್ಷಕವಾದ ಕಾಲಘಟ್ಟ ಎನ್ನಬಹುದು. ಹೊಯ್ಸಳರ ಕಾಲದ ಪ್ರಮುಖ ಅಂಶಗಳೆಂದರೆ, ಕಟ್ಟಡದ ಒಟ್ಟು

ರೂಪ ಮತ್ತು ತಲಾವಿನ್ಯಾಸ, ಗೋಡೆಯ ರಚನೆ ಮತ್ತು ಅದರ ಮೇಲಿನ ಅಲಂಕಾರಗಳು, ಗೋಪುರ ಅಥವಾ ಶಿಖರಗಳ ರಚನೆ, ಕಂಬಗಳ ನಿರ್ಮಾಣದಲ್ಲಿ ಕಂಡುಬರುವ ಕುಶಲತೆ, ಇವರು ಕಪ್ಪು ನೀಲಿ ಛಾಯೆಯುಳ್ಳ ಬಳಪದ ಕಲ್ಲನ್ನು ಬಳಸಿದ್ದಾರೆ.[೨] ಇಡೀ ದಕ್ಷಿಣ ಭಾರತಕ್ಕೆ ಧಾರ್ಮಿಕ ರಕ್ಷಣೆಯನ್ನು ಕೊಟ್ಟಂತಹ ಕರ್ನಾಟಕ ಸಾಮ್ರಾಜ್ಯವೆಂದರೆ, ವಿಜಯನಗರ ಸಾಮ್ರಾಜ್ಯ. ಎಲ್ಲಾ ಕಲೆಗಳಂತೆ ವಾಸ್ತುಶಿಲ್ಪ, ಶಿಲ್ಪಗಳು ಈ ಸಾಮ್ರಾಜ್ಯದ ಅಡಿಯಲ್ಲಿ ಪೋಷಣೆಯನ್ನು ಪಡೆದವು. ಗಟ್ಟಿಯಾದ ಗ್ರಾನೈಟ್ ಶಿಲೆಯನ್ನು ಬಳಸಿ ದೇವಾಲಯ ಗಳನ್ನು ನಿರ್ಮಿಸಿದ್ದಾರೆ. ಇವರ ಕಾಲದ ದೇವಾಲಯಗಳು ಹಂಪಿ, ಲೇಪಾಕ್ಷಿ, ಕಂಚಿ, ತಿರುಪತಿ, ಮಧುರೈ[೩] ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ. ಇವರ ಕಾಲದಲ್ಲಿ ದ್ರಾವಿಡ ಶೈಲಿಯು ಉನ್ನತ ಹಂತವನ್ನು ತಲುಪಿತು. ವಿಜಯನಗರ ಪತನಾನಂತರ ಚಿತ್ರದುರ್ಗದಲ್ಲಿ ಪಾಳೆಯಗಾರರು ತಮ್ಮ ಕಲೆಯನ್ನು ಮುಂದುವರಿಸಿಕೊಂಡು ಬಂದರು.

ಚಿತ್ರದುರ್ಗದ ಪಾಳೆಯಗಾರರ ಕಾಲದ ದೇವಾಲಯಗಳನ್ನು ಪ್ರಮುಖವಾಗಿ ಗುಹಾ ದೇವಾಲಯಗಳು ಮತ್ತು ರಾಚನಿಕ(ಕಟ್ಟಡ) ದೇವಾಲಯಗಳೆಂದು ಗುರುತಿಸಬಹುದು. ಇವುಗಳೆಲ್ಲ ಕೆಲವು ಮೂಲ ರೂಪದಲ್ಲಿದ್ದರೆ, ಇನ್ನು ಕೆಲವು ಜೀರ್ಣೋದ್ಧಾರ ಗೊಂಡಿದ್ದು, ಮತ್ತೆ ಕೆಲವು ಅವಸಾನದ ಅಂಚಿನಲ್ಲಿವೆ. ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿದ ಚಿತ್ರದುರ್ಗದ ಪಾಳೆಯಗಾರರು ಹಲವಾರು ದೇವಾಲಯ ನಿರ್ಮಿಸಿ ಕಲೆ ಮತ್ತು ವಾಸ್ತುಶಿಲ್ಪ ಪರಂಪರೆಯುನ್ನು ಶ್ರೀಮಂತಗೊಳಿಸಿದರು. ಅವರ ಕಲಾ ಆಸಕ್ತಿಗೆ ಸಾಕ್ಷಿಯಾಗಿ ತುರುವನೂರು ಪರಿಸರದಲ್ಲಿ ನಿರ್ಮಾಣಗೊಂಡ ದೇವಾಲಯ ಗಳನ್ನು ಕಾಣಬಹುದು. ಈ ದೇವಾಲಯಗಳು ವಿಜಯನಗರ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿವೆಯಾದರೂ, ಸಾಕಷ್ಟು ಪ್ರಾದೇಶಿಕ ಪ್ರಭಾವಕ್ಕೆ ಒಳಗಾಗಿವೆ. ಪಾಳೆಯಗಾರರ ರಾಜಕೀಯ ಮತ್ತು ಆರ್ಥಿಕ ಇತಿಮಿತಿಗಳು ಹಾಗೂ ದೇವಾಲಯಗಳ ನಿರ್ಮಾಣದಲ್ಲಿ ಸ್ಥಳೀಯ ಶಿಲೆಯೇ ಬಳಕೆಯಾಗಿದೆ. ಪಾಳೆಯಗಾರರು ಸ್ಮಾರಕಗಳ ನಿರ್ಮಾಣಕ್ಕೆ ಪ್ರಧಾನವಾಗಿ ಚಿತ್ರದುರ್ಗ ಮತ್ತು ಸುತ್ತಲಿನ ಬೆಟ್ಟಗುಡ್ಡಗಳಲ್ಲಿ ವಿಪುಲವಾಗಿ ದೊರೆಯುವ ಕಣಶಿಲೆಯನ್ನೆ ಬಳಸಿದ್ದಾರೆ. ಸಾಮಾನ್ಯವಾಗಿ ದೇವಾಲಯುಗಳ ಅಧಿಷ್ಠಾನ, ಭಿತ್ತಿ, ಕಂಬಗಳು, ಬಾಗಿಲುಗಳು(ದ್ವಾರಬಂಧ), ಮುಚ್ಚಿಗೆ(ಛತ್ತು), ಪ್ರಾಕಾರ, ಮಂಟಪಗಳು, ದೀಪಸ್ತಂಭ, ಗರುಡಸ್ತಂಭ, ಸ್ಥಳೀಯ ಕಲೆಯಲ್ಲೆ ನಿರ್ಮಾಣಗೊಂಡಿರುವುದು ಗಮನಾರ್ಹವಾಗಿದೆ.

ತುರುವನೂರಲ್ಲಿನ ದೇವಾಲಯಗಳ ವಾಸ್ತುವಿವರ

ತುರುವನೂರಿನಲ್ಲಿನ ದೇವಾಲಯಗಳು ನೊಳಂಬ ಹಾಗೂ ವಿಜಯನಗರೋತ್ತರ ಪಾಳೆಯಗಾರರ ಕಾಲಕ್ಕೆ ಸಂಬಂಧಿಸಿದಂತೆ ಕಂಡುಬಂದಿವೆ. ದೇವಾಲಯಗಳ ವಾಸ್ತು ರಚನೆಯ ಆಧಾರದಿಂದ ಅವುಗಳ ಕಾಲಮಾನವನ್ನು ನಿರ್ಧರಿಸಲಾಗಿದೆ. ಅಂತಹ ದೇವಾಲಯಗಳೆಂದರೆ,

೧. ಹೆಸರು : ರಾಮಲಿಂಗೇಶ್ವರ ದೇವಾಲಯ

ಕಾಲ : ಕ್ರಿ.ಶ.೯-೧೧ನೇ ಶತಮಾನ(ಜೀರ್ಣೋದ್ಧಾರಗೊಂಡಿದೆ)

ಸ್ಥಳ : ಕೋಟೆಯ ಮುಂಭಾಗ

ಅಭಿಮುಖ : ಪೂರ್ವಾಭಿಮುಖ

ಧರ್ಮ : ಶೈವಪಂಥ

ಈ ದೇವಾಲಯ ಮೂಲತಃ ಶೈವಧರ್ಮದ್ದು. ಈ ದೇವಾಲಯ ವಾಸ್ತುಶೈಲಿಯ ರಚನೆಯ ಸರಳವಾದ ಲಕ್ಷಣಗಳಿಂದ ಕೂಡಿದೆ. ಈ ದೇವಾಲಯವು ಕ್ರಿ.ಶ.೮-೯ನೇ ಶತಮಾನದ ನೊಳಂಬ ಕಾಲದಲ್ಲಿ ರಚನೆ ಆಗಿರುವುದು. ಪ್ರಸ್ತುತ ಇದು ೧೯ ಮತ್ತು ೨೦ನೇ ಶತಮಾನದ ಸ್ಥಳೀಯ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ತಳವಿನ್ಯಾಸದಲ್ಲಿ ಗರ್ಭಗುಡಿ, ಅಂತರಾಳ ಮತ್ತು ತೆರೆದ ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಗರ್ಭಗೃಹದ ಮುಂಭಾಗದಲ್ಲಿನ ಶಾಸನ ಲಿಂಗದ ಆಧಾರದ ಮೇರೆಗೆ ನೊಳಂಬರ ಕಾಲದ್ದು ಎಂದು ನಿರ್ಧರಿಸಲಾಗಿದೆ. ಈ ದೇವಾಲಯ ನಿರ್ಮಾಣಕ್ಕೆ ಸ್ಥಳೀಯವಾಗಿ ಲಭ್ಯವಿದ್ದಂತಹ ಕಪ್ಪುಶಿಲೆ ಬಳಸಲಾಗಿದೆ. ಗುಹೆಯೋಪಾದಿಯಲ್ಲಿದ್ದ ದೇವಾಲಯ ಕಾಲಾಂತರದಲ್ಲಿ ಗೋಡೆ ಕುಸಿತದಿಂದಾಗಿ ೧೯೭೦ರಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ.

ದೇವಾಲಯದ ಗರ್ಭಗೃಹ ಸರಳವಾಗಿದ್ದು, ಒಳಭಾಗದಲ್ಲಿ ಎತ್ತರದ ಪೀಠದ ಮೇಲೆ ಒಂದೂವರೆ ಅಡಿ ಎತ್ತರದ ಶಿವನ ಲಿಂಗ ಹಾಗೂ ಪದ್ಮಗಳಿಂದ ಅಲಂಕೃತಗೊಂಡ ಭುವನೇಶ್ವರಿಯು ಕಂಡುಬರುತ್ತದೆ. ಗರ್ಭಗೃಹದ ದ್ವಾರಬಂಧವು ಸರಳವಾಗಿದ್ದು ಎತ್ತರವಾಗಿದೆ. ಗರ್ಭಗೃಹದ ನಂತರ ಅಂತರಾಳದಲ್ಲಿ ಮೂರು ಅಡಿ ಉದ್ದದ, ಎರಡು ಅಡಿ ಅಗಲದ ನಂದಿ ವಿಗ್ರಹ ಒಳಗೊಂಡು ನೆಲಮಟ್ಟದಿಂದ ಕೆಳಭಾಗದಲ್ಲಿದೆ. ಅಂತರಾಳದ ದ್ವಾರಬಂಧವು ಸರಳವಾಗಿದೆ. ನಂತರ ಆಧುನಿಕ ಕಾಲದ ತೆರೆದ ಮಂಟಪವಿದೆ. ದೇವಾಲಯದ ಹೊರ ವಿನ್ಯಾಸದಲ್ಲಿ ಪ್ರದಕ್ಷಿಣಾಪಥ, ಅಧಿಷ್ಠಾನ, ಭಿತ್ತಿ, ಕಪೋತ, ಶಿಖರ ಸ್ತೂಪಿ ಇದೆ. ಅಧಿಷ್ಠಾನವು ಸರಳವಾಗಿದ್ದು, ಯಾವುದೇ ಅಲಂಕಾರಗಳಿಂದ ಕೂಡಿರುವುದಿಲ್ಲ. ನಂತರದ ಭಿತ್ತಿಯಲ್ಲಿ ಸರಳ ಅಡ್ಡ ಪಟ್ಟಿಕೆಗಳ ರಚನೆಗಳು, ಸೂರ್ಯ, ಚಂದ್ರ, ಲಿಂಗ, ನಾಗಶಿಲ್ಪ, ಪುಷ್ಪಬಳ್ಳಿಯ ಅಲಂಕಾರಗಳಿವೆ. ನಂತರದಲ್ಲಿ ಸರಳಪಟ್ಟಿಕೆಯ ಕಪೋತ, ಗರ್ಭಗೃಹದ ಮೇಲ್ಭಾಗದಲ್ಲಿ ಶಿಖರ, ನಾಲ್ಕು ದಿಕ್ಕಿಗೂ ನಾಲ್ಕು ಗೂಡುಗಳಲ್ಲಿ ಶಿವ, ಗಣೇಶ, ನಂದಿ, ಶಿವ ಪಾರ್ವತಿಯರ ಮೂರ್ತಿಗಳು, ಸರಳ ಅಲಂಕಾರಗಳು ಕಾಣಬಹುದು. ನಂತರದಲ್ಲಿ ಸ್ತೂಪಿ, ಕಳಸವಿದೆ.

೨. ಹೆಸರು : ಕಲ್ಲೇಶ್ವರ ದೇವಾಲಯ

ಕಾಲ : ಕ್ರಿ.ಶ.೧೧-೧೨ನೇ ಶತಮಾನ(ಜೀರ್ಣೋದ್ಧಾರಗೊಂಡಿದೆ)

ಸ್ಥಳ : ಕೋಟೆಯ ಪಕ್ಕದಲ್ಲಿದೆ.

ಅಭಿಮುಖ : ಪೂರ್ವಾಭಿಮುಖ

ಧರ್ಮ : ಶೈವಪಂಥ

ಕಲ್ಲೇಶ್ವರ ದೇವಾಲಯ ಗಾಂಧೀಜಿ ಕೋಟೆಯ ಪಕ್ಕದಲ್ಲಿದೆ. ಈ ದೇವಾಲಯ ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಪೂರ್ವಾಭಿಮುಖವಾಗಿದ್ದು, ದೇವಾಲಯದ ತಳ ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ತೆರೆದ ರಂಗಮಂಟಪವಿದೆ. ಗರ್ಭಗೃಹ ಚೌಕಾಕಾರದಲ್ಲಿದ್ದು, ಒಂದು ಅಡಿ ಎತ್ತರ ಪೀಠದ ಮೇಲೆ ಲಿಂಗವಿದೆ. ಗರ್ಭಗೃಹದ ಮೇಲ್ಚಾವಣಿಯಲ್ಲಿ ಅಷ್ಟಪದ್ಮಗಳಿಂದ ಅಲಂಕೃತಗೊಂಡ ಭುವನೇಶ್ವರಿ ದ್ವಾರಬಂಧವು ಹಿತ್ತಾಳೆಯ ಕವಚದಿಂದ ಕೂಡಿದೆ. ಅದರಿಂದ ಮೂಲಸ್ವರೂಪವನ್ನು ತಿಳಿಯಲಾಗಿಲ್ಲ. ನಂತರದ ಅಂತರಾಳದಲ್ಲಿ ಮೂರು ಅಡಿ ಉದ್ದದ ನಂದಿಯ ಶಿಲ್ಪವಿದೆ. ಅಂತರಾಳದ ಪ್ರವೇಶ ದ್ವಾರದಲ್ಲಿ ಶೈವ ದ್ವಾರಪಾಲಕರು, ಸರ್ಪ, ಕೀರ್ತಿಮುಖ, ಗಣೇಶ, ಸರಸ್ವತಿ, ಲಾಲಾಟದಲ್ಲಿ ಶಿವ, ಪಾರ್ವತಿ, ಗಣೇಶ, ಉಬ್ಬುಶಿಲ್ಪಗಳಿವೆ. ನಂತರ ತೆರೆದ ಮಂಟಪದಲ್ಲಿ ಆರು ಪೂರ್ಣ ಭಿತ್ತಿಯಲ್ಲಿ ಎಂಟು ಅರ್ಧಕಂಬಗಳಿವೆ. ದೇವಾಲಯದ ಕಂಬಗಳು ಎರಡು ರೀತಿಯಲ್ಲಿವೆ. ಮೊದಲನೆಯದಾಗಿ ಪೀಠ, ಪಾದ, ಬಹುಮುಖ ಪಟ್ಟಿ, ಚದುರ, ಅರಳಿದ ಪುಷ್ಪ ಬೋದಿಗೆಯನ್ನು ಒಳಗೊಂಡಿದ್ದು, ಕಂಬದ ಪೀಠ ಭಾಗದಲ್ಲಿ ಲಿಂಗ, ನಂದಿ, ರಥ, ಪದ್ಮದಳ, ಮೊಗ್ಗಿನ ಆಕಾರ, ಇಳಿಬಿದ್ದ ಗಂಟೆ ಮಾದರಿ ಬೋದಿಗೆಯ ಅಲಂಕಾರದ ಲಕ್ಷಣಗಳು. ಎರಡನೆಯ ಮಾದರಿಯ ಕಂಬವು ಪಾದ, ಬಹುಮುಖ ಚದುರ ಪುಷ್ಪಬೋಧಿಗೆಯನ್ನು ಒಳಗೊಂಡಿದೆ.

ದೇವಾಲಯದ ಹೊರಭಾಗದಲ್ಲಿ ಪ್ರದಕ್ಷಿಣಾಪಥ ಅಧಿಷ್ಠಾನ, ಭಿತ್ತಿ, ಕಪೋತ, ದ್ರಾವಿಡ ಶೈಲಿಯ ಶಿಖರ, ಸ್ತೂಪಿಯಿದೆ. ಅಧಿಷ್ಠಾನದ ಭಾಗ ಸರಳವಾಗಿದ್ದು, ಉಪಾನ, ಜಗತಿಯನ್ನು ಒಳಗೊಂಡಿದೆ. ಭಿತ್ತಿಯಲ್ಲಿ ಅರ್ಧಕಂಬಗಳು, ಮಧ್ಯದಲ್ಲಿ ಸರಳವಾದ ಅಡ್ಡಪಟ್ಟಿಕೆಗಳು, ವೃತ್ತಕಾರ, ಮೀನಿನ ಉಬ್ಬುಶಿಲ್ಪಗಳು ಕಂಡುಬಂದಿವೆ. ನಂತರದಲ್ಲಿ ಕಪೋತವಿದ್ದು ಅಲಂಕಾರರಹಿತವಾಗಿದೆ. ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಪಿರಾಮಿಡ್ ಆಕಾರದ ಸರಳವಾದ ಶಿಖರ ಸ್ತೂಪಿಯಿದೆ. ಈ ದೇವಾಲಯದ ಕಾಲವನ್ನು ನಿರ್ಧರಿಸಲು ಯಾವುದೇ ಆಧಾರಗಳಿಲ್ಲದಿರುವುದರಿಂದ ವಾಸ್ತುಶೈಲಿಯ ಹಿನ್ನೆಲೆಯಲ್ಲಿ ಇದರ ಕಾಲವು ೧೧-೧೨ನೇ ಶತಮಾನವಾಗಿದ್ದು, ಪ್ರಸ್ತುತ ದಿನಗಳಲ್ಲಿ ಪೂಜೆಗೆ ಒಳಪಟ್ಟಿರುತ್ತದೆ.

೩. **ಹೆಸರು** : ಆಂಜನೇಯ

ಕಾಲ : ಪಾಳೆಯಗಾರರ ಕಾಲ

ಸ್ಥಳ : ನಾಯಕನಹಟ್ಟಿಗೆ ಹೋಗುವ ಮಾರ್ಗ

ಅಭಿಮುಖ : ದಕ್ಷಿಣಾಭಿಮುಖ

ಧರ್ಮ : ವೈಷ್ಣವಪಂಥ

ಈ ದೇವಾಲಯವು ತುರುವನೂರಿನಿಂದ ನಾಯಕನ ಹಟ್ಟಿಗೆ ಹೋಗುವ ಮಾರ್ಗದಲ್ಲಿ ದಕ್ಷಿಣಾಭಿಮುಖವಾಗಿದೆ. ತಲವಿನ್ಯಾಸವು ಚೌಕಾಕಾರವಾಗಿದ್ದು, ಎತ್ತರದ ಜಗಲಿಯ ಮೇಲೆ ನಿರ್ಮಾಣಗೊಂಡಿದೆ. ಗರ್ಭಗೃಹದ ಪೀಠದಲ್ಲಿ ಆಂಜನೇಯ ಉತ್ಸವಮೂರ್ತಿಯಿದೆ. ಗರ್ಭಗೃಹದ ದ್ವಾರವು ಲೋಹದ ತಗಡಿನಿಂದ ಆವೃತಗೊಂಡಿದ್ದು, ಅದರ ಮೂಲ ಸ್ವರೂಪ ಧಕ್ಕೆಯಾಗಿದೆ. ಗರ್ಭಗೃಹದ ನಂತರದಲ್ಲಿ ಅಂತರಾಳವಿದೆ. ಅಂತರಾಳದಲ್ಲಿ ಯಾವುದೇ ಶಿಲ್ಪಗಳು ಕಂಡುಬಂದಿಲ್ಲ. ಅಂತರಾಳದ ದ್ವಾರ ತಗಡಿನ ಅಲಂಕಾರಗಳಿಂದ ಕೂಡಿದ್ದು, ಮೂಲ ಸ್ವರೂಪ ಸ್ಪಷ್ಟವಾಗಿದೆ. ನಂತರದಲ್ಲಿ ತೆರೆದ ಮುಖಮಂಟಪ ತುಂಬಾ ವಿಶಾಲವಾಗಿದೆ. ಆರು ಪೂರ್ಣ ಹಾಗೂ ಎಂಟು ಅರ್ಧಕಂಬಗಳಿವೆ. ಅದರಲ್ಲಿ ನಾಲ್ಕು ಕಂಬಗಳು ಕಟ್ಟೆಯ ಮೇಲ್ಭಾಗದಲ್ಲಿ ಉಳಿದ ಎರಡು ಕಂಬಗಳು ನೆಲಮಟ್ಟದಿಂದ ೧೨ ಅಡಿ ಎತ್ತರದಲ್ಲಿವೆ. ಈ ಕಂಬಗಳು ಪೀಠ, ಪಾದ, ಅಷ್ಟಮುಖದಿಂಡು, ಪುಷ್ಪಬೋಧಿಗೆಯಿಂದ ಕೂಡಿವೆ. ದೇವಾಲಯದ ಭಿತ್ತಿಯಲ್ಲಿ ಕಂಬಗಳಿಂದ ಕೂಡಿದ ಕಕ್ಷಾಸನ ಗಮನಾರ್ಹವಾಗಿದೆ. ಕಂಬಗಳಲ್ಲಿ ಪೀಠದ ಭಾಗದಲ್ಲಿ ಗರುಡ, ದ್ವಾರಪಾಲಕ, ತ್ರಿಭಂಗಿ ಹಸು, ನಾಗಬಂಧ, ನವಿಲು, ಮಹಿಷಾಸುರ ಪದ್ಮಗಳ ಮಾದರಿಯ ಉಬ್ಬುಶಿಲ್ಪಗಳ ಅಲಂಕಾರಗಳಿವೆ.

ಹೊರಭಾಗದ ರಚನೆಯಲ್ಲಿ ಎತ್ತರದ ಜಗತಿ, ಪ್ರದಾಕ್ಷಣಾಪಥವಿದೆ. ದೇವಾಲಯವು ಅಧಿಷ್ಠಾನ ಭಿತ್ತಿ, ಭಿತ್ತಿಯಲ್ಲಿ ಗ್ರಾನೈಟ್ ಶಿಲೆಗಳನ್ನು ಪ್ಲಸ್ ಆಕಾರದಲ್ಲಿ ಜೋಡಿಸಲ್ಪಟ್ಟಿದೆ. ನಂತರದಲ್ಲಿ ಇಂಡೋ ಇಸ್ಲಾಮಿಕ್ ಶೈಲಿಯ ಶಿಖರವಿದೆ. ಶಿಖರದ ಮುಂಭಾಗದ ನಾಲ್ಕು ಗೂಡುಗಳಲ್ಲಿ ಆಧುನಿಕ ಕಾಲದ ರಾಮ, ಸೀತೆ, ಹನುಮಂತನ ಮೂರ್ತಿಗಳನ್ನು ಕಂಡರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ೫ ಅಡಿ ಎತ್ತರದ ಪೀಠದಲ್ಲಿ ೮ ಅಡಿ ಎತ್ತರದ ಗರುಡ ಸ್ತಂಭದ ಪೀಠಭಾಗದಲ್ಲಿ ಕೈಮುಗಿದು ನಿಂತ ಗರುಡನ ಉಬ್ಬುಶಿಲ್ಪವು ಇಂದಿಗೂ ಪೂಜಿಸಲ್ಪಡುತ್ತಿದೆ.

೪.	**ಹೆಸರು**	:	ಗವಿಗಂಗಾಧರೇಶ್ವರ
	ಕಾಲ	:	ಕ್ರಿ.ಶ.೧೭-೧೮ನೇ ಶತಮಾನ
	ಸ್ಥಳ	:	ಸ್ಮಶಾನದ ದಾರಿ
	ಅಭಿಮುಖ	:	ಪೂರ್ವಾಭಿಮುಖ
	ಧರ್ಮ	:	ಶೈವಪಂಥ

ಗವಿಗಂಗಾಧರೇಶ್ವರ ದೇವಾಲಯವು ಊರಿನ ಸ್ಮಶಾನಕ್ಕೆ ಹೋಗುವ ಮಾರ್ಗದಲ್ಲಿದೆ. ಗರ್ಭಗೃಹ ಗವಿಯ ಮಾದರಿಯಲ್ಲಿದ್ದುದರಿಂದ ಗವಿ ಗಂಗಾಧೇಶ್ವರ ಎಂದು ಕರೆಯಲಾಗುತ್ತಿದೆ. ದೇವಾಲಯ ಪ್ರಧಾನವಾಗಿ ಗರ್ಭಗೃಹ ಅಂತರಾಳ, ಅರ್ಧತೆರೆದ ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ಲಿಂಗ ನಂದಿ ಶಿಲ್ಪವಿದೆ. ಅಂತರಾಳ ಸ್ವಲ್ಪ ಅಗಲವಾಗಿದ್ದು, ಗಣೇಶ, ನಾಗಶಿಲ್ಪಗಳಿವೆ. ಗರ್ಭಗೃಹದ ನಂತರದ ತೆರೆದ ಮುಖಮಂಟಪದಲ್ಲಿ ನಿರ್ದಿಷ್ಟ

ಆಕಾರವಿಲ್ಲದ ಚಪ್ಪಟೆಯಾದ ಸರಳವಾದ ಕಂಬಗಳಿವೆ. ದೇವಾಲಯದ ಹೊರಭಾಗ ವೃತ್ತಾಕಾರದಲ್ಲಿದೆ. ಸರಳವಾದ ಅಧಿಷ್ಠಾನ, ಭಿತ್ತಿ, ಕಪೋತವಿದೆ. ಗುಮ್ಮಟ ಮಾದರಿಯ ಶಿಖರ, ಸ್ತೂಪಿ, ಕಳಸವಿದೆ. ದೇವಾಲಯದ ವಾಸ್ತುಶೈಲಿಯ ಹಿನ್ನೆಲೆಯಲ್ಲಿ ಇದರ ಕಾಲ ಕ್ರಿ.ಶ.೧೬-೧೭ನೇ ಶತಮಾನ. ಇಂದಿಗೂ ಪೂಜೆಗೆ ಒಳಪಟ್ಟಿರುವಂತದ್ದಾಗಿದೆ.

೫. **ಹೆಸರು** : ಚಂದ್ರಮೌಳೇಶ್ವರ

ಕಾಲ : ಕ್ರಿ.ಶ.೧೮-೧೯ನೇ ಶತಮಾನ

ಸ್ಥಳ : ಕೋಟೆಯ ಹಿಂಭಾಗ

ಅಭಿಮುಖ : ಪೂರ್ವಾಭಿಮುಖ

ಧರ್ಮ : ಶೈವಪಂಥ

ಚಂದ್ರಮೌಳೇಶ್ವರ ದೇವಾಲಯವು ಊರಿನ ಕೋಟೆಯ ಹಿಂಭಾಗದಲ್ಲಿದ್ದು, ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಗರ್ಭಗೃಹ ಮತ್ತು ಆಧುನಿಕ ಮಾದರಿಯ ತೆರೆದ ಮುಖಮಂಟಪ ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಒಳಗೆ ಪೀಠದ ಮೇಲೆ ಲಿಂಗ, ಮುಂಭಾಗದಲ್ಲಿ ನಂದಿ ಶಿಲ್ಪವಿದೆ. ಗರ್ಭಗೃಹದ ಮೇಲ್ಚಾವಣಿಯಲ್ಲಿ ಪದ್ಮಗಳಿಂದ ಅಲಂಕೃತಗೊಂಡ ಭುವನೇಶ್ವರಿ ಇದೆ. ಗರ್ಭಗೃಹದ ದ್ವಾರಬಂಧವು ಸರಳವಾಗಿದ್ದು, ಲಾಲಾಟದಲ್ಲಿ ಗಜಲಕ್ಷ್ಮಿಯ ಮೂರ್ತಿಶಿಲ್ಪ, ನಂತರದಲ್ಲಿ ಆಧುನಿಕ ಕಾಲದ ತೆರೆದ ಮುಖಮಂಟಪದ ಬಲಭಾಗದಲ್ಲಿ ಉತ್ತರಾಭಿಮುಖವಾಗಿ ಗಣೇಶನ ಮೂರ್ತಿ, ಎಡಭಾಗದಲ್ಲಿ ನವಗ್ರಹಗಳನ್ನು ಒಳಗೊಂಡ ಮಂಟಪಗಳಿವೆ. ಹೊರಭಾಗದ ರಚನೆಯಲ್ಲಿ ದೇವಾಲಯವು ಎತ್ತರದ ಜಗತಿಯಿದ್ದು, ಸರಳವಾದ ಅಧಿಷ್ಠಾನ, ಭಿತ್ತಿ-ಭಿತ್ತಿಯಲ್ಲಿ ಪಟ್ಟಿಕೆಗಳ ರಚನೆ ಹಾಗೂ ಹೂಬಳ್ಳಿಯ ಉಬ್ಬುಶಿಲ್ಪಗಳಿವೆ. ನಂತರದಲ್ಲಿ ಕಪೋತ ಭಾಗ ಪಟ್ಟಿಕೆಯಿಂದ ಕೂಡಿದೆ. ಅದರ ಮೇಲೆ ಆಧುನಿಕ ಕಾಲದ ಶಿಖರವಿದೆ.

೬. **ಹೆಸರು** : ತುರುವಪ್ಪ ದೇವಾಲಯ

ಕಾಲ : ಕ್ರಿ.ಶ.೧೮-೧೯ನೇ ಶತಮಾನ

ಸ್ಥಳ : ಗೊಲ್ಲರ ಕೇರಿಯಲ್ಲಿದೆ

ಅಭಿಮುಖ : ಪೂರ್ವಾಭಿಮುಖ

ಧರ್ಮ : ಶೈವಪಂಥ

ಪ್ರಸ್ತುತ ದಿನಗಳಲ್ಲಿ ಈ ದೇವಾಲಯ ಗೊಲ್ಲ ಸಮುದಾಯ ವಾಸವಿರುವ ಕಡೆ ಕಂಡುಬಂದಿದೆ. ಇದು ಚಿಕ್ಕ ಗವಿ ಮಾದರಿಯಲ್ಲಿದೆ. ಇದನ್ನು ಸ್ಥಳೀಯ ಕರಿ ಚಕ್ಕೆಕಲ್ಲಿನಿಂದ ನಿರ್ಮಿಸಲಾಗಿದೆ. ಇದು ಗರ್ಭಗುಡಿ ಅಂತರಾಳವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ

ಲಿಂಗಮಾದರಿಯ ದುಂಡನೆಯ ಕಲ್ಲುಗಳು ಅಂತರಾಳದಲ್ಲಿ ನಾಗಶಿಲ್ಪಗಳಿವೆ. ಇದರ ಹೊರಭಾಗವು ಸಂಪೂರ್ಣ ನಯವಾಗಿದೆ.

೭. **ಹೆಸರು** : ಮೂಕಬಸಪ್ಪ ದೇವಾಲಯ

ಕಾಲ : ಕ್ರಿ.ಶ.೧೯ನೇ ಶತಮಾನ

ಸ್ಥಳ : ದೊಡ್ಡಘಟ್ಟ ಮಾರ್ಗ

ಅಭಿಮುಖ : ಉತ್ತರಾಭಿಮುಖ

ಧರ್ಮ : ಶೈವಪಂಥ

ಈ ದೇವಾಲಯವು ಆಧುನಿಕ ಕಾಲದ್ದಾಗಿದೆ. ಇದು ಗರ್ಭಗೃಹ, ಮುಖಮಂಪಟವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಪೀಠದ ಮೇಲೆ ಎರಡು ಅಡಿ ಎತ್ತರದ ಶಿವನ ಲಿಂಗವಿದೆ. ಗರ್ಭಗೃಹದ ದ್ವಾರವು ಹೂಬಳ್ಳಿಗಳಿಂದ ಅಲಂಕೃತಗೊಂಡಿದೆ. ಗರ್ಭಗೃಹದ ಮುಂಭಾಗದಲ್ಲಿ ಎರಡುವರೆ ಅಡಿ ಉದ್ದದ ನಂದಿಶಿಲ್ಪವಿದೆ. ಆಧುನಿಕ ಕಾಲದ ಸರಳವಾದ ಚೌಕವಾದ ನಾಲ್ಕು ಕಂಬಗಳು, ಪದ್ಮಗಳ ಭುವನೇಶ್ವರಿ ಇದೆ. ದೇವಾಲಯದ ಹೊರಭಾಗವು ಅಧಿಷ್ಠಾನ, ಭಿತ್ತಿಯನ್ನು ಒಳಗೊಂಡಿದ್ದು, ಭಿತ್ತಿಯು ಸರಳವಾಗಿದೆ. ನಂತರ ಕಪೋತದಲ್ಲಿ ಎರಡು ಅಡ್ಡ ಪಟ್ಟಿಕೆಗಳು ಕಂಡುಬಂದಿವೆ.

೮. **ಹೆಸರು** : ಮಾರಮ್ಮ ದೇವಾಲಯ

ಕಾಲ : ಕ್ರಿ.ಶ.೧೯ನೇ ಶತಮಾನ

ಸ್ಥಳ : ಗಾಂಧಿ ಕೋಟೆ ಪಕ್ಕ

ಅಭಿಮುಖ : ಪೂರ್ವಾಭಿಮುಖ

ಧರ್ಮ : ಶಾಕ್ತಪಂಥ

ಈ ದೇವಾಲಯ ಪ್ರಧಾನವಾಗಿ ಗರ್ಭಗುಡಿ, ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಮಾರಿಕಾಂಬೆ ದೇವಿಯ ಮೂರ್ತಿಶಿಲ್ಪವಿದೆ. ದ್ವಾರವು ಸರಳವಾಗಿದ್ದು ಅಲಂಕಾರ ರಹಿತವಾಗಿದೆ. ಮುಖಮಂಟಪವು ತೆರೆದ ಅಂಕಣವಾಗಿದ್ದು, ನಾಲ್ಕು ಪೂರ್ಣವಾದ ವೃತ್ತಾಕಾರದ ಕಂಬಗಳನ್ನು ಒಳಗೊಂಡಿದೆ. ಹೊರಭಾಗದ ರಚನೆ ಅಪೂರ್ಣವಾಗಿದ್ದು, ಕೋಟೆಯ ಗೋಡೆಗೆ ಹೊಂದಿಕೊಂಡಿದೆ.

೩.೨. ಕೋಟೆ ಕೊತ್ತಲ

ರಕ್ಷಣಾ ವ್ಯವಸ್ಥೆಯನ್ನುಳ್ಳ ಪ್ರದೇಶವನ್ನು ಕೋಟೆ ಎನ್ನುವ ಅರ್ಥದಲ್ಲಿ ಕರೆಯಲಾಗುತ್ತದೆ. ಪ್ರಮುಖವಾಗಿ ರಾಜ್ಯ, ರಾಜ ಹಾಗೂ ಜನ ಸಾಮಾನ್ಯರಿಗೋಸ್ಕರ ರಕ್ಷಣೆ ಒದಗಿಸುವ ಮಹತ್ವದ ಸ್ಥಳವಾಗಿದೆ ಎಂದು ರಾಜನೀತಿ ಪ್ರಕಾಶನದಲ್ಲಿ ಬೃಹಸ್ಪತಿಯ ವಚನವು ಉಲ್ಲೇಖಿಸದೆ.[೧೪]

ಪ್ರಾಚೀನ ಕಾಲದ ಜನಪದಗಳಲ್ಲಿ ಚರ್ಚಿಸುವಾಗ ದುರ್ಗ ಎಂಬ ಪದ ಬಳಸಿರುವುದನ್ನು ಕಾಣುತ್ತೇವೆ. ಸಂಸ್ಕೃತ ಸಾಹಿತ್ಯದಲ್ಲಿ ಕೋಟೆಗಳನ್ನು ದುರ್ಗ ಎಂಬ ಹೆಸರಿನಿಂದ ಕರೆಯಲಾಗಿದೆ. ಇದರ ಅರ್ಥ ಹೊರಗಿನ ಶತ್ರುಗಳಿಂದ, ಕ್ರೂರ ಪ್ರಾಣಿಗಳಿಂದ, ಕಾಡು ಜಂತುಗಳಿಂದ ರಕ್ಷಣೆ ಗೋಸ್ಕರ ಆವರಣವನ್ನು ಮಾಡಿಕೊಂಡಿರುವ ಸ್ಥಳ ಎಂಬುದಾಗಿ ಅರ್ಥೈಸಬಹುದಾಗಿದೆ. ವೈದಿಕ ಕಾಲಗಳಲ್ಲಿ ಕೋಟೆಗಳಿಗೆ 'ಪುರ' ಅಥವಾ 'ಮಹಾಪುರ' ಎಂಬ ಪದವನ್ನು ಬಳಸಲಾಗಿದೆ. "ಮಹಾಪುರ" ಎಂದರೆ, ಭದ್ರವಾದ ಕೋಟೆಗಳಿಂದ ಸುತ್ತುವರಿಯಲ್ಪಟ್ಟಿದ್ದು, ದೊಡ್ಡ ಪಟ್ಟಣ ಎಂದರ್ಥ.[೧೫]

ಹಳೆಗನ್ನಡದಲ್ಲಿ ಕೋಟೆ ಎಂಬ ಮೂಲರೂಪವಿದ್ದು, ಇದನ್ನು ಹೊಸಗನ್ನಡದಲ್ಲಿ ಕೋಟೆ ಎಂದು ಕರೆಯಲಾಗುತ್ತದೆ. ಕೋಟೆಯು ಯುದ್ಧ ತಂತ್ರದ ಒಂದು ರಚನೆಯಾಗಿದ್ದು, ಶತ್ರುಗಳಿಗೆ ಭಯವನ್ನು ಹುಟ್ಟಿಸುವಂತ ತಡೆಗೋಡೆಯಾಗಿದೆ.[೧೬] ಕೋಟೆಗೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರುಗಳು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನವನ್ನು ನೀಡಿದ್ದಾರೆ. ಯಕ್ಟರ್ ಸ್ಪೇಟ್‌ರವರ ಪ್ರಕಾರ ಕೆಲ ವಿರೋಧಿಗಳಿಂದ ಯುದ್ಧ ತಡೆಯುವುದಕ್ಕೆ ಮತ್ತು ರಕ್ಷಣೆಗಾಗಿ ಕೋಟೆಗಳು ತುಂಬಾ ಅನುಕೂಲಕರವಾಗಿದ್ದವು. ಕನ್ನಡ ವಿಶ್ವಕೋಶದಲ್ಲಿ ಕೋಟೆಯು ಯುದ್ಧಗತಿಯ ನಿಯಂತ್ರಣ ಕೇಂದ್ರವಾಗಿಯೂ, ಯುದ್ಧ ವ್ಯವಸ್ಥೆಯ ಕೇಂದ್ರವಾಗಿಯೂ ಪ್ರಾಮುಖ್ಯತೆ ಪಡೆದಿದೆ.[೧೭] ಹಾಗೆಯೇ ಬೆಟಗೇರಿ ಕೃಷ್ಣಶರ್ಮರವರು ಹಿಂದಿನ ಕಾಲದ ನಮ್ಮ ರಾಜಕೀಯ ವ್ಯವಸ್ಥೆಗೆ ನಗರ, ಗ್ರಾಮ, ಹಳ್ಳಿ, ಪಟ್ಟಣಗಳಿಗೆ ಕೋಟೆಗಳು ಸಂರಕ್ಷಿತ ಸಾಧನಗಳಾಗಿದ್ದವು ಎಂದು ಅಭಿಪ್ರಾಯಪಟ್ಟಿದ್ದಾರೆ.[೧೮]

ಕೋಟೆಗಳ ಪ್ರಾಚೀನತೆಯನ್ನು ಮೌರ್ಯರ ಕಾಲದಿಂದ ಗುರುತಿಸಬಹುದು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂಬ ಹೆಸರಿನ ಗ್ರಾಮದ ಉಲ್ಲೇಖವಿದೆ. ಕೋಟೆ ಎಂಬ ಅರ್ಥ, ಅದಕ್ಕೆ ಇರುವುದರಿಂದ ಕೋಟೆಯಿಂದ ಆವೃತವಾಗಿರುವ ಊರು ಆದಾಗಿರಬಹುದೆನ್ನುವುದು ಹಲವರ ಅಭಿಪ್ರಾಯ.[೧೯]

ಅನೇಕ ಪಾಳೆಯಗಾರರು ತಮ್ಮ ಆಳ್ವಿಕೆಗೆ ಒಳಪಟ್ಟ ಪ್ರದೇಶದಲ್ಲಿ ಕೋಟೆಗಳನ್ನು ನಿರ್ಮಿಸಿದ್ದರು. ಪ್ರಮುಖವಾಗಿ ಚಿತ್ರದುರ್ಗ ನಿಡಗಲ್ಲು, ಹರಪನಹಳ್ಳಿ, ಶಿರಾ ಪಾಳೆಯಗಾರರು ತಮ್ಮ ವ್ಯಾಪ್ತಿಯಲ್ಲಿ ಅಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅವಿಭಾಜ್ಯ ಅಂಗಗಳಾಗಿ ತಮ್ಮದೇ ಆದ ರೀತಿಯಲ್ಲಿ ಪಾತ್ರವನ್ನು ನಿರ್ವಹಿಸಿರುವುದು ಕಂಡುಬಂದಿದ್ದು, ಗಡಿಭಾಗ ಕೋಟೆಗಳನ್ನು ರಕ್ಷಣಾ ಉದ್ದೇಶಕ್ಕಾಗಿ ನಿರ್ಮಿಸಿದ್ದಾರೆ.[೨೦]

ಮಧ್ಯನಾಡಿನಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ನಿರ್ಮಿಸಿದ ಕೋಟೆ ಕೇವಲ ಸೈನಿಕ ವ್ಯವಸ್ಥೆಗೆ ಮಾತ್ರ ನಿಯೋಜಿತಗೊಂಡಿರುವುದಿಲ್ಲ. ಆರ್.ಶೇಷಶಾಸ್ತ್ರಿಯವರು ಹೇಳಿರುವಂತೆ

ಕೋಟೆ ಎಂಬುದು ಅಂದಿನ ರಾಜಕೀಯ ವ್ಯವಸ್ಥೆ ಮತ್ತು ಜನತೆಯ ರಕ್ಷಣೆಯ ಭಾರವನ್ನು ಹೊತ್ತಿರುತ್ತಿದ್ದವು. ಕೋಟೆಯ ಬಲದ ಮೇಲೆ ಅಳಿವು ಉಳಿವು ಅವಲಂಬಿತವಾಗಿರುತ್ತಿತ್ತು ಎಂದು ಹೇಳುವ ಮೂಲಕ ಕೋಟೆಯ ಮಹತ್ವ ತಿಳಿಸಿದ್ದಾರೆ.[೨೧] ಕೋಟೆಗಳು ಕೇವಲ ರಾಜಕೀಯ ಸೈನಿಕ ಕೇಂದ್ರಗಳಾಗಿರದೇ, ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಕೋಟೆಯೊಳಗೆ ಮನೋರಂಜನೆಗಾಗಿ ಹಬ್ಬ ಹರದಿನಗಳು, ಉತ್ಸವಗಳು, ಕ್ರೀಡಾಕೂಟಗಳು, ಕೈಗಾರಿಕಾ ಕೇಂದ್ರಗಳು, ಗುಡಿಕೈಗಾರಿಕೆಗಳು ಅಸ್ತಿತ್ವದಲ್ಲಿರುತ್ತಿದ್ದವು. ಹೀಗಾಗಿ ಕೋಟೆಗಳು ಆಧುನಿಕ ನಗರದ ಕಲ್ಪನೆಗಳನ್ನು ಮೈಗೂಡಿಸಿಕೊಂಡಿವೆ.

ಕೋಟೆಗಳನ್ನು ಹಲವು ಪ್ರಕಾರಗಳಾಗಿ ನಿರ್ಮಾಣ ಮಾಡಲಾಗಿತ್ತು. ಅಂದರೆ,

ಗಿರಿದುರ್ಗ – ಎತ್ತರವಾದ ಬೆಟ್ಟ ಪ್ರದೇಶದಲ್ಲಿ ನಿರ್ಮಾಣ.

ಜಲದುರ್ಗ – ನೀರಿನಿಂದ ಸುತ್ತುವರಿದ ಪ್ರದೇಶ.

ವನದುರ್ಗ – ಗಿಡಮರಗಳಿಂದ ಆವೃತವಾದ ವನಪ್ರದೇಶ.

ನೀಲದುರ್ಗ – ನೆಲವನ್ನು ಅಗೆದ ಅಡುಗು ತಾಣ.

ಈ ರೀತಿಯ ರೂಪಗಳಲ್ಲಿ ನಿರ್ಮಿಸಿ ರಕ್ಷಣೆಗೆ ವ್ಯವಸ್ಥೆ ಕಲ್ಪಿಸಿಕೊಳ್ಳಲಾಗಿತ್ತು. ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದ ಬಹುತೇಕ ಅರಸು ಮನೆತನದವರು ಅನೇಕ ಕೋಟೆಗಳನ್ನು ನಿರ್ಮಿಸಿದ್ದಾರೆ. ಅಂತಹವರಲ್ಲಿ ಪ್ರಮುಖವಾಗಿ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಅರಸರು, ಪಾಳೆಯಗಾರರು, ಬಹುಮನಿ ಆದಿಲ್‌ಶಾಹಿ ಸುಲ್ತಾನರು ಮುಂತಾದವರನ್ನು ಹೆಸರಿಸಬಹುದು.[೨೨]

ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕವಾಗಿ ಪ್ರಾಮುಖ್ಯತೆ ಪಡೆದಿರುವುದರಿಂದ ಇಲ್ಲಿ ಅನೇಕ ಅರಸುಮನೆತನಗಳು ಆಳ್ವಿಕೆ ನಡೆಸಿರುವುದನ್ನು ಕಾಣುತ್ತೇವೆ. ವಿಭಿನ್ನ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿದ ಅರಸರುಗಳು ಈ ಭಾಗದಲ್ಲಿ ಅನೇಕ ಕೋಟೆಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಚಿತ್ರದುರ್ಗ, ಹೊಸದುರ್ಗ, ಹೊಸಗುಡ್ಡ, ತುರುವನೂರು ಇನ್ನೂ ಮುಂತಾದ ಕಡೆಯ ಕೋಟೆಗಳು ಇಂದಿಗೂ ಉತ್ತಮ ಸ್ಥಿತಿಯಲ್ಲಿದ್ದು ಇಲ್ಲಿಯ ಐತಿಹಾಸಿಕ ಮಹತ್ವವನ್ನು ಸಾರುತ್ತವೆ. ಅದೇ ರೀತಿ ತುರುವನೂರು ಕೋಟೆಯನ್ನು ಒಳಗೊಂಡಿದ್ದು, ಅದರ ಐತಿಹಾಸಿಕ ಪ್ರಾಮುಖ್ಯತೆಯನ್ನು ತಿಳಿಯುವಲ್ಲಿ ನೆರವಾಗಿದೆ.

ತುರುವನೂರಿನ ಕೋಟೆ

ಕ್ರಿ.ಶ.೧೭ನೇ ಶತಮಾನದಲ್ಲಿ ಪಾಳೆಯಗಾರರ ಕಾಲದಲ್ಲಿ ಇದೊಂದು ಆಯಾಕಟ್ಟಿನ ಸ್ಥಳ. ತುರುವನೂರು ದೇಶದಲ್ಲಿಯೇ ಪ್ರಸಿದ್ಧಿ ಪಡೆದಂತಹ ಗ್ರಾಮವಾಗಿದ್ದು, ಭಾರತದ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಸರುವಾಸಿಯಾದ ೧೯೪೭ರವರೆಗೆ ನಡೆದ ಸ್ವಾತಂತ್ರ್ಯದ ಅನೇಕ ಚಳವಳಿಗಳಲ್ಲಿ ಗ್ರಾಮದ ನೂರಾರು ಸ್ವಾತಂತ್ರ್ಯ ಯೋಧರು ಜೈಲು ಸೇರಿ ಕಠಿಣ ಶಿಕ್ಷೆಯನ್ನು ಅನುಭವಿಸಿದಂತಹ ಮಾಹಿತಿ ಇದೆ. ಈ ಸ್ವಾತಂತ್ರ್ಯ ಹೋರಾಟದ ಕುರುಹಾಗಿ ಈ ಊರಿನ ಕೋಟೆಯ ಮೇಲೆ ಗಾಂಧೀಜಿಯ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ತುರುವನೂರು ಸ್ಥಳದುರ್ಗವಾಗಿದ್ದು, ಇಡೀ ಕೋಟೆಯನ್ನು ಊರು ಆವರಿಸಿಕೊಂಡಿರುವುದರಿಂದ ನಿರ್ದಿಷ್ಟವಾಗಿ ಕೋಟೆಯ ಗೋಡೆಯನ್ನು ಗುರುತಿಸುವುದು ಕಷ್ಟವಾಗಿದೆ. ಸಾಮಾನ್ಯವಾಗಿ ಇಲ್ಲಿನ ಕೋಟೆ ಚೌಕಾಕಾರದ ಒಂದು ಸುತ್ತಿನ ಕೋಟೆ ಆಗಿದೆ. ಇದು ೬೫ X ೬೫ ಚದುರ ಮೀಟರ್ ವಿಸ್ತಾರದಲ್ಲಿದೆ. ಈ ಕೋಟೆಯ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಅಗಲವಾದ ಕಂದಕ ನಾಲ್ಕು ಮೂಲೆಗಳಲ್ಲಿ ಹತ್ತು ಮೀಟರ್ ಎತ್ತರ, ಮೂವತ್ತು ಮೀಟರ್ ಸುತ್ತಳತೆಯನ್ನು ಒಳಗೊಂಡಿರುವಂತಹ ವೃತ್ತಾಕಾರದ ನಾಲ್ಕು ಬುರುಜುಗಳಿದ್ದು, ಆ ಬುರುಜುಗಳ ಮೇಲೆ ಮಧ್ಯದಲ್ಲಿ ನಾಲ್ಕು ಅಡಿ ಎತ್ತರದ ಮತ್ತೊಂದು ಸುತ್ತಿನ ಗೋಡೆ ಕಂಡುಬಂದಿದ್ದು, ಇದನ್ನು ಬಂದೂಕುದಾರಿಗಳು ನಿಂತು ಶತ್ರುಗಳನ್ನು ಗುರಿಯಿಟ್ಟು ಒಡೆಯಲು ರಚಿಸಲಾಗಿದೆ. ಬುರುಜಿನ ಸುತ್ತಲೂ ಕೋವಿಕಿಂಡಿಗಳಿವೆ. ಈಶಾನ್ಯ ದಿಕ್ಕಿನ ಬುರುಜಿನ ಮೇಲೆ ಇತ್ತೀಚೆಗೆ ಮಹಾತ್ಮಾ ಗಾಂಧೀಜಿಯವರ ಕಂಚಿನ ಪ್ರತಿಮೆಯನ್ನು ಪ್ರತಷ್ಠಾಪಿಸಲಾಗಿದೆ.

ಕೋಟೆಯ ಗೋಡೆಯನ್ನು ಸ್ಥಳೀಯವಾಗಿ ಸಿಗುವಂತೆ ಅನಿಯಮಿತಾಕಾರದ ಕಪ್ಪು ಚಕ್ಕೆ ಕಲ್ಲುಗಳನ್ನು ಬಳಸಿಕಟ್ಟಲಾಗಿದೆ. ಆರಡಿ ಅಗಲ ಹತ್ತು ಮೀಟರ್ ಎತ್ತರವಿರುವ ಈ ಗೋಡೆಯ ಮಧ್ಯೆದಲ್ಲಿ ಕೆಸರು ಮಣ್ಣನ್ನು ಬಳಸಿರುವರು. ಇಪ್ಪತ್ತಡಿ ಎತ್ತರದವರೆಗಿನ ಗೋಡೆಯ ಮೇಲೆ ಮೂರಡಿ ಅಗಲದ ಅಟ್ಟಾಲಕವಿದೆ. ದೂರ ಪ್ರದೇಶದ ಶತ್ರುಗಳನ್ನು ವೀಕ್ಷಿಸಲು ಈ ಅಟ್ಟಾಲಕಗಳನ್ನು ರಚಿಸಲಾಗಿದ್ದು ಸೈನಿಕರು ನಿಂತುಕೊಳ್ಳಲು, ನಡೆದಾಡಲು ಸಾಕಷ್ಟು ಸ್ಥಳಾವಕಾಶಗಳನ್ನು ಕಲ್ಪಿಸಲಾಗಿದೆ. ಕೋಟೆಯ ಪೂರ್ವ ಮತ್ತು ಪಶ್ಚಿಮಕ್ಕೆ ಎರಡು ದ್ವಾರಗಳಿದ್ದು, ಈಗ ಇರುವ ರಸ್ತೆ ಎರಡು ದ್ವಾರಗಳ ಅವಶೇಷಗಳನ್ನು ಇಲ್ಲವಾಗಿಸಿದೆ.

ಅದೇ ರೀತಿಯಾಗಿ ಕೋಟೆಗೆ ಹೊಂದಿಕೊಂಡಂತೆ ಬುರುಜುಗಳ ಮಾದರಿಯಲ್ಲಿ ಕಾವಲು ಗೋಪುರಗಳಿದ್ದು, ಇವನ್ನು ಪ್ರತ್ಯೇಕವಾದ ಆಯಾಕಟ್ಟಿನ ಸ್ಥಳದಲ್ಲಿ ನಿರ್ಮಿಸಲಾಗಿದೆ. ಈ ಬುರುಜು ಮಾದರಿಯ ಕಾವಲು ಗೋಪುರಗಳನ್ನು ಚಿತ್ರದುರ್ಗದ ಕೋಟೆಯ ಮಧ್ಯೆ, ಪರಸ್ಪರ ವೀಕ್ಷಣಾ ಸಂಪರ್ಕ ಕಲ್ಪಿಸಲು ಗೋನೂರು, ವೀರ ಮದಕರಿಪುರ, ಕೂನಬೇವುನಿಂದ ತುರುವನೂರಿಗೆ, ಚಿತ್ರದುರ್ಗದ ಕೋಟೆಯಿಂದ ಬರುತ್ತಿದ್ದ ಮಾಹಿತಿಯನ್ನು ಶಬ್ದಗಳ ಮೂಲಕ ಅಥವಾ ಬಾವುಟಗಳನ್ನು ಹಾರಿಸುವ ಮೂಲಕ ಸಂಪರ್ಕದ ಸಂದೇಶವನ್ನು ಕಳುಹಿಸಲು ಈ ಕಾವಲು ಗೋಪುರಗಳನ್ನು ನಿರ್ಮಿಸಿಕೊಂಡಿರಬಹುದು.[೨೩]

೩.೩. ಇತರ ಸ್ಮಾರಕ ಶಿಲ್ಪಗಳು

೩.೩.೧. ಮೂರ್ತಿ ಶಿಲ್ಪಗಳು

ಒಂದು ಪ್ರದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ದೇವಾಲಯಗಳು ಎಷ್ಟು ಪ್ರಾಮುಖ್ಯತೆ ಪಡೆದಿರುತ್ತವೆಯೋ, ಮೂರ್ತಿ ಶಿಲ್ಪಗಳು ಕೂಡ ಅಷ್ಟೇ ಪ್ರಮುಖವಾಗಿವೆ. ಇವುಗಳು ದೇವಾಲಯ ವಾಸ್ತುಶಿಲ್ಪದ ಅವಿಭಾಜ್ಯ ಅಂಗಗಳಾಗಿದ್ದು, ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ.[೨೪] ಮೂರ್ತಿ ಎಂಬ ಪದಕ್ಕೆ ಸಮನಾರ್ಥವಾಗಿ 'ಪ್ರತಿಮೆ' ಎಂಬ ಪದ ಬಳಕೆಯಲ್ಲಿದ್ದು ಮೂರ್ತಿಶಾಸ್ತ್ರವನ್ನು 'ಪ್ರತಿಮಾ ಶಾಸ್ತ್ರ' ಎಂದು ಕರೆಯಲಾಗಿದೆ. ಪ್ರತಿಮಾಶಾಸ್ತ್ರ ಒಂದು ದೇವತೆಯ ಲಕ್ಷಣವನ್ನು ಮೂರ್ತಿ ರೂಪದಲ್ಲಿ ಪ್ರಮಾಣಬದ್ಧವಾಗಿ ಹೇಗೆ ಹಿಡಿಯಬೇಕೆಂಬುದನ್ನು ವಿಧಿಸುವ ಶಾಸ್ತ್ರ. ಅಂದರೆ ಮೂರ್ತಿ ಯಾವ ಯಾವ ಅಂಶಗಳನ್ನು ಹೊಂದಿರಬೇಕೆಂದು ತಿಳಿಸುತ್ತದೆ.[೨೫]

ಕರ್ನಾಟಕದ ಚಾರಿತ್ರಿಕ ಕಾಲದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆಯನ್ನು ಗುರುತಿಸುವಾಗ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ದೇವಾಲಯಗಳ ನಿರ್ಮಾಣಕ್ಕೆ ಕೊಟ್ಟ ಪ್ರೋತ್ಸಾಹದಂತೆ ಶಿಲ್ಪಗಳ ಬೆಳವಣಿಗೆಗೂ ಕೂಡಾ ಪ್ರೋತ್ಸಾಹ ನೀಡಿದ್ದಾರೆ.[೨೬]

ತುರುವನೂರು ವ್ಯಾಪ್ತಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಶೈವ, ವೈಷ್ಣವ, ಶಾಕ್ತ ಶಿಲ್ಪಗಳು ಕಂಡುಬಂದಿವೆ. ಶೈವ ಶಿಲ್ಪದಲ್ಲಿ ಶಿವನ ಲಿಂಗ, ಗಣೇಶ, ನಂದಿ ಶಿಲ್ಪಗಳು ನಾಗಶಿಲ್ಪಗಳು, ವೈಷ್ಣವ ಶಿಲ್ಪಗಳಲ್ಲಿ ಗರುಡ, ಆಂಜನೇಯ, ಶಾಕ್ತ ಶಿಲ್ಪಗಳಲ್ಲಿ ಗಜಲಕ್ಷ್ಮಿ, ಸರಸ್ವತಿ, ಮಾರಿಕಾಂಬೆ, ಕುಕ್ಕವಾಡೇಶ್ವರಿ, ಮೂರ್ತಿಗಳಿದ್ದು ಇವುಗಳನ್ನು ಅಧ್ಯಯನ ಮಾಡಿ ಕೆಳಕಂಡಂತೆ ವಿವರಿಸಲಾಗಿದೆ.

ಶೈವಶಿಲ್ಪಗಳು

ಸಾಮಾನ್ಯವಾಗಿ ಶಿವನನ್ನು ಚೆನ್ನಮಲ್ಲಿಕಾರ್ಜುನ, ಪಶುಪತಿ, ಮಹೇಂದ್ರ, ರುದ್ರ, ಕಲ್ಲೇಶ್ವರ, ರಾಮೇಶ್ವರ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಶಿವನನ್ನು ಹೆಚ್ಚಾಗಿ ಲಿಂಗದ ರೂಪದಲ್ಲಿ ಪೂಜೆ ಮಾಡುತ್ತಿದ್ದು, ಮೂರ್ತಿರೂಪದಲ್ಲಿ ಪೂಜಿಸುವುದು ಕಡಿಮೆ. ಶಿವನನ್ನು ಆರಾಧಿಸುವವರನ್ನು ಶೈವ ಪಂಥಕ್ಕೆ ಸೇರಿಸಲಾಗಿದೆ. ಶಿವನ ಲೀಲಾವಳಿಗಳು ಶಿಲ್ಪರೂಪದಲ್ಲಿ ಭಿತ್ತಿ, ಕಂಬಗಳ ಮೇಲೆ ಕೆತ್ತಲ್ಪಟ್ಟಿದೆ. ಶೈವ ಶಿಲ್ಪಗಳಲ್ಲಿ ಮುಖ್ಯವಾಗಿ ಈ ಕೆಳಗಿನಂತೆ ಕಂಡುಬಂದಿವೆ.

ಶಿವಲಿಂಗಗಳು

ಈ ಪ್ರದೇಶದಲ್ಲಿ ಹೆಚ್ಚಾಗಿ ಶಿವನ ಲಿಂಗಗಳು ಕಂಡುಬಂದಿವೆ. ಎಲ್ಲವೂ ಪೂಜೆಗೆ ಒಳಪಟ್ಟು, ಸಂರಕ್ಷಿಸಲ್ಪಟ್ಟಿವೆ. ತುರುವನೂರಿನಲ್ಲಿ ಒಟ್ಟು ಆರು ಶಿವನ ಲಿಂಗಗಳಿವೆ. ಅವುಗಳು ಗವಿಗಂಗಾಧರೇಶ್ವರ, ಕಲ್ಲೇಶ್ವರ, ಚಂದ್ರಮೌಳೇಶ್ವರ, ರಾಮಲಿಂಗೇಶ್ವರ, ಮೂಕಬಸಪ್ಪ, ಕಲ್ಲಿನ ಮಂಟಪಗಳಲ್ಲಿ ಕಂಡುಬಂದಿವೆ. ಇವು ಈಶ್ವರ ಎಂಬ ನಾಮದೊಂದಿಗೆ ಕರೆಯಲ್ಪಡುತ್ತವೆ. ಶಿವಲಿಂಗಗಳಲ್ಲಿ ಬ್ರಹ್ಮಭಾಗ, ವಿಷ್ಣುಭಾಗ, ರುದ್ರಭಾಗ, ಪಾಣಿವಟ್ಟಲಗಳಿರುತ್ತವೆ.

ರುದ್ರಭಾಗವು ಸಿಲಿಂಡರ್ ಆಕಾರದಲ್ಲಿದ್ದು ಉರುಟಾದ ರಚನೆಯಾಗಿದೆ. ರಾಮಲಿಂಗ, ಚಂದ್ರಮೌಳೇಶ್ವರ, ಕಲ್ಲೇಶ್ವರ ಲಿಂಗಗಳಲ್ಲಿನ ರುದ್ರಭಾಗದಲ್ಲಿ ಸೋಮಸೂತ್ರವಿದ್ದು, ಒಂದಕ್ಕಿಂತ ಮತ್ತೊಂದು ಭಿನ್ನವಾಗಿವೆ. ಗಂಗಾಧರೇಶ್ವರ ದೇವಾಲಯದ ಲಿಂಗದಲ್ಲಿ ಪಾಣಿವಟ್ಟಲು ವೃತ್ತಾಕಾರವಾಗಿದ್ದರೆ, ಉಳಿದ ಲಿಂಗಗಳಲ್ಲಿ ಚೌಕಾಕಾರವಿದೆ. ಚಂದ್ರಮೌಳೇಶ್ವರ ಶಿವಲಿಂಗಗಳಲ್ಲಿ ವಿಷ್ಣುಭಾಗವು ಅಧೋಮುಖ ಪದ್ಮದ ಅಲಂಕಾರವನ್ನು ಒಳಗೊಂಡಿದೆ. ಗಂಗಾಧರೇಶ್ವರ ಶಿವಲಿಂಗದ ವಿಷ್ಣುವಿನ ಭಾಗದಲ್ಲಿ ೧೨ ಮುಖಗಳಿದ್ದರೆ, ಉಳಿದ ಕಡೆ ನಾಲ್ಕು ಮುಖಗಳನ್ನು ಗುರುತಿಸಬಹುದು. ರಾಮಲಿಂಗೇಶ್ವರ ದೇವಾಲಯ ಶಾಸನದಿಂದ ಅದರ ಕಾಲ ಕ್ರಿ.ಶ೯– ೧೦ನೇ ಶತಮಾನ ಉಳಿದಂತೆ ಪಾಳೆಗಾರರ ಕಾಲದ್ದಾಗಿದೆ.

ನಂದಿ ಶಿಲ್ಪಗಳು

ಶಿವನ ವಾಹನ ನಂದಿ ಆಗಿರುವುದರಿಂದ ಅದನ್ನು ಲಿಂಗಕ್ಕೆ ಅಭಿಮುಖವಾಗಿ ಎಲ್ಲಾ ದೇವಾಲಯಗಳಲ್ಲಿ ನಿರ್ಮಿಸಿರುವುದನ್ನು ಕಾಣಬಹುದು. ತುರುವನೂರಿನಲ್ಲಿ ಪ್ರಾಚೀನ ದೇವಾಲಯಗಳಲ್ಲದೇ ಇತ್ತೀಚೆಗೆ ನಿರ್ಮಾಣಗೊಂಡ ದೇವಾಲಯಗಳಲ್ಲೂ ಕಾಣಬಹುದು. ರಾಮಲಿಂಗೇಶ್ವರ ದೇವಾಲಯದಲ್ಲಿ ನಂದಿ ಶಿಲ್ಪ ಹಾಯ್ಕಲ್ ಮಾದರಿಯ ನಂದಿ ಶಿಲ್ಪ ಒಂದೇ ಮಾದರಿಯಲ್ಲಿದ್ದು ಇವು ಕ್ರಿ.ಶ.೯–೧೦ನೇ ಶತಮಾನದ ನೊಳಂಬರ ಕಾಲಕ್ಕೆ ಸೇರಿವೆ. ಚೌಕಾಕಾರದ ಪೀಠದ ಮೂರು ಅಡಿ ಉದ್ದವಿದ್ದು, ಎಡಗಾಲನ್ನು ಮಡಚಿಕೊಂಡು, ಬಲಗಾಲನ್ನು ಹಿಂದಕ್ಕೆ ಎಳೆದುಕೊಂಡಿದೆ. ದೇಹವು ದಷ್ಟಪುಷ್ಟವಾಗಿದ್ದು, ಹಣೆ ಪಟ್ಟಿ ಕಂಠಾಹಾರಗಳನ್ನು ಒಳಗೊಂಡಂತೆ ಕೆತ್ತಲಾಗಿದೆ. ಉಳಿದಂತೆ ಚಂದ್ರಮೌಳೇಶ್ವರ, ಗವಿಗಂಗಾಧರೇಶ್ವರ ದೇವಾಲಯದ ನಂದಿ ಶಿಲ್ಪಗಳು ಅದೇ ರೀತಿಯ ಲಕ್ಷಣಗಳನ್ನು ಒಳಗೊಂಡಿವೆ. ಕಲ್ಲೇಶ್ವರ ದೇವಾಲಯದ ನಂದಿಶಿಲ್ಪವು ಗಂಟೆಯ ಹಾರವನ್ನು ಸೊಂಟದಲ್ಲಿ ಅಲಂಕಾರ ಪಟ್ಟಿಯನ್ನು ಒಳಗೊಂಡಿದೆ. ಅಲ್ಲದೇ ಸ್ತಂಭಗಳಲ್ಲಿನ ನಂದಿ ಶಿಲ್ಪಗಳು ಇದಕ್ಕೆ ನಿದರ್ಶನವಾಗಿದೆ. ಕಲ್ಲೇಶ್ವರ ದೇಗುಲದ ನಂದಿಶಿಲ್ಪದ ರಚನೆ, ಬಳಸಿದ ಶಿಲೆಯ ಹಿನ್ನೆಲೆಯಲ್ಲಿ ಅದನ್ನು ಕ್ರಿ.ಶ.೧೧–೧೨ನೇ ಶತಮಾನ.

ಗಣೇಶ ಶಿಲ್ಪ

ಗಣೇಶನು ಪಾರ್ವತಿ ಮತ್ತು ಪರಮೇಶ್ವರನ ಪುತ್ರ. ಇಲಿಯನ್ನು ವಾಹನವನ್ನಾಗಿ ಹೊಂದಿದ್ದಾನೆ. ಆಗಮ ಬ್ರಾಹ್ಮಣ ಸೂತ್ರ, ಧರ್ಮಶಾಸ್ತ್ರಗಳಲ್ಲಿ ಗಣೇಶನ ಉಲ್ಲೇಖವಿದೆ. ಗಣೇಶನು ಪ್ರಾಚೀನ ಪರಂಪರೆ ಹೊಂದಿದ್ದು, ಆದಿ ದೇವತೆಗಳಲ್ಲಿ ಒಬ್ಬನಾಗಿದ್ದಾನೆ. ತುರುವನೂರಿನಲ್ಲಿರುವ ಗಣೇಶಮೂರ್ತಿ ಚತುರ್ಬಾಹುಗಳಿಂದ ಕುಳಿತ ಭಂಗಿಯಲ್ಲಿ ಹೆಚ್ಚಾಗಿದ್ದು, ತನ್ನ ಕೈಗಳಲ್ಲಿ ಅಂಕುಶ, ಪಾಶ, ಮೋದಕ, ಲೇಖನಿ ಹಿಡಿದು, ಖಡಗ, ಕಂಠಸಹಾರ, ತಲೆಗೆ ಕರಮಂಡಲ, ಉದರದಲ್ಲಿ ನಾಗಬಂಧ, ಬಲಕ್ಕೆ ಬಾಗಿದ ಸೊಂಡಿಲ ವಿನ್ಯಾಸದಿಂದ ಕೂಡಿದೆ. ಗಂಗಾಧರೇಶ್ವರ ದೇವಾಲಯದ ಮುಂಭಾಗದಲ್ಲಿ ನಿಂತ ಭಂಗಿಯ ಗಣೇಶನ ಮೂರ್ತಿಯಿದೆ.

ವೈಷ್ಣವ ಶಿಲ್ಪಗಳು

ವಿಷ್ಣುವಿನ ಅವತಾರಗಳನ್ನು ಆರಾಧನೆ ಮಾಡುವವರನ್ನು ವೈಷ್ಣವ ಪಂಥದವರೆಂದು ಕರೆಯಲಾಗುವುದು. ಇವರುಮೂರ್ತಿಶಿಲ್ಪ ಆರಾಧಕರಾಗಿದ್ದು, ಬಾದಾಮಿ ಚಾಲುಕ್ಯರ ಕಾಲದ ಗುಹಾಂತರ ಮತ್ತು ರಚನಾತ್ಮಕ ದೇವಾಲಯಗಳಲ್ಲಿ ಇಂತಹ ವೈಷ್ಣವ ಶಿಲ್ಪಗಳು ಕಂಡುಬರುತ್ತವೆ. ತುರುವನೂರು ಪರಿಸರದಲ್ಲಿ ಹನುಮಂತ, ಗರುಡ, ಶಿಲ್ಪಗಳು ಕಂಡುಬಂದಿವೆ. ಅದರಲ್ಲಿ ಪ್ರಾಚೀನವಾದ ಗರುಡ ಹಾಗೂ ಹನುಮಂತನ ಮೂರ್ತಿಗಳು ಪ್ರಮುಖವಾಗಿವೆ.

ಆಂಜನೇಯ ಮೂರ್ತಿ

ತುರುವನೂರಿನಲ್ಲಿ ಎರಡು ಆಂಜನೇಯ ಮೂರ್ತಿಗಳಿದ್ದು, ಅವುಗಳಲ್ಲಿ ಒಂದು ಅಡಿ ಎತ್ತರದ ಪೀಠದ ಮೇಲೆ ನಿರ್ಮಾಣಗೊಂಡಿದ್ದು, ಆಗಮಗಳಲ್ಲಿ ಹನುಮಂತನನ್ನು ರುದ್ರಾಂಶ ಸಂಭೂತನೆಂದೂ, ಸೂರ್ಯಪುತ್ರ, ವಾಯುಪುತ್ರ, ರಾಮಭಕ್ತ ಮುಖ್ಯ ಪ್ರಾಣನೆಂದು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಇಲ್ಲಿನ ಆಂಜನೇಯ ಬಲಹಸ್ತವನ್ನು ಮೇಲೆತ್ತಿದ್ದಾನೆ ಮತ್ತು ಎಡಹಸ್ತವನ್ನು ಸೊಂಟದ ಮೇಲೆ ಇರಿಸಿದ್ದಾನೆ. ಕೊರಳಲ್ಲಿ ಮಾಲೆಗಳನ್ನು ಮತ್ತು ಕೈಗಳಲ್ಲಿ ಪಟ್ಟಿಕೆಗಳನ್ನು ಧರಿಸಿದ್ದಾನೆ. ಶಿಲ್ಪದ ಹಿಂದೆ ಪ್ರಭಾವಳಿ ಇದ್ದು, ಅದು ಹೂಬಳ್ಳಿಯಿಂದ ಅಲಂಕೃತಗೊಂಡಿದೆ. ಇಂದಿಗೂ ಉತ್ಸವ ಮೂರ್ತಿಯ ಅಲಂಕಾರದಲ್ಲಿದೆ.

ಗರುಡ

ತುರುವನೂರಿನ ಆಂಜನೇಯ ದೇವಾಲಯಗಳ ಮುಂಭಾಗದ ಸ್ತಂಭದ ಪೀಠದಲ್ಲಿ ಗರುಡ ಶಿಲ್ಪಗಳು ಕಂಡುಬಂದಿವೆ. ಇವು ಉಬ್ಬುಶಿಲ್ಪಗಳಾಗಿದ್ದು, ಸಮಪಾದದಲ್ಲಿದ್ದು, ಸ್ಥಾನಿಕವಾಗಿವೆ. ಗರುಡ ಭಕ್ತನಾಗಿ ಕೈ ಮುಗಿದು ನಿಂತಿರುವ, ಭುಜಕ್ಕೆ ಅಂಟಿಕೊಂಡ ರೆಕ್ಕೆಗಳನ್ನು ಕಾಣಬಹುದು. ಮತ್ತೊಂದು ಶಿಲ್ಪದಲ್ಲಿ ರೆಕ್ಕೆಗಳನ್ನು ಅಗಲಿಸಿ ನಿಂತ ದೃಶ್ಯವನ್ನು ಕಾಣಬಹುದು. ಇದರ ಕಾಲಮಾನ ೧೭-೧೮ನೇ ಶತಮಾನ.

ಶಾಕ್ತ ಶಿಲ್ಪಗಳು

ಸಾಮಾನ್ಯವಾಗಿ ಸ್ತ್ರೀ ದೇವತಾ ಶಿಲ್ಪಗಳು ಕಂಡುಬಂದಿದ್ದು, ಇವು ನಮ್ಮ ಪ್ರಾಚೀನ ಸಂಸ್ಕೃತಿಯ ಕಾಲಾವಧಿಯಲ್ಲಿ ಕಂಡುಬಂದಿರುವುದನ್ನು ಗಮನಿಸಿದ್ದೇವೆ. ಸ್ತ್ರೀ ದೇವತೆಗಳಿಗೆ ಶಕ್ತಿ ದೇವತೆಗಳ ರೂಪ ನೀಡಲಾಗಿದ್ದು, ಕರ್ನಾಟಕ ರಾಜ ಮನೆತನಗಳು ಆರಾಧಿಸುತ್ತಾ ಬಂದಿದ್ದಾರೆ. ಇದಕ್ಕೆ ನಿದರ್ಶನವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ದುರ್ಗದೇವಾಲಯವನ್ನು ಕಾಣಬಹುದು. ತುರುವನೂರಿನಲ್ಲಿ ಮಾರಮ್ಮ, ಕುಕ್ಕುವಾಡೇಶ್ವರಿ, ಗಜಲಕ್ಷ್ಮಿ, ಸರಸ್ವತಿ, ದುರ್ಗಮ್ಮ, ಕೋಲಾರಮ್ಮ, ಗಾಮಲಾಂಬಿಕೆ ಶಕ್ತಿ ದೇವತೆಗಳಿದ್ದು ಇಂದಿಗೂ ಪೂಜಿಸಲಾಗುತ್ತಿದೆ.

ಕುಕ್ಕವಾಡೇಶ್ವರಿ(ಮಹಿಷ ಮರ್ಧಿನಿ)

ಎರಡು ಅಡಿ ಎತ್ತರವಿರುವ, ಕಪ್ಪು ಶಿಲೆಯಲ್ಲಿ ನಿರ್ಮಾಣಗೊಂಡಿರುವ ಮಹಿಷ ಮರ್ದಿನಿಯ ಮೂರ್ತಿಶಿಲ್ಪವು ಮೂಕಬಸಪ್ಪ ದೇವಾಲಯದ ಪಕ್ಕದಲ್ಲಿದೆ. ಇದನ್ನು ಸ್ಥಳೀಯರು ಕುಕ್ಕವಾಡೇಶ್ವರಿ ಎಂದು ಪೂಜಿಸುತ್ತಾರೆ. ಅಷ್ಟಭುಜದ ದೇವಿಯು ಪೂರ್ಣರೂಪದ ಪ್ರಾಣಿಯ ಮೋರೆಯನ್ನು ಎಡಗೈಯಿಂದ ಒತ್ತಿಹಿಡಿದು, ಮಡಚಿದ ತನ್ನ ಎಡಗಾಲ ಮಂಡಿಯಿಂದ ಕುತ್ತಿಗೆಯನ್ನು ಅದುಮಿ ಬಲಗೈಯಲ್ಲಿರುವ ತ್ರಿಶೂಲದಿಂದ ತಿವಿಯುವ ಬಲಗೈಯಲ್ಲಿ ಖಡ್ಗ, ತ್ರಿಶೂಲ, ಗಿಳಿ, ಚಕ್ರ, ಎಡಗೈಯಲ್ಲಿ ಶಂಖ, ಬಿಲ್ಲು, ಕತ್ತಿಯಂತಹ ಆಯುಧಗಳಿಂದ ಕೂಡಿದೆ. ಈ ಶಿಲ್ಪದ ರಚನಾ ಶೈಲಿ, ಬಳಸಿರುವ ಶಿಲೆಯ ಆಧಾರದಿಂದ ಇದರ ಕಾಲ ಕ್ರಿ.ಶ.೧೧–೧೨ನೇ ಶತಮಾನ.

ಸರಸ್ವತಿ

ಈ ಮೂರ್ತಿಯು ಆಂಜನೇಯ ದೇವಾಲಯದ ಮುಖಮಂಟಪದಲ್ಲಿದೆ. ವೀಣಾಧಾರಿ ನವಿಲು ವಾಹನದಲ್ಲಿ ಸರಸ್ವತಿ ಕುಳಿತ ಭಂಗಿಯ ಮೂರ್ತಿಯಿದೆ. ಪ್ರತ್ಯೇಕ ಗೂಡನ್ನು ಕಟ್ಟಿ ಅದರೊಳಗೆ ಪ್ರತಿಷ್ಠಾಪಿಸಲಾಗಿದೆ. ಇದರ ಕಾಲದವು ಕ್ರಿ.ಶ.೧೬–೧೭ನೇ ಶತಮಾನವಾಗಿದೆ.

ಗಜಲಕ್ಷ್ಮಿ

ಚಂದ್ರಮೌಳೇಶ್ವರ ದೇವಾಲಯದ ಲಲಾಟದಲ್ಲಿ ಲಕ್ಷ್ಮೀ ಕುಳಿತಿರುವ ಪಕ್ಕದಲ್ಲಿ ಗಜಗಳು ನಿಂತ ಶಿಲ್ಪವು ಕಂಡರಿಸಲಾಗಿದೆ. ಇದರ ಕಾಲ ಕ್ರಿ.ಶ.೧೮–೧೯ನೇ ಶತಮಾನ.

ಮಾರಮ್ಮ

ಕೋಟೆಯ ಬದಿಯಲ್ಲಿನ ದೇವಾಲಯದಲ್ಲಿ ಮಾರಮ್ಮ ದೇವಿಯ ಮೂರ್ತಿಯಿದ್ದು, ದೇವಿಯು ನಾಲ್ಕು ಭುಜದಲ್ಲಿ ಅಲಂಕಾರಿತಳಾಗಿದ್ದು, ಖಡ್ಗ, ಕತ್ತಿ, ಅಭಯಹಸ್ತದ ಮುದ್ರೆಯನ್ನು ಒಳಗೊಂಡಿದೆ. ಪಕ್ಕದಲ್ಲಿ ಚಿಕ್ಕ ಗೊಂಬೆಗಳಿವೆ. ಇದು ಆಧುನಿಕ ಕಾಲದ ಮೂರ್ತಿಶಿಲ್ಪವಾಗಿದೆ.

೩.೩.೨. ಶಾಸನ

ಶಾಸನಗಳೆಂದರೆ ಅಪ್ಪಣೆ, ಆದೇಶ ಎಂದರ್ಥ. ರಾಜನ ಅಪ್ಪಣೆಯಂತೆ ಅವನು ಕೊಟ್ಟ ದಾನಧರ್ಮಗಳನ್ನು ಘೋಷಿಸಲು ರಚನೆಯಾದವುಗಳೇ ಶಾಸನಗಳು.[೨೭] ಇದನ್ನು ಶಿಲೆ, ತಾಮ್ರಪಟ, ಶಂಕು ಮುಂತಾದವುಗಳ ಮೇಲೆ ರಚಿಸಲಾಗಿದ್ದು, ಹೆಚ್ಚಾಗಿ ದಾನ ಶಾಸನಗಳೇ ಕಂಡುಬರುತ್ತವೆ. ಕರ್ನಾಟಕದಲ್ಲಿ ಮೌರ್ಯರ ಕಾಲದಿಂದ ಹಿಡಿದು ಪಾಳೆಗಾರರ ನಂತರದ ಕಾಲದವರೆಗೂ ಶಾಸನಗಳು ಲಭ್ಯವಾಗಿವೆ. ಆಯಾ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯ ಸಾಮಾಜಿಕ, ಆರ್ಥಿಕ, ದೇವಾಲಯ ನಿರ್ಮಾಣ, ವಾಸ್ತುಶಿಲ್ಪ, ಕೆರೆಗಳ ನಿರ್ಮಾಣ ಮುಂತಾದ ವಿಚಾರಗಳನ್ನು ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಈ ಅಂಶಗಳಿಂದ ಒಂದು ಪ್ರದೇಶದ ಸಂಸ್ಕೃತಿಯ ಪುನರ್‌ರಚನೆಗೆ ಶಾಸನಗಳು ಪ್ರಮುಖ ಆಕರಗಳಾಗಿವೆ. ತುರುವನೂರು ಪ್ರದೇಶದಲ್ಲಿ ಕಂಡುಬಂದಿರುವ ಶಾಸನ ಈ ಪ್ರದೇಶದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವಲ್ಲಿ ಗಮನಾರ್ಹವಾದುದು.

ತುರುವನೂರ ರಾಮಲಿಂಗೇಶ್ವರ ದೇವಾಲಯ ಶಾಸನ

ಶಾಸನಗಳಲ್ಲಿ ತುರುವನೂರು ಶಾಸನ ಅತ್ಯಂತ ಪ್ರಾಚೀನ ಶಾಸನವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ೪೫೩ ಶಾಸನಗಳು ಶೋಧನೆಗೊಂಡಿವೆ. ಪ್ರಸ್ತುತ ಇವುಗಳೊಂದಿಗೆ ೭ ಶಾಸನಗಳು ಸೇರಿಕೊಂಡಿವೆ. ತುರುವನೂರಿನ ರಾಮಲಿಂಗೇಶ್ವರ ದೇವಾಲಯ ಮುಂಭಾಗದಲ್ಲಿ ಕ್ರಿ.ಶ.೯-೧೦ನೇ ಶತಮಾನಕ್ಕೆ ಸೇರಿದ ದಾನ ಶಾಸನವಾಗಿದೆ. ಅಕ್ಷರಗಳು ತೃಟಿತಗೊಂಡಿವೆ. ಶಾಸನದಲ್ಲಿ ಹಲವಾರು ಗಾವುಂಡರು ಸೇರಿಕೊಂಡು ರಾಮಲಿಂಗೇಶ್ವರ ದೇವಾಲಯಕ್ಕೆ ಸ್ವಲ್ಪ ಜಾಗವನ್ನು ದಾನ ನೀಡಿದ್ದಾರೆಂಬ ಉಲ್ಲೇಖವಿದೆ.[೨೮] ಇದೇ ಶಾಸನಕ್ಕೆ ಸಮಕಾಲೀನವೆನ್ನಬಹುದಾದ ಶಾಸನ ಚಳ್ಳಕೆರೆ ತಾಲೂಕಿನ ದೊಡ್ಡ ಉಳ್ಳಾರ್ತಿಯಲ್ಲಿ ದೊರಕಿದ್ದು, ಕ್ರಿ.ಶ.೭೨೫ರಲ್ಲಿ ರಚಿತಗೊಂಡಿದೆ. ಇದರಲ್ಲಿ ದೇಚಗಾವುಂಡ ಮತ್ತು ಈತನ ಮಗ ನೊಳಂಬ ಗಾವುಂಡನೆಂಬ ಉಲ್ಲೇಖವಿದೆ. ಈ ಪ್ರದೇಶದ ಶಾಸನದಲ್ಲಿ 'ಗಾವುಂಡ' ಎಂಬ ಪದದ ಆಧಾರದ ಮೇಲೆ ನೊಳಂಬರ ಕಾಲಾವಧಿಯಲ್ಲಿ ರಚನೆಯಾಗಿದೆ, ಗಾವುಂಡ ಎಂದರೆ, ಗೌಡ, ಒಡೆಯ ಎಂಬರ್ಥವಿದೆ. ಗಾವುಂಡಗಳು ಮತ್ತು ಪ್ರಭುಗಾವುಂಡಗಳೆಂದು ಕರೆದುಕೊಂಡಿರುವುದನ್ನು ಈ ಶಾಸನಗಳಲ್ಲಿ ಕಾಣಬಹುದು.[೨೯]

೩.೩.೩ ವೀರಮಾಸ್ತಿಗಲ್ಲುಗಳು

ಕನ್ನಡಿಗರು ಧಾರ್ಮಿಕ ನೆಲೆಗಟ್ಟಿನಿಂದಲೇ ಪ್ರಭಾವಿತಗೊಂಡಿದ್ದಾರೆ. ಪ್ರಾಚೀನ ಕಾಲದಿಂದಲೂ ಮೋಕ್ಷ ಸಂಪಾದಿಸುವುದನ್ನೆ ತಮ್ಮ ಗುರಿಯನ್ನಾಗಿಟ್ಟುಕೊಂಡು ಬದುಕುತ್ತಿದ್ದಾರೆ. ಇದಕ್ಕೆ

ಆತ್ಮಾನುಸಂಧಾನ ಆದರ್ಶಾನುಸಂಧಾನ ಮತ್ತು ಮೌಲ್ಯಾನುಧಾನಗಳನ್ನು ಸಾಧನಗಳನ್ನಾಗಿ ಪರಿಭಾವಿಸಿಕೊಂಡಿದ್ದಾರೆ. ಆತ್ಮಾನುಸಂಧಾನದಿಂದ ಸಮಾಧೀಕರಣ, ಮೌಲ್ಯಾನುಸಂಧಾನದಿಂದ ಬಲಿದಾನ, ಸದ್ಗತಿ ಮತ್ತು ವೀರಮರಣ ಇವು ಸಮಾಜವು ರೂಢಿಸಿ ಬೆಳೆಸಿಕೊಂಡು ಬಂದಿರುವ ಆಚರಣೆಗಳಾಗಿವೆ. ಇಂತಹ ಅಸಾಮಾನ್ಯ ವಿಶಿಷ್ಟ ಮರಣಗಳು ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದುದನ್ನು ಗುರುತಿಸಬಹುದಾಗಿದೆ. ಇದರ ನೆನಪಿಗಾಗಿ ವೀರರ ಗುಡಿಗಳನ್ನು ನಿರ್ಮಿಸುವ ಮಹಾಸತಿ ಕಲ್ಲುಗಳು, ನಿಷಧಿ ಕಲ್ಲುಗಳನ್ನು ಪ್ರತಿಷ್ಠಾಪಿಸುವ ಪದ್ಧತಿಯು ಪರಂಪರೆಯಾಗಿ ಬೆಳೆದುಬಂದಿದೆ.[೩೦] ವೀರನ ತ್ಯಾಗ, ಬಲಿದಾನ ಮಹಾಸತಿಯರ ಆದರ್ಶಗುಣ, ಸನ್ಯಾಸಿಯರ ಪಾರಮಾರ್ಥಿಕ ಗುಣಗಳನ್ನು ತಿಳಿಸುವ ಮಾಧ್ಯಮಕ್ಕೆ ಸ್ಮಾರಕ ಶಿಲ್ಪಗಳೆಂದು ಹೆಸರು. ಈ ಸ್ಮಾರಕ ಶಿಲ್ಪಗಳು ಮೂಲತಃ ವ್ಯಕ್ತಿಯ ಶೌರ್ಯದ ಪ್ರತೀಕವಾದರೂ ಅವು ನಾಡಿನ ಮೌಲ್ಯವನ್ನು ಪ್ರತಿಬಿಂಬಿಸುವ ಸೂಚನಾಫಲಕಗಳಾಗಿವೆ. ವೀರನೊಬ್ಬನ ಸ್ಮಾರಕವಾಗಿ ನಿಲ್ಲಿಸುವ ಶಿಲೆಯೇ ವೀರಗಲ್ಲು. ವ್ಯಕ್ತಿಯೊಬ್ಬ ದೇಶದ ರಕ್ಷಣೆಗಾಗಿ ಹೋರಾಡಿ ಮರಣವನ್ನಪ್ಪಿದ್ದರೆ ಅವನ ನೆನಪಿಗಾಗಿ ಹಾಕಿಸುವ ಸ್ಮಾರಕಗಳು ವೀರಗಲ್ಲುಗಳಾಗಿವೆ. ಒಬ್ಬ ಪತಿವ್ರತೆಯಾದ ಹೆಂಗಸು ತನ್ನ ಗಂಡ ಮರಣ ಹೊಂದಿದರೆ ಸಹಾಗಮನ ಮಾಡುವ ಸಂಗತಿಯನ್ನು ಸೂಚಿಸುವಂತೆ ಆ ಸ್ಥಳದಲ್ಲಿ ನೆಟ್ಟ ಕಲ್ಲಿಗೆ ಮಾಸ್ತಿಕಲ್ಲೆಂದು ಹೆಸರು.[೩೧] ಅಂತಹ ವೀರನ್ನು ಹೋರಾಡಿ ಮರಣಸಿದಾಗ ಅವನೊಡನೆ ಹೆಂಡಂತಿಯೂ ಮರಣಿಸುವಂತಹ ವೀರಸತಿಕಲ್ಲುಗಳು ಈ ಪ್ರದೇಶದಲ್ಲಿ ಕಂಡುಬಂದಿವೆ.

ಪೋಲೀಸ್ ಠಾಣೆ ಮುಂಭಾಗದಲ್ಲಿನ ಹೊಲದಲ್ಲಿನ ವೀರಮಾಸ್ತಿಕಲ್ಲು

ಈ ವೀರಮಾಸ್ತಿ ಕಲ್ಲನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಇದು ಎರಡು ಅಡಿ ಉದ್ದ, ಎರಡು ಅಡಿ ಅಗಲವಾಗಿದ್ದು, ಚಿಕ್ಕ ಗರ್ಭಗುಡಿ ನಿರ್ಮಿಸಿ ಸಂರಕ್ಷಿಸಲ್ಪಟ್ಟಿದೆ. ವೀರ ಮತ್ತು ಸತಿಯರಿಬ್ಬರ ನಿಂತ ಭಂಗಿಯ ದೃಶ್ಯವಿದ್ದೂ ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದ ಸತಿಯು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದ, ಎಡಗೈಯನ್ನು ಸೊಂಟದ ಪಕ್ಕಕ್ಕೆ ಇಟ್ಟುಕೊಂಡು ನಿಂತಿರುವ ವೀರ ಮತ್ತು ಸತಿ ಇಬ್ಬರು ಕಿವಿಯೋಲೆ, ಕಾಲ್ಗಡಗ, ಕೈಬಳೆ, ತೋಳಬಂದಿ ಹಾಗೂ ವಸ್ತ್ರಾಭರಣಗಳನ್ನು ಧರಿಸಿರುವಂತೆ ಕಂಡರಿಸಲಾಗಿದೆ. ಅಲ್ಲದೆ ಸತಿಯು ಮೊಣಕಾಲಿನಿಂದ ಕೆಳಗೆ ನೆರಿಗೆಯುಳ್ಳ ವಸ್ತ್ರಧರಿಸಿದ್ದು, ಮೇಲಿನ ಭಾಗ ವಸ್ತ್ರಗಳನ್ನು ಹೊಂದಿಲ್ಲವಾಗಿದೆ. ಈ ವೀರಮಾಸ್ತಿಕಲ್ಲು ಕ್ರಿ.ಶ.೧೬-೧೭ನೇ ಶತಮಾನದಲ್ಲಿ ರಚಿಸಲ್ಪಟ್ಟಿದೆ.

೧. ಅಡವಿ ಆಂಜನೇಯ ದೇವಾಲಯದ ಬಳಿಯ ವೀರ ಮಾಸ್ತಿಕಲ್ಲು: ಇದು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಎರಡು ಅಡಿ ಉದ್ದ-ಅಗಲವಾಗಿದೆ. ಇಬ್ಬರು ಬಲಗೈಯನ್ನು ಮೇಲೆ ಎತ್ತಿ ಹಿಡಿದು ಎಡಗೈಯನ್ನು ಕೆಳಗೆ ಇಳಿಬಿಟ್ಟಂತೆ ಇದೆ. ಇಬ್ಬರು ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಇದರ ಕಾಲಮಾನ ೧೬-೧೭ನೇ ಶತಮಾನ ಎಂಬುದಾಗಿ ತಿಳಿದುಬರುತ್ತದೆ.

೨. ಕಲ್ಲಿನ ಮಂಟಪದ ಬಳಿ ಇರುವ ಸತಿಶಿಲ್ಪ : ಇದು ಗಾರೆಯಿಂದ ನಿರ್ಮಿಸಲ್ಪಟ್ಟಿದ್ದು, ಎರಡು ಅಡಿ ಉತ್ತರವಾಗಿದೆ. ಸಾಮಾನ್ಯವಾಗಿ ಈ ಶಿಲ್ಪದಲ್ಲಿ ಸ್ತ್ರೀ ಕುಳಿತ ಭಂಗಿಯಲ್ಲಿದ್ದು, ತನ್ನ ಮಗುವಿಗೆ ಹಾಲುಡಿಸುವ ದೃಶ್ಯವನ್ನು ಕಂಡರಿಸಲಾಗಿದೆ. ಇದರ ಕಾಲಮಾನ ಕ್ರಿ.ಶ.೧೭-೧೮ನೇ ಶತಮಾನ.

ಅಡಿಟಿಪ್ಪಣಿಗಳು

೧. ಅಪರ್ಣ ಕೂ.ಸ., **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪು.೧

೨. ರಾಜಾರಾಂ ಹೆಗಡೆ, **ಭಾರತೀಯ ಮೂರ್ತಿಶಾಸ್ತ್ರ, ಧರ್ಮ, ದೇವತಾರಾಧನೆ ಹಾಗೂ ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ ವಿಶ್ಲೇಷಣೆ,** ಪು.೩೫-೩೬

೩. ಅಪರ್ಣ ಕೂ.ಸ., **ಪೂರ್ವೋಕ್ತ,** ಪು.೧

೪. ಗೋಪಾಲ್ ಬಾ.ರಾ., **ವಾಸ್ತುವಿದ್ಯಾ ಶಿಲ್ಪಶಾಸ್ತ್ರ,** ಪು.೧

೫. ಪ್ರಭಾಕರ್ ಎಂ.ಎಸ್., **ದೇವಾಲಯ ವಾಸ್ತು,** ಪು.೧೨

೬. ರಾಮಚಂದ್ರರಾವ್ ಎಸ್.ಕೆ., **ಭಾರತೀಯ ದೇವಾಲಯಗಳು, ನೆಲೆ-ಹಿನ್ನೆಲೆ,** ಪು.೧

೭. ಪ್ರಭಾಕರ್ ಎಂ.ಎಸ್., **ದೇವಾಲಯ ವಾಸ್ತುಚಂದ್ರಿಕೆ,** ಪು.೨೭

೮. ಸುರೇಶ್ ಬಿ., **ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು,** ಪು.೪

೯. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ಪು.೫೨೮-೫೩೧

೧೦. ಅದೇ, ಪು.೫೩೭-೫೪೧

೧೧. ಅದೇ, ಪು.೫೭೭

೧೨. ಸುರೇಶ್ ಕೆ.ಎಂ., ವಾಸುದೇವ ಬಡಿಗೇರ್, ಸೋಮಶೇಖರ್ ಎಸ್.ವೈ., ಮೂಡಲಗೆರೆ ಕೊಟ್ರೇಶ್, **ಕರ್ನಾಟಕ ದೇವಾಲಯ ಕೋಶ: ಕೊಪ್ಪಳ ಜಿಲ್ಲೆ,** ಪು.೧೮

೧೩. ಜ್ಞಾನಾನಂದ ಜಿ., **ಶಿಲ್ಪಾದರ್ಶ, ಸಂಪುಟ ೨,** ಪು.೯೭-೯೮

೧೪. ರಾಜನೀತಿ ಪ್ರಕಾಶನ, **ವಾರಣಾಸಿ,** ಪು.೨೦೨

೧೫. Deshpande P.N., **Marata Forts,** Pp.16

೧೬. ಸೂರ್ಯನಾಥ್ ಕಾಮತ್, ದೇವರ ಕೊಂಡರೆಡ್ಡಿ, ಜಗನ್ನಾಥ ಎಸ್.ಎ.(ಸಂ), **ಇತಿಹಾಸ ದರ್ಶನ ಸಂಪುಟ-೬,** ಪು.೧೫೭

೧೭. **ಕನ್ನಡ ವಿಶ್ವಕೋಶ,** ಸಂ–೧, ಪು.೪೦೬

೧೮. ಬೆಟಗೇರಿ ಕೃಷ್ಣಶರ್ಮ, **ಕರ್ನಾಟಕ ಜನಜೀವನ,** ಪು.೩

೧೯. ಷೇಕ್ ಅಲಿ.ಬಿ.(ಸಂ), **ಕರ್ನಾಟಕ ಚರಿತ್ರೆ,** ಸಂ.೧, **ಪು.೩, ೨೩೮, ೩೩೦**

೨೦. ಕರೋವ್ಕಿನ್ ಎಫ್., **ಪುರಾತನ ಜಗತ್ತಿನ ಇತಿಹಾಸ,** ಪು.೧೨೦

೨೧. ಶ್ರೀಧರ ಹೆಚ್.ಜೆ., **ಪ್ರಾಚೀನ ಭಾರತದಲ್ಲಿ ಯುದ್ಧಕಲೆ,** ಪು.೧೪೩

೨೨. ಗೋಪಾಲ್ ಆರ್., **ಚಿತ್ರದುರ್ಗ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ,** ಪು.೨೧೪

೨೩. ತಿಪ್ಪೇಸ್ವಾಮಿ ಎಸ್., **ರಕ್ಷಣಾ ವಾಸ್ತುಶಿಲ್ಪ, ಚಿತ್ರದುರ್ಗ ಜಿಲ್ಲೆ,** ಪು.೨೫೦–೨೫೧

೨೪. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ಪು.೨೨

೨೫. ರಾಜಾರಾಂ ಹೆಗಡೆ, **ಪೂರ್ವೋಕ್ತ,** ಪು.೩೫–೩೬

೨೬. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ಪು.೬೨೬

೨೭. ಅದೇ, ಪು.೨೩೨

೨೮. MAR ವರದಿ, ೧೯೪೮–೫೬, ಪು.೩೫

೨೯. ಚಿದಾನಂದಮೂರ್ತಿ ಎಂ., **ಪೂರ್ವೋಕ್ತ,** ಪು.೩೯೬–೩೯೭

೩೦. ಕಲಬುರ್ಗಿ ಎಂ.ಎಂ., ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು, ಪು.೩–೪

೩೧. ಭಗವತಿ ಎಸ್.ಎನ್., ಮೇಲಿನಮನಿ ಹೆಚ್.ಎಸ್., ಕನ್ನಡ ಶಾಸನಗಳ ಅಧ್ಯಯನ, ಪು.೧೩೪

ಅಧ್ಯಾಯ ನಾಲ್ಕು

ಮೌಖಿಕ–ಸಾಂಸ್ಕೃತಿಕ ಪರಂಪರೆ

ಅಧ್ಯಾಯ ನಾಲ್ಕು

ಮೌಖಿಕ-ಸಾಂಸ್ಕೃತಿಕ ಪರಂಪರೆ

ಚರಿತ್ರೆಯನ್ನು ಬರೆಯುವಾಗ ಚರಿತ್ರೆಕಾರರು ದೇಶಿಯವಾಗಿ ಐತಿಹಾಸಿಕ ಸಾಹಿತ್ಯ ಕೃತಿಗಳು, ಹಸ್ತಪ್ರತಿಗಳು, ತಾಳೆಗರಿ, ವಿದೇಶಿ ಬರವಣಿಗೆಗಳು, ಪುರಾತತ್ವೀಯ ಶಾಸನ, ನಾಣ್ಯ, ಸ್ಮಾರಕ ಹಾಗೂ ಉತ್ಖನನದ ಅವಶೇಷಗಳು ಇತ್ಯಾದಿಗಳನ್ನು ಆಧಾರಿಸಿರುತ್ತಾರೆ. ಅದೇ ರೀತಿ ಸ್ಮರಣೆಯಲ್ಲಿ ಉಳಿದ ಹಾಗೂ ಜನರ ಬಾಯಿಯಿಂದ ಬಾಯಿಗೆ ಹರಿದು ಬಂದ ವಿಚಾರಗಳು ಉತ್ತಮವಾದ ಮಾಹಿತಿಯನ್ನು ನೀಡುತ್ತವೆ ಎನ್ನುವುದನ್ನು ಮರೆಯಲಾಗದು. ಜನರ ಸ್ಮರಣೆಯಲ್ಲಿ ಉಳಿದ ವಿಚಾರವನ್ನು ಇತಿಹಾಸವಾಗಿ ರೂಪಾಂತರಗೊಳಿಸುವ ನಡುವಿನ ಪ್ರಕ್ರಿಯೆಯೇ ಮೌಖಿಕ ಇತಿಹಾಸ.[೧] ಮೌಖಿಕ ಇತಿಹಾಸ ಚರಿತ್ರೆ ರಚನೆಗೆ ಮಾತ್ರವಲ್ಲದೇ ಜನಪದ ಸಮಾಜಶಾಸ್ತ್ರ, ಮಾನವಶಾಸ್ತ್ರ, ಜೀವನ ಚರಿತ್ರೆ, ಮುಂತಾದ ಶಾಸ್ತ್ರಗಳ ರಚನೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತವೆ.[೨] ಮೌಖಿಕ ಆಕರಗಳು ತಲೆಮಾರುಗಳಿಂದ ರವಾನೆಯಾದ ಕಂಠಸ್ಥ ಸಾಹಿತ್ಯವಾಗಿವೆ. ಆಯಾ ಪ್ರಾದೇಶಿಕತೆಗೆ ತಕ್ಕಂತೆ ಸಾಂಸ್ಕೃತಿಕ ರಾಜಕೀಯವಾಗಿಯೂ ಬೆಸೆದುಕೊಂಡಿದ್ದು, ಚರಿತ್ರೆಕಾರನು ಈ ದಿಸೆಯಲ್ಲಿ ಅವಲೋಕಿಸುವುದು ಅತ್ಯಗತ್ಯವಾಗಿರುತ್ತದೆ.[೩] ಮೌಖಿಕ ಆಕರಗಳಲ್ಲಿ ಬಹುಮುಖ್ಯವಾಗಿ ಐತಿಹ್ಯ, ನಂಬಿಕೆ, ಆಚರಣೆ, ಲಾವಣಿ, ಜನಪದ ನಂಬಿಕೆ, ಕಥನ ಗೀತೆ, ಕೋಲಾಟ ಪದ ಮುಂತಾದವು ಸೇರಿವೆ.

ಪ್ರಸ್ತುತ ಅಧ್ಯಯನ ಪ್ರದೇಶ ಬಯಲು ಸೀಮೆಯಾಗಿರುವುದರಿಂದ ಇಲ್ಲಿನ ಚರಿತ್ರೆ-ಸಂಸ್ಕೃತಿಯ ನಿರ್ಮಾಣಕ್ಕೆ ಸಾಹಿತ್ಯಿಕ ಮತ್ತು ಪುರಾತತ್ವೀಯ ಆಕರಗಳ ಜೊತೆಗೆ ನಂಬಿಕೆ ಮತ್ತು ಆಚರಣೆಗಳ ಬೆಂಬಲ ಹಾಗೂ ಅವುಗಳ ವಿಶ್ಲೇಷಣಾತ್ಮಕ ಅಧ್ಯಯನ ಬಹುಮುಖ್ಯ. ಈ ಅಧ್ಯಾಯದಲ್ಲಿ ತುರುವನೂರು ಮೌಖಿಕ ಆಕರಗಳಲ್ಲಿ ಅಧ್ಯಯನಕ್ಕೆ ಅನುಗುಣವಾಗಿ ಐತಿಹ್ಯ, ನಂಬಿಕೆ, ಆಚರಣೆಗಳನ್ನು ಕುರಿತಾಗಿ ವಿವೇಚಿಸಲಾಗಿದೆ.

ಐತಿಹ್ಯ

ಐತಿಹ್ಯ ಎಂದರೆ, ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದ ಜಾನಪದ ಪುರಾಣ, ಅಂದರೆ ಹಿಂದೆ ನಡೆದಿರಬಹುದಾದ ಘಟನೆಯೊಂದಕ್ಕೆ ಕಲಾತ್ಮಕ ಬಣ್ಣಕೊಟ್ಟು ಹೆಣೆದಿರಬಹುದಾದ ಜನಪದ ಸಾಹಿತ್ಯದ ಪ್ರಕಾರವಿದು. ಐತಿಹ್ಯಗಳು ಇತಿಹಾಸದ ಸ್ಪರ್ಶದಿಂದ ಕೂಡಿರುತ್ತವೆ. ಜನಪದರು ಕಟ್ಟಿ ನಿರೂಪಿಸುತ್ತಾ ಬಂದಿರುವ ಕಥನಗಳೆನ್ನಬಹುದು.[೪] ಒಂದು ದೃಷ್ಟಿಯಿಂದ ಜನಪದ ಪ್ರಕಾರಗಳಿಂದ ಕಥೆ, ಪುರಾಣ, ಗಾದೆ, ನುಡಿಗಟ್ಟು, ಕಾವ್ಯಗಳಂತೆಯೇ ಒಂದು ಒಳಪ್ರಬೇದವೂ ಹೌದು. ಇಲ್ಲಿ ಲಿಖಿತ ದಾಖಲೆಗಳಿರುವುದಿಲ್ಲ. ನಿರೂಪಕನಿಂದ ಕೇಳುವ, ಆತನ ಪ್ರಸಾದಕರಿಗೆ ಬಾಯಿಯಿಂದ ಬಾಯಿಗೆ ಹರಿದು ಬರುತ್ತಿದೆ. ಆದರೆ ಯಾವುದೇ ಆಧಾರಗಳಿಲ್ಲದೆ, ಐತಿಹ್ಯಗಳು ಹುಟ್ಟಿರಲಾರವು. ಅವಶೇಷ, ಪಳೆಯುಳಿಕೆಗಳು, ವಸ್ತು ವ್ಯಕ್ತಿ, ಘಟನೆ, ಸ್ಥಳ, ಕೆರೆ, ಕಟ್ಟೆ, ಗುಡ್ಡ–ಬೆಟ್ಟ, ನದಿ–ಹಳ್ಳ, ಬಂಡೆ–ದಿನ್ನೆ, ಉಡುಗೆ–ತೊಡುಗೆ, ಆಯುಧ, ಪ್ರಾಣಿ, ಸಸ್ಯ, ದೆವ್ವ, ವ್ಯಕ್ತಿ ಹೀಗೆ ಯಾವುದು ಬೇಕಾದರೂ ಐತಿಹ್ಯಕ್ಕೆ ಒಳಗಾಗಬಹುದು.[೫] ಐತಿಹ್ಯ ಪದದ ಮೂಲಾರ್ಥ ಕಾಲದಿಂದ ಕಾಲಕ್ಕೆ ಬದಲಾಗುತ್ತ ಅದು ಇಂದು ಚರಿತ್ರೆಯ ಸ್ವರೂಪಕ್ಕೆ ತಿರುಗಿದೆ. ಚರಿತ್ರೆಯ ಬರವಣಿಗೆಯಲ್ಲಿ ಐತಿಹ್ಯದ ಪಾತ್ರವಿದೆ ಎಂಬುದನ್ನು ಪರಿಗಣಿಸಬೇಕು.[೬] ಒಂದು ನಿರ್ದಿಷ್ಟ ವ್ಯಕ್ತಿ, ಸ್ಥಳ, ಘಟನೆ, ಚರಿತ್ರೆ, ಸಮಾಜ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಯೇ ಐತಿಹ್ಯ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಇಂತಹ ಅಂಶಗಳನ್ನೊಂದಿರುವ ಕೆಲವೊಂದು ಐತಿಹ್ಯಗಳನ್ನು ಕಾಣಬಹುದು. ಅವುಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

ರಾಮಲಿಂಗೇಶ್ವರ ದೇವಾಲಯ ಕುರಿತಾದ ಐತಿಹ್ಯ

ರಾಮಲಿಂಗೇಶ್ವರ ದೇವಾಲಯ ಕ್ರಿ.ಶ.೯–೧೦ನೇ ಶತಮಾನದೆಂದು ಅಲ್ಲಿನ ಶಾಸನದಿಂದ ತಿಳಿದುಬಂದಿದೆ. ಆದರೆ ಅಲ್ಲಿನ ಜನಪದ ಐತಿಹ್ಯದ ಪ್ರಕಾರ ಈ ದೇವಾಲಯ ರಾಮಾಯಣ ಕಾಲದಲ್ಲಿ ನಿರ್ಮಾಣಗೊಂಡಿದೆ. ಈ ಪ್ರದೇಶ ಮೊದಲು ದಟ್ಟಾರಣ್ಯವಾಗಿದ್ದು, ಶ್ರೀರಾಮನು ಯುದ್ಧದ ಸಂದರ್ಭದಲ್ಲಿ ಕಿಷ್ಕಿಂದೆಗೆ ಹೋಗುವ ವೇಳೆಯಲ್ಲಿ ಎತ್ತರವಾದ ಅರಣ್ಯ ಪ್ರದೇಶವಾಗಿದ್ದ ಈ ಸ್ಥಳವನ್ನು ಕಂಡನು. ಈ ಪ್ರದೇಶದಲ್ಲಿ ಕೆಲಕಾಲ ತಂಗಿದ್ದನೆಂದು, ಶ್ರೀರಾಮನು ಎಲ್ಲಿಯೇ ತಂಗಿದ್ದರು ಅಲ್ಲಿ ಶಿವನ ಲಿಂಗವನ್ನು ಪ್ರತಿಷ್ಠಾಪಿಸಿ ಪೂಜೆ ನಡೆಸುತ್ತಿದ್ದನು. ಹಾಗಾಗಿ ಇದು ರಾಮನು ಈ ನೆಲೆಯಲ್ಲಿ ಬಂದು ನೆಲೆಸಿದ್ದಂತಹ ಘಟನೆಗೆ ಪುಷ್ಠಿಯಾಗಿದೆ. ರಾಮಲಿಂಗ ಎಂಬ ಹೆಸರು ಅಂದಿನಿಂದಲೇ ಚಾಲ್ತಿಗೆ ಬಂದಿದೆ ಎಂದು ಜನಪದರ ನಂಬಿಕೆ. ನಂತರ ನೊಳಂಬ ಅರಸರ ಕಾಲದಲ್ಲಿ ಇಲ್ಲಿ ದೇವಾಲಯ ನಿರ್ಮಾಣಗೊಂಡಿತು ಎಂಬ ಐತಿಹ್ಯವಿದೆ.

ತುರುವಪ್ಪನ ಕುರಿತಾದ ಐತಿಹ್ಯ

ತುರುವಪ್ಪನ ಗುಡಿ ಪ್ರಸ್ತುತ ಗೊಲ್ಲ ಸಮುದಾಯದವರ ವಾಸದ ಸ್ಥಳದಲ್ಲಿದೆ. ಹಿಂದೆ ಪ್ರಸ್ತುತ ಊರಿನ ದಕ್ಷಿಣಕ್ಕೆ ಇದ್ದಂತಹ ಮೌರ್ಯರ ಕಲ್ಲು ಗ್ರಾಮದಲ್ಲಿ ನಾಯಕ ಮತ್ತು ಗೊಲ್ಲ ಸಮುದಾಯದವರು ವಾಸವಾಗಿದ್ದು, ಇವರ ವೃತ್ತಿ ಪಶುಪಾಲನೆ. ಪಶುಗಳಿಗೆ ಯಾವುದೇ ತೊಂದರೆ, ಕಾಯಿಲೆಗಳು ಆಗದಂತೆ ಕಾಪಾಡಲು, ಈಗ ಇರುವ ಈ ದೇವಾಸ್ಥಾನದ ಸ್ಥಳ ಬಹಳ ಎತ್ತರದಲ್ಲಿದ್ದು, ಪಶುಗಳ ರಕ್ಷಣೆಗಾಗಿ ಪೂಜೆ ಮಾಡುವ ದೃಷ್ಟಿಯಿಂದ ಚಿಕ್ಕ ಕಲ್ಲಿನ ಗುಡಿಯನ್ನು ನಿರ್ಮಿಸುತ್ತಾರೆ. ಕ್ರಮೇಣ ಈ ದೇವಾಲಯಕ್ಕೆ ತುರುವಪ್ಪನ ಗುಡಿ ಎಂದು, ಆ ಜಾಗವನ್ನು ತುರಾಬಯಲು ಎಂದು ಕರೆಯುತ್ತಾರೆ. ಹೀಗೆ ಪಶುಪಾಲಕರು, ಪಶುಗಳ ರಕ್ಷಣೆಗಾಗಿ ಕಟ್ಟಿದ ಗುಡಿಯಿಂದ ಊರು ಬೆಳೆದು ಸಮೃದ್ಧಿಯಾಗಿ ಜನಸಂದಣಿ ಹೆಚ್ಚಾಗತೊಡಗಿತು.

ಜಡೆತಾತ ಮಠ

ಈ ಮಠ ಊರ ಹೊರಭಾಗದ ಅಡವಿ ಆಂಜನೇಯ ದೇವಾಲಯದ ಪಕ್ಕದಲ್ಲಿದೆ. ಮೂಲತಃ ಈ ಮಠದ ಸ್ಥಾಪಕರು ಕೇರಳದವರು. ಇವರು ಜಡೆಯನ್ನು ಬೆಳೆಸಿಕೊಂಡಿದ್ದು, ಅದನ್ನು ಮೇಲಕ್ಕೆ ಕಟ್ಟುತ್ತಿದ್ದರು. ಹಾಗಾಗಿ ಅವರಿಗೆ ಜಡೆ ಸ್ವಾಮಿ ಎಂದು ಕರೆಯಲಾಯಿತು. ಪವಾಡ ಪುರುಷರು, ಧಾರ್ಮಿಕ ಕಾರ್ಯ ಸತ್ಸಂಗದಲ್ಲಿ ತೊಡಗಿರುತ್ತಿದ್ದರು. ಇವರು ಒಂದು ಮಠವನ್ನು ಸ್ಥಾಪಿಸಿ, ಆ ಮಠದಲ್ಲಿ ೩೫ ಅಡಿ ಆಳ, ೬೦ ಅಡಿ ಉದ್ದದ ಸುರಂಗವನ್ನು ತೋಡಿಸಿ ಅಲ್ಲಿಯೇ ಧ್ಯಾನ ಮಂದಿರ ನಿರ್ಮಿಸಿ, ಅದರೊಳಗಡೆಯೇ ಧ್ಯಾನ ಮಾಡುತ್ತಿದ್ದರು. ಅದೇ ಸ್ಥಳದಲ್ಲಿಯೇ ಜೀವಂತ ಸಮಾಧಿ ಆಗಿದ್ದಾರೆ ಎಂಬ ಭಾವನೆ ಜನರಲ್ಲಿದೆ.

ಆಂಜನೇಯ ದೇವಾಲಯ ನಿರ್ಮಾಣದ ಕುರಿತಾದ ಐತಿಹ್ಯ

ಈ ದೇವಾಲಯ ಪಾಳೆಯಗಾರರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿತ್ತು. ಇದು ಮೂಲತಃ ಚಿತ್ರದುರ್ಗದ ಮುರುಘಾಮಠದ ಸಮೀಪವಿದ್ದ ಅಲ್ಲಿಂದ ಇಲ್ಲಿಗೆ ವರ್ಗಾವಣೆಗೊಂಡಿದೆ ಎಂದು, ಈ ದೇವಾಲಯವನ್ನು ರೆಡ್ಡಿ ಸಮುದಾಯದವರು ನಿರ್ಮಾಣ ಮಾಡುತ್ತಾರೆ. ಇಲ್ಲಿನ ರೆಡ್ಡಿ ಸಮುದಾಯದವರು ಚಿತ್ರದುರ್ಗದ ಮುರುಘಾಸ್ವಾಮಿಯ ಬಳಿ ಹೋಗಿ ತಾವು ಆಂಜನೇಯ ಸ್ವಾಮಿ ದೇವಾಲಯವನ್ನು ತುರುವನೂರಿನಲ್ಲಿ ನಿರ್ಮಾಣ ಮಾಡಬೇಕು. ಅದಕ್ಕಾಗಿ ಶಿಲೆಯನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಾರೆ. ಸ್ವಾಮಿಗಳು ಮುರುಘಾಮಠದ ಸಮೀಪದಲ್ಲಿ ಪಾಳು ಬಿದ್ದಿದ್ದ ಈಗಿನ ದೇವಾಲಯದ ಶಿಲೆಗಳನ್ನು ಬಳಸಿಕೊಂಡು ದೇವಾಲಯವನ್ನು ನಿರ್ಮಾಣ ಮಾಡಿಕೊಳ್ಳಿ ಎಂದು ಅನುಮತಿ ನೀಡಿದರಂತೆ, ಸ್ವಾಮಿಗಳ ಹೇಳಿಕೆಯಂತೆ ರೆಡ್ಡಿ ಜನಾಂಗದವರು ಬಂಡಿಗಳನ್ನು ಕಟ್ಟಿಕೊಂಡು ದುರ್ಗಕ್ಕೆ ಹೋಗಿ, ಅಲ್ಲಿ ದೇವಾಲಯ ಯಾವ ರೂಪದಲ್ಲಿ ಇರುವುದೋ ಅದೇ ರೀತಿಯಲ್ಲಿ ಪ್ರತಿ ಕಲ್ಲುಗಳ ಮೇಲೆ ಸಂಖ್ಯೆಗಳನ್ನು ಬರೆದು,

ಕಲ್ಲುಗಳನ್ನು ನೂರಾರು ಬಂಡಿಗಳಿಂದ ತುರುವನೂರಿಗೆ ತರುತ್ತಾರೆ. ನಂತರ ಸಂಖ್ಯೆಗಳ ನಮೂದಿನ ಆಧಾರದಿಂದ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಈಗಲೂ ದೇವಾಲಯ ದಲ್ಲಿ ಕಲ್ಲಿನ ಸಂಖ್ಯೆಗಳು ಕಂಡುಬರುತ್ತವೆ ಎಂಬ ಐತಿಹ್ಯ ಜನರಲ್ಲಿದೆ.

ಮೂಕಬಸಪ್ಪ ದೇವಾಲಯ ಐತಿಹ್ಯ

ಈ ದೇವಾಲಯ ಊರಿನಿಂದ ಅರ್ಧ ಕಿಲೋಮೀಟರ್ ದೂರದಲ್ಲಿದೆ. ಈ ದೇವಾಲಯ ನಿರ್ಮಾಣ ಕುರಿತಂತೆ ಜನಪದರ ಐತಿಹ್ಯ ಪ್ರಕಾರ ಗ್ರಾಮದಲ್ಲಿ ದೇವರ ಹೆಸರಿನಲ್ಲಿ ಹೋರಿಯೊಂದನ್ನು ಬಿಡಲಾಗಿತ್ತು. ಆದರೆ ಕಾಲಕ್ರಮೇಣ ಆ ಹೋರಿ ಮರಣಹೊಂದಿತು. ಆಗ ಗ್ರಾಮದ ಪೂರ್ವ ದಿಕ್ಕಿನಲ್ಲಿ 'ಹೋರಿಯನ್ನು' ಪೂಜೆ, ಪುನಸ್ಕಾರಗಳ ಮೂಲಕ ಧಾರ್ಮಿಕವಾಗಿ ಅಂತ್ಯಸಂಸ್ಕಾರ ಮಾಡಿ ಸಮಾಧಿ ನಿರ್ಮಾಣಗೊಂಡಿತು. ಅಲ್ಲಿ ಒಂದು ಲಿಂಗವನ್ನು, ನಂದಿ(ಬಸವಣ್ಣ)ಯನ್ನು ಇಟ್ಟು ಪೂಜೆ ಮಾಡಲಾರಂಭಿಸಿದರು. ಕಾಲಾಕ್ರಮೇಣ ಅದನ್ನು ದೇವಾಲಯವಾಗಿ ನಿರ್ಮಾಣ ಮಾಡಿ ಇದಕ್ಕೆ ಮೂಕ ಬಸಪ್ಪ ಎಂದು ಕರೆಯಲಾಯಿತು.

ಮತ್ತೊಂದು ಐತಿಹ್ಯವೆಂದರೆ ಹಿಂದೆ ಊರ ಒಳಗೆ ಬೇರೆ ಊರಿನಿಂದ ಯಾರೇ ಬಂದರು ಒಳಗೆ ಸೇರಿಸುತ್ತಿರಲಿಲ್ಲ. ಅಂತಹವರು ಈ ದೇವಾಲಯದಲ್ಲಿ ತಂಗಬೇಕಿರುತ್ತಿತ್ತು. ಅನಂತರ ವಿಚಾರಣೆ ನಡೆಸಿ ಊರ ಒಳಗೆ ಬಿಡಲಾಗುತ್ತಿತ್ತು. ಆ ರೀತಿ ಮಾಡಲು ಕಾರಣ ಆಗ ಪ್ಲೇಗ್ ರೋಗ ಹೆಚ್ಚಾಗಿದ್ದು, ಸೂಕ್ತ ವೈದ್ಯಕೀಯ ಸೌಲಭ್ಯಗಳಿಲ್ಲದಿದ್ದಾಗ, ಊರನ್ನು ರಕ್ಷಿಸಲು ಜನರನ್ನು ತಮ್ಮ ಊರಿನಿಂದ ಹೊರಗೆ ಈ ದೇವಾಲಯದಲ್ಲಿಯೇ ಇಟ್ಟು ಅವರನ್ನು ಪರಿಶೀಲಿಸಿ, ನಂತರ ಊರ ಒಳಗೆ ಬಿಡಲಾಗುತ್ತಿತ್ತು ಎಂಬ ನಂಬಿಕೆ ಜನತೆಗಿದ್ದಿತು.

ನಂಬಿಕೆ–ಆಚರಣೆ

ಪ್ರತಿಯೊಂದು ಸಮಾಜವು ಆದಿಕಾಲದಿಂದ ತನ್ನದೇ ಆದ ನಂಬಿಕೆಗಳನ್ನು ಆಚರಣೆ ಯಲ್ಲಿಟ್ಟುಕೊಂಡು ಬಂದಿದೆ. ಕಾಲ ದೇಶಗಳಿಗೆ ಅನುಗುಣವಾಗಿ ಅವು ಬದಲಾಗುತ್ತಲೂ ಇರುತ್ತವೆ. ಇಂತಹ ನಂಬಿಕೆಗಳು ಹಾಗೂ ಉತ್ಕಟವಾದ ಆಶಾಪೂರ್ಣ ಹಾರೈಕೆಗಳು ಆ ಸಮಾಜದ ಸಂಸ್ಕೃತಿ ಮತ್ತು ನಾಗರಿಕತೆಯ ಬೆಳವಣಿಗೆಗೆ ರೂಪ ಕೊಡುತ್ತವೆ.[೭] ನಂಬಿಕೆಗಳು ಜನತೆಯ ಜೀವನವನ್ನು ನೇರವಾಗಿ ಚಿತ್ರಿಸುತ್ತಿವೆ. ಹಾಗಾಗಿ ಜೀವನಕ್ಕೂ ನಂಬಿಕೆಗೂ ನಿಕಟವಾದ ಸಂಬಂಧವಿದ್ದು, ಅವೆರಡು ಹಾಸು ಹೊಕ್ಕಾಗಿ ಸೇರಿಕೊಂಡಿವೆ. ಹ್ಯೂಮ್‌ರವರ ಪ್ರಕಾರ "ಮನುಷ್ಯನಿಗೆ ವಿಚಾರ ಮಾಡುವ ಶಕ್ತಿ ಇದ್ದುದರಿಂದ ಅವನು ಹೊಸ ಹೊಸ ಕಲ್ಪನೆಗಳನ್ನು ಹೆಣೆಯುತ್ತಾನೆ. ಭಾವನೆಗಳನ್ನು ಹೊಸೆಯುತ್ತಾನೆ. ಅವು ಆತನ ಭಾಷೆ ಅಭಿವ್ಯಕ್ತಿಗೊಂಡಾಗ ಸಹಜವಾಗಿ ಹೊರಬೀಳುತ್ತವೆ. ಇಂಥ ವಿಶಿಷ್ಟ ರೀತಿಯ ಭಾವನಗಳೇ ಜನಪದ ನಂಬಿಕೆಗಳು.[೮] ಒಂದು ನಿರ್ದಿಷ್ಟ ಸ್ಥಳ ಅಥವಾ ಸಮಾಜದಲ್ಲಿ ನಡೆಯುವ ನಾಮಕರಣ, ಜವಳ, ಗಂಗೆ

ಪೂಜೆ, ವಿವಾಹ, ದೇವದಾಸಿ, ಆರ್ಚನೆ ಇನ್ನು ಮುಂತಾದ ಆಚರಣೆಗಳು ಜೊತೆಗೆ ಹುಟ್ಟಿನಿಂದ ಸಾವಿನವರೆಗೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತಾ ಬಂದಿದ್ದಾರೆ. ಅವುಗಳಲ್ಲಿ ಕೆಲವು ವಿಶಿಷ್ಟವಾದ ಹಾಗೂ ಮುಖ್ಯವಾದಂತಹ ಧಾರ್ಮಿಕ ವಿಧಿವಿಧಾನಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಆರ್ಚನೆ ವಿಧಾನ

ತುರುವನೂರಿನಲ್ಲಿ ಬರುವಂತಹ ದೇವರುಗಳಿಗೆ ಭಕ್ತಾದಿಗಳು ಪ್ರತಿದಿನ ಪೂಜೆಯನ್ನು ಮಾಡುತ್ತಾರೆ. ಪೂಜೆಗೆ ಮನೆಯಿಂದ ಇಲ್ಲವೇ ಪಕ್ಕದ ಬಾವಿ, ಕೆರೆ, ನದಿಗಳು, ಬೋರ್‌ವೆಲ್‌ನಿಂದ ನೀರನ್ನು ತಂದು ಅದಕ್ಕೆ ಅಭಿಷೇಕ ಮಾಡುತ್ತಾರೆ. ನಂತರ ವಿಭೂತಿ ಕುಂಕುಮವನ್ನು ಹಚ್ಚಿ ಪತ್ರೆ ಮರದ ಎಲೆಯನ್ನು, ಗರಿಕೆ ಪತ್ರೆ, ಬಿಲ್ವ ಪತ್ರೆ, ಬನ್ನಿ ಪತ್ರೆ, ಆರಿಪತ್ರೆ ಅಥವಾ ನಾನಾ ತರಹದ ಹೂಗಳನ್ನು ದೇವರಿಗೆ ಅರ್ಪಿಸಿ ಅಲಂಕರಿಸುತ್ತಾರೆ. ಕೆಲವು ದೇವಾಲಯಗಳಲ್ಲಿ ಗಂಡು ದೇವರಾದರೆ, ಪ್ರತಿವಾರದಲ್ಲಿ ಅಂದರೆ ಸೋಮವಾರ, ಗುರುವಾರ, ಶನಿವಾರದಂದು, ಸ್ತ್ರೀ ದೇವತೆಯಾದರೆ ಮಂಗಳವಾರ, ಶುಕ್ರವಾರದಂದು ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ಪೂಜೆ ಮಾಡುವಲ್ಲಿ ಕೆಲನಿಯಮಗಳಿವೆ. ದೇವರ ಪೂಜಾ ಸಮಯದಲ್ಲಿ ಗಂಟೆ ಬಾರಿಸುತ್ತಾ ಆರತಿ ಬೆಳಗುತ್ತಾರೆ. ಈ ರೀತಿಯಾಗಿ ಶ್ರಾವಣ ಮಾಸದಲ್ಲಿ ಕುಲ ದೇವರುಗಳಿಗೆ ಅದ್ದೂರಿಯಾಗಿ ಅಭಿಷೇಕ, ರುದ್ರಾಭಿಷೇಕಗಳು ನಡೆಯುತ್ತವೆ. ಭಜನೆ, ಪುರಾಣಗಳು ಪ್ರವಚನಗಳು ಆಚರಣೆಯಲ್ಲಿದೆ. ಹೀಗೆ ಇಲ್ಲಿನ ಎಲ್ಲಾ ದೇವಾಲಯಗಳಲ್ಲೂ ಇಂತಹ ಆಚರಣೆಗಳು ಕಂಡುಬರುತ್ತವೆ.

ಹರಕೆಗಳು

ಧಾರ್ಮಿಕ ವಿಧಿ ವಿಧಾನಗಳಲ್ಲಿ ಮತ್ತು ಪ್ರಾಚೀನ ಸಮುದಾಯಗಳಲ್ಲಿ ಹರಕೆಗಳ ಆಚರಣೆ ಪ್ರಮುಖವಾದ ವಿಧಾನವಾಗಿದೆ. ಈ ಪ್ರಪಂಚದಲ್ಲಿ ಜನಿಸಿದಂತಹ ಮಾನವ ಯಾವಾಗ ದೇವರ ಮೊರೆ ಹೋಗಲು ಪ್ರಾರಂಭಿಸಿದನೋ ಆಗಲೇ ಹರಕೆ ನಂಬಿಕೆಗಳು ಆರಂಭವಾದವು. ಅಂದಿನಿಂದ ಪ್ರಸ್ತುತದವರೆಗೂ ಸಂಪ್ರದಾಯಗಳು ಮುಂದುವರೆದುಕೊಂಡು ಬಂದಿವೆ. ಅಂದರೆ ಹರಕೆ ನಂಬಿಕೆಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಮಾನವನಿಗೆ, ಪ್ರಾಣಿಗಳಿಗೆ ಏನಾದರೂ ಆಪತ್ತು ತೊಂದರೆಗಳು, ಸಂಭವಿಸಿದಾಗ ಅವುಗಳ ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ದೇವರ ಮೊರೆ ಹೋಗುವುದು. ಅದಕ್ಕಾಗಿ ಮುಡುಪು ಕಟ್ಟುವುದು. ದೇವರ ಸೀರೆ ಹುಡುವುದು, ಕಟ್ಟಡಗಳ ಜೀರ್ಣೋದ್ಧಾರ, ಅನ್ನದಾನ, ಪ್ರಾಣಿ ಬಲಿಕೊಡುವುದು, ವಿವಿಧ ರೀತಿಯ ಪೂಜೆಗಳು, ಅಭಿಷೇಕಗಳನ್ನು ಮಾಡಿಸುವುದು, ಹುಂಡಿಗಳಲ್ಲಿ ಕಾಣಿಕೆ ಹಾಕುವುದು. ದೇವರು ನೆಲೆಸಿದಂತಹ ಸ್ಥಳಕ್ಕೆ ಪಾದಯಾತ್ರೆ ಕೈಗೊಳ್ಳುವುದು. ಕಾಯಿ, ಕರ್ಪೂರ ಪೂಜೆ ಮಾಡಿಸುವುದು ಮುಂತಾದ

ಹರಕೆಗಳನ್ನು ಮಾಡಿಕೊಳ್ಳುತ್ತಾರೆ. ಈ ರೀತಿಯಾಗಿ ಹರಕೆ ಕಟ್ಟಿಕೊಳ್ಳುವುದು ಈಗಲೂ ಮಾನವನ ಪರಂಪರೆಯಾಗಿ ಬೆಳೆದುಕೊಂಡು ಬಂದಿದೆ.

ಪೋತರಾಜನ ಆಚರಣೆ

ಗ್ರಾಮದ ಉತ್ತರದಲ್ಲಿ ರೆಡ್ಡಿ ಸಮುದಾಯದ ವಾಸದ ಮನೆಗಳ ಬಳಿ ಒಂದು ಚಿಕ್ಕದಾದ ನಾಲ್ಕು ಕಂಬಗಳ ಕಲ್ಲಿನ ಮಂಟಪವಿದೆ. ಈ ಮಂಟಪದ ಬಳಿ ಮದುವೆ, ಹಬ್ಬಗಳ ಆಚರಣೆಯಲ್ಲಿ ಎಡೆ ನೀಡುವ ಪ್ರಸಂಗವಿದೆ. ಅಂತಹ ಸಂದರ್ಭದಲ್ಲಿ ಸ್ತ್ರೀಯರು ಅತಿಯಾದ ಆಭರಣಗಳನ್ನು ಧರಿಸುತ್ತಾರೆ. ಸ್ತ್ರೀಯರಿಗೆ ಪುರುಷರು ಕೊಡಲಿ, ಕತ್ತಿಗಳಂತ ಆಯುಧಗಳನ್ನು ಬಳಸಿ ರಕ್ಷಣೆ ಕೊಡುತ್ತಾರೆ. ಈ ಆಚರಣೆ ರಾಜರ ಕಾಲದಲ್ಲಿ ಮದುವೆ ಮತ್ತಿತರ ಸಮಾರಂಭದಲ್ಲಿ ಸ್ತ್ರೀಯರು ತಮ್ಮಲ್ಲಿರುವ ಒಡವೆ, ಶ್ರೀಮಂತಿಕೆಯನ್ನು ಪ್ರದರ್ಶಿಸುವ ವಾಡಿಕೆಯಿತ್ತು. ಹಾಗಾಗಿ ಶುಭ ಸಂದರ್ಭದಲ್ಲಿ ಮಹಿಳೆಯರು ಒಡವೆಗಳನ್ನು ಹಾಕಿಕೊಂಡು ಕಾವಲುಗಾರರ ಆಶ್ರಯದಲ್ಲಿ ತೆರಳುತ್ತಿದ್ದು, ಈ ಗುಡಿ ಬಳಿ ಬಂದು ಪೂಜೆ ಸಲ್ಲಿಸುತ್ತಿದ್ದರು. ಶ್ರೀಮಂತಿಕೆಯ ಪ್ರದರ್ಶನ ಸಂಕೇತವಾಗಿ ಪೋತರಾಜನ ಗುಡಿ ಆಚರಣೆಯನ್ನು ವಿಶೇಷವಾಗಿ ಆಚರಿಸಲಾಗುತ್ತದೆ.

ಸೊನ್ನೆ ಸರ್ಗ(ಪೈರು ಪೂಜೆ)

ಈ ಆಚರಣೆಯು ಸಾಮಾನ್ಯವಾಗಿ ಶೂನ್ಯ ಮಾಸದಲ್ಲಿ ನಡೆಸುತ್ತಾರೆ. ಬೆಳೆದು ನಿಂತ ಪೈರಿಗೆ 'ಚರಗ' ಚೆಲ್ಲುವುದನ್ನು ಆಡು ಭಾಷೆಯಲ್ಲಿ ಸೊನ್ನೆ ಸರ್ಗ ಎಂದು ಕರೆಯಲಾಗುತ್ತಿದೆ. ಶೂನ್ಯ ಮಾಸದ ದಿನದಂದು ರೈತರು ಬೆಳಗಿನ ಜಾವ ಎದ್ದು, ಅಡುಗೆ ತಯಾರಿಸಿಕೊಂಡು, ಎತ್ತಿನ ಗಾಡಿಗಳಲ್ಲಿ ತಮ್ಮ ಜಮೀನುಗಳಿಗೆ ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಭೂಮಿಯಲ್ಲಿ ಕಡಲೆ, ಜೋಳ ಬೆಳೆಯಲಾಗುತ್ತದೆ. ಭೂದೇವಿಗೆ ಶಾಂತಿಯನ್ನು ಕೋರಲು ಚರಗ ಚೆಲ್ಲುತ್ತಾರೆ. ತಮ್ಮ ಜಮೀನುಗಳಲ್ಲಿ ಬನ್ನಿ ಮಹಾಕಾಳಿ ಮರದ ಕೆಳಗಡೆ ಮೂರು ಚಿಕ್ಕದಾದ ಬೆನಕಲ್ಲುಗಳನ್ನು ತೊಳೆದು ಇಡುತ್ತಾರೆ. ಅವಕ್ಕೆ ಅರಿಸಿನ-ಕುಂಕುಮ, ಹೂ ಪತ್ರೆಗಳನ್ನು ಹಾಕಿ ತಾವು ತಂದಿದ್ದ ಕಡುಬು ಅಥವಾ ಪಾಯಸವನ್ನು ಎಡೆ ನೀಡಿ ಒಂದು ಮಣ್ಣಿನ ಮಡಿಕೆಯಲ್ಲಿ ಅನ್ನ, ರಾಗಿ, ಅಂಬಲಿ, ಕಲಸಿ ಹಿಂಗಾರು ಬೆಳೆಗಳಾದ ಜೋಳ, ಹತ್ತಿ, ಗೋಧಿ, ಕಡಲೆ ಪೈರಿಗೆ 'ಹೋಲಿಗ್ಗ ವಾಸುದೇವ' ಎಂದು ಹೇಳುತ್ತಾ ಜಮೀನ ಸುತ್ತ ಚೆಲ್ಲಿ ಶಾಂತಿ ಕೋರುತ್ತಾರೆ. ಈ ಶಾಸ್ತ್ರ ಮುಗಿಸಿ ನಂತರ ಜಮೀನುಗಳಲ್ಲಿಯೇ ಸಿಗುವ ಔಡಲ ಎಲೆಯಲ್ಲಿ ಊಟ ಮಾಡುವ ವಾಡಿಕೆ ಇದೆ. ಈ ಆಚರಣೆಯನ್ನು ಪೂರ್ವಜರು ಬೆಳೆಗೆ ಆಗುವಂತ ದೃಷ್ಟಿ ದೋಷ ನಿವಾರಿಸಲು ಮಾಡಲಾಗುತ್ತಿದ್ದು, ಇದರಿಂದಾಗಿ ಬೆಳೆಯು ಹುಲುಸಾಗಿ ಬೆಳೆಯುತ್ತದೆ ಎಂಬ ನಂಬಿಕೆ.

ಕಳ್ಳ ದೇವರು

ಇದು ಬಹಳ ವಿಶೇಷವಾದಂತಹ ಆಚರಣೆಯಾಗಿದೆ. ಸಾಮಾನ್ಯವಾಗಿ ಈ ಆಚರಣೆ ಇರುವುದು ಈ ಊರಿನಲ್ಲಿ ಮಾತ್ರ. ಆಂಧ್ರದಿಂದ ವಲಸೆ ಬಂದ ವೀರಶೈವ ಕುಲಬಾಂಧವರು ಮಾತ್ರ ಆಚರಿಸುತ್ತಾರೆ. ಮೂಲತಃ ಈ ಜನರು ವೈಷ್ಣವ ಪಂಥದ ತಿರುಪತಿ ವೆಂಕಟೇಶ್ವರನ ಆರಾಧಕರಾಗಿದ್ದು, ನಂತರ ಶೈವಧರ್ಮಕ್ಕೆ ಪರಿವರ್ತಿನೆಗೊಂಡಿದ್ದಾರೆ. ಸಾಮಾನ್ಯವಾಗಿ ಈ ಆಚರಣೆಯನ್ನು ಮಾಡುವಂತಹ ಜನರು ವೀರಶೈವರು ಆಗಿದ್ದು, ಶ್ರೀಶೈಲ ಸುತ್ತಲಿನ ಪ್ರದೇಶ ದಟ್ಟ ಅರಣ್ಯವಾಗಿದ್ದು, ಅಲ್ಲಿ ವಾಸವಿದ್ದ ಇವರು ಪ್ರಕೃತಿ ಆರಾಧಕರಾಗಿದ್ದರು. ತುಂಬಾ ಕಷ್ಟದ ಜೀವನ ನಡೆಸುತ್ತಿದ್ದರು. ಒಮ್ಮೆ ಇವರು ದೇವರನ್ನು ಪ್ರಾರ್ಥಿಸಿದಾಗ ದೇವರು(ಬ್ರಹ್ಮ) ಮುದುಕನ ವೇಷದಲ್ಲಿ ಬಂದು ಅವರಿಗೆ ಪ್ರಕೃತಿಯನ್ನು ಪೂಜಿಸಿ, ಆ ಪ್ರಕೃತಿಯೇ ನಿಮ್ಮನ್ನು ರಕ್ಷಿಸುತ್ತದೆ ಎಂದು ತಿಳಿಸಿ ಮಾಯಾವಾದರಂತೆ. ಜನ ಅಲ್ಲಿಂದ ತುರುವನೂರಿನಲ್ಲಿ ಬಂದು ನೆಲೆಸಿದಾಗ ಈ ಆಚರಣೆ ನಡೆಸುತ್ತಿದ್ದಾರೆ. ಈ ಆಚರಣೆಯನ್ನು ಭಾರತ ಹುಣ್ಣಿಮೆಯ ಮೊದಲ ಶುಕ್ರವಾರದಂದು ಆಚರಿಸಲಾಗುತ್ತದೆ. ಈ ಆಚರಣೆಯನ್ನು ತಮ್ಮ ಮನೆಯಲ್ಲಿ ಜನಿಸಿದ ಮಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲರೂ ಬೆಳಿಗ್ಗೆಯಿಂದ ಉಪವಾಸವಿದ್ದು, ಮನೆಯಲ್ಲಿ ಸಿಹಿ ಹೋಳಿಗೆಯ ಅಡುಗೆ ಮಾಡಿಕೊಂಡು ರಾತ್ರಿ ಎಂಟು ಗಂಟೆ ವೇಳೆಗೆ ಜಮೀನುಗಲ್ಲಿ ಬೇವು ಅಥವಾ ಬನ್ನಿಮರಕ್ಕೆ ನೈವೇದ್ಯ ಸಲ್ಲಿಸುತ್ತಾರೆ. ಆ ದಿನದಂದು ಮನೆಯನ್ನು ಶುಭ್ರಗೊಳಿಸಿ ಮಡಿಯಿಂದ ಗೋಧಿ ಬೀಸಿ ಅದರ ಹಿಟ್ಟಿನಿಂದ-ರವೆಯಿಂದ ತುಪ್ಪದಲ್ಲಿ ಬೇಯಿಸಿ ಸಜ್ಜಕದ ಹೋಳಿಗೆ ತಯಾರಿಸಿ, ಬದನೆಕಾಯಿ ಪಲ್ಯ, ಅನ್ನ, ಮೀಸಲು ತುಪ್ಪ, ಹಾಲು ಮೊಸರು ಇಟ್ಟು ನೈವೇಧ್ಯ ಮಾಡಲಾಗುತ್ತದೆ. ಪಂಚೆಯನ್ನು ಮತ್ತು ಜನಿವಾರ ಮರಕ್ಕೆ ಹಾಕಲಾಗುತ್ತದೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಅದೇ ವೇಳೆಯಲ್ಲಿ ಮನೆಯಲ್ಲಿ ಜಮ್ಮೆ ಮರದ ಕೋಲನ್ನು ಮೂಲೆಗೆ ಇಟ್ಟು ಕುಬುಸದ ಬಟ್ಟೆಯನ್ನು ಸುತ್ತಿ ಕೋಲಿನ ಪಕ್ಕ ಇಟ್ಟು, ಇದಕ್ಕೆ ಖರಜಿಕಾಯಿ, ಪಾಯಸ, ಅನ್ನ, ಪಲ್ಯ ನೈವೇದ್ಯ ಮಾಡುವರು. ನಂತರ ಮನೆಯ ಮೂಲೆಯಲ್ಲಿ ಊಟವನ್ನು ಮಾಡುವರು.

ಗುಹೇಶ್ವರ ಬೆಟ್ಟ (ಗೋಸರಪ್ಪನ ಗುಡ್ಡ)

ಶ್ರಾವಣ ಮಾಸದಲ್ಲಿ ಊರಿನ ಜನರೆಲ್ಲ ಗುಹೇಶ್ವರ ಬೆಟ್ಟಕ್ಕೆ ಹೋಗಿ ಎಡೆ ನೀಡುವ ಪದ್ಧತಿ ಇದೆ. ಹರಿಹರದಿಂದ ಗೋಸರಪ್ಪನ ಗುಡ್ಡಕ್ಕೆ 'ಗುಹೇಶ್ವರಾ' ಎಂಬ ರಾಕ್ಷಸಿ ಪ್ರವೃತ್ತಿಯ ವ್ಯಕ್ತಿಯೊಬ್ಬ ಬಂದು ನೆಲೆಸುತ್ತಾನೆ. ಇವನು ಆಗಿನ ಏಳು ಮ್ಯಾಸ ಮಂಡಲದ ನ್ಯಾಯಕಟ್ಟೆಗಳ ಮುಖಂಡರನ್ನು ಹೆದರಿಸಿ, ಅವರಿಂದ ಕಪ್ಪಕಾಣಿಕೆಯನ್ನು ಪಡೆಯುತ್ತಿದ್ದನು. ಆ ಕಾಣಿಕೆಯು ಶ್ರಾವಣ ಮಾಸದಲ್ಲಿ ನೀಡುತ್ತಿದ್ದರು. ಅದೇ ಆಚರಣೆ ಅವನ ಮರಣದ ನಂತರವು

ಮುಂದುವರೆದುಕೊಂಡು ಬಂದಿದೆ. ಈಗ ಕಾಣಿಕೆ ಬದಲಾಗಿ ಗೋಸರಪ್ಪ ಅಥವಾ ಗುಹೇಶ್ವರಪ್ಪನನ್ನು ದೇವರೆಂದು ಪೂಜಿಸುತ್ತಾ ಅವನಿಗೆ ಶ್ರಾವಣ ಮಾಸದಂದು ಜನರಿಂದ ಆಹಾರವನ್ನು ಸಂಗ್ರಹಿಸಿ ಗುಡ್ಡಕ್ಕೆ ಹೋಗಿ ಎಡೆ ಅರ್ಪಿಸುತ್ತಾರೆ. ಏಳು ಹಳ್ಳಿಗಳ ಜನರು ಸಹ ಹೋಗುತ್ತಾರೆ. ಅದರಲ್ಲಿ ತುರುವನೂರು ಸಹ ಇಂತಹ ಆಚರಣೆಯನ್ನು ಈಗಲೂ ನಡೆಸುತ್ತ ಬಂದಿದೆ.

ಪೆನ್ನೊಬಳ ಲಕ್ಷ್ಮಿ ನರಸಿಂಹ ಆಚರಣೆ

ಈ ದೇವಾಲಯ ಊರಿನ ಮಾದಿಗರ ಸಮುದಾಯದಲ್ಲಿದೆ. ಆಂಧ್ರದಿಂದ ವಲಸೆ ಬಂದಂತಹ ಜನಾಂಗ ಈ ದೇವರನ್ನು ಪೂಜಿಸುತ್ತಿದ್ದಾರೆ. ಇದರ ಆಚರಣೆ ನಡೆಯುವುದು ಯುಗಾದಿ ಹಬ್ಬದ ಚಂದ್ರಮಾನ ದಿನದಂದು ದೇವರ ಪೂಜೆ ನಡೆಯುತ್ತದೆ. ದೇವರನ್ನು ಹೊತ್ತು ಮನೆ ಮನೆಗೆ ಬೇಟಿ ನೀಡುವ ಕಾರ್ಯಕ್ರಮ ಇರುತ್ತದೆ. ಈ ದೇವರ ವಿಶೇಷ ಆಚರಣೆ ಎಂದರೆ ಮಣೇವು, ಹಾಕಿಸುವುದು. ಅಂದರೆ ಒಂದು ಕಂಬಳಿ ಹಾಸಿ, ಅದರ ಮೇಲೆ ಬೆಲ್ಲ, ಬಾಳೆ ಹಣ್ಣನ್ನು ಸುಳಿದು, ಹಾಕಿ ಕಂಬಳಿ ಸುತ್ತ ತಿರುಗಿ ನಂತರ ಬೆಲ್ಲ ಬಾಳೆ ಹಣ್ಣನ್ನು ಪಡೆಯುವುದು. ಇದು ಒಂದು ರೀತಿ ಮೈಲಾರ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ದೋಣಿ ಸೇವೆ ಮಾಡಿದ ರೀತಿಯಲ್ಲೇ ನಡೆಯುತ್ತಿರುತ್ತದೆ. ಆದರೆ ಇತ್ತೀಚೆಗೆ ಇದು ನಡೆಯುತ್ತಿಲ್ಲವಾಗಿದೆ.

ದುರ್ಗಮ್ಮ ಕೋಲಾರಮ್ಮ ಆಚರಣೆ

ಇವೆರಡು ದೇವಾಲಯಗಳು ಮಾದಿಗರ ಹಟ್ಟಿಯಲ್ಲಿವೆ. ದಸರಾ ಹಬ್ಬದಲ್ಲಿ ಒಂಬತ್ತು ದಿನಗಳ ಕಾಲ ದೇವಿಯ ಪುರಾಣವನ್ನು ಈ ಗುಡಿಗಳಲ್ಲಿ ವಾಚನ ಮಾಡಲಾಗುವುದು. ದಸರಾ ಮರುದಿನ ಬೆಳಿಗ್ಗೆ ನಾಲ್ಕು ಜನ ಗಂಗೆ ಪೂಜೆಗೆ ಹೋಗಿ ಬಂದು ಮತ್ತೆ ದೇವಿಯನ್ನು ಆಲಯದೊಳಗೆ ಕೂರಿಸಲಾಗುವುದು. ಪೂರ್ಣ ಕುಂಬವನ್ನು ಹೊತ್ತು ಮಹಿಳೆಯರು ಕಳಶ, ತಪ್ಪಟೆ ವಾದ್ಯಗಳನ್ನು ಒಳಗೊಂಡು ಊರಿನಲ್ಲಿ ಮೆರವಣಿಗೆ ನಡೆಯುತ್ತದೆ.

ಸುಂಕಲಮ್ಮ ಆಚರಣೆ

ಸಾಮಾನ್ಯವಾಗಿ ಇದು ಗ್ರಾಮದ ಬಾಲಕರ ಶಾಲಾ ಹಿಂಭಾಗದಲ್ಲಿದೆ. ಊರಿನಲ್ಲಿ ದಡಾರ, ಕಜ್ಜಿ ಮುಂತಾದ ಸೋಂಕು ರೋಗಗಳು ಮಕ್ಕಳಿಗೆ ಬಂದಂತಹ ಸಂದರ್ಭದಲ್ಲಿ ಮೊಸರು, ಮಜ್ಜಿಗೆ, ಬುತ್ತಿ ಎಡೆ ನೀಡಿ ಮಗುವಿಗೆ ಬೇವಿನ ಸೀರೆ ಉಡಿಸಿ ದೇವಸ್ಥಾನದ ಸುತ್ತು ಹಾಕುತ್ತಾರೆ. ಈ ಆಚರಣೆ ನಡೆಸಿಕೊಂಡು ಬಂದರೆ ಯಾವುದೇ ಕಾಯಿಲೆ, ಸೋಂಕು ರೋಗಗಳು ಬರುವುದಿಲ್ಲ ಎಂಬ ನಂಬಿಕೆ ಜನರಲ್ಲಿ ಗಾಢವಾಗಿ ಬೇರೂರಿದೆ.

ಹಬ್ಬಗಳು

ಇತ್ತೀಚಿನ ದಿನಗಳಲ್ಲಿ ಮಾನವನ ಜೀವನ ತೀರಾ ಯಾಂತ್ರಿಕಮಯವಾಗಿದೆ. ನಿರಂತರ ಕ್ರಿಯೆಗಳು ಮತ್ತೆ ಮತ್ತೆ ಉರುಳಿ ಬರುತ್ತಿರುತ್ತವೆ. ಏಕಾಗ್ರತೆಯ ಈ ಬದುಕಿಗೆ ಬದಲಾವಣೆ, ವೈವಿಧ್ಯತೆ ಬೇಕು. ಅದಿಲ್ಲದಿದ್ದರೆ ಬದುಕು ನೀರಸ ಆದುದರಿಂದಲೇ ಮಾನವ ಸಮುದಾಯ ಆದಿಕಾಲದಿಂದಲೂ ಹೊಸತನವನ್ನು ಹುಡುಕುತ್ತಾ ಬಂದಿದೆ. ಮಹಾಕವಿ ಕಾಳಿದಾಸ ಹೇಳುವ ಹಾಗೆ ಮನುಷ್ಯರೆಲ್ಲ ಉತ್ಸಾಹ ಪ್ರಿಯರು. ನಿತ್ಯದ ಬದುಕಿನ ಜಂಜಾಟದಿಂದ ಒಂದಿಷ್ಟು ಬಿಡುವು ಪಡೆದುಕೊಳ್ಳಲು ಬಾಳಿಗೆ ಹೊಸ ಉತ್ಸಾಹ ತುಂಬಿಕೊಳ್ಳಲು ಇಂತಹ ಹಬ್ಬಗಳು ಬೇಕೆ ಬೇಕಾಗಿವೆ. ಅದು ಇಲ್ಲದಿದ್ದರೆ ಬದುಕು ಬಹಳ ಘೋರ, ನಿಂತ ನೀರಿನಂತೆ ನೀರಸವಾಗುತ್ತದೆ. ಆದುದರಿಂದ ಹಬ್ಬಗಳು ಮಾನವ ಜೀವಿಗಳಿಗೆ ಚೈತನ್ಯದ ಚಿಲುಮೆಯಾಗಿವೆ.

ಹಬ್ಬಗಳನ್ನು ಆಚರಣೆಗೆ ತಂದವರು ಭಾರತದ ಮಹರ್ಷಿಗಳು. ಇವರಿಗೆ ಕಾಲದ ಸ್ವರೂಪ, ರೂಪ, ಗುಣ, ಪ್ರಭಾವ ಅವುಗಳಿಂದ ಮಾನವರು ಪಡೆಯಬಹುದಾದ ಲಾಭ ಈ ವಿಷಯಗಳಲ್ಲಿ ಅಪಾರ ತಿಳುವಳಿಕೆ ಇದ್ದಿತ್ತು.[೯] ಹಬ್ಬಗಳು ಸಂತೋಷದ ಸಮಾರಂಭಗಳು ಎಂಬುದನ್ನು ಭಾರತೀಯ ಸಂಸ್ಕೃತಿಯಲ್ಲದೆ ಇತರ ಸಂಸ್ಕೃತಿಗಳು ಒಪ್ಪುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ಹೇಳಿರುವ ಅನೇಕ ಪದಗಳು, ಅವುಗಳ ಪ್ರಯೋಜನ, ಪಾಪ ಪರಿಹಾರ, ಪುಣ್ಯ ಸಾಧನೆ ಮತ್ತು ಪುರುಷಾರ್ಥ ಪ್ರಾಪ್ತಿ ಎಂದು ಸೂಚಿಸುತ್ತವೆ. ಮುಖ್ಯವಾಗಿ ಹಬ್ಬಗಳನ್ನು ಆಯಾ ನಿಯಮಿತ ದಿನ, ಸಮಯಗಳಲ್ಲಿಯೇ ಆಚರಿಸಬೇಕು. ಹಬ್ಬಗಳು ವಿವೇಕ ಮೂಲವಾಗಿದ್ದು, ಅವುಗಳ ಆಚರಣೆ, ವಿಧಿ ವಿಧಾನಗಳು, ಯೋಜನೆ, ಅಲಂಕರಣ, ಶುಚಿ, ಸೌಂದರ್ಯ, ಆನಂದ ಎಲ್ಲವೂ ಉತ್ತುಂಗವಾಗಿರಬೇಕಾಗುತ್ತದೆ.[೧೦] ತುರುವನೂರು ಪ್ರದೇಶದಲ್ಲಿ ಆಚರಣೆ ಮಾಡುತ್ತಿರುವಂತಹ ಹಬ್ಬಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

ಯುಗಾದಿ

ಯುಗಾದಿ ಎಂದೊಡನೆ ನೆನಪಿಗೆ ಬರುವುದು ಬೇವು-ಬೆಲ್ಲ. ಬೇವು ಚಿಗುರಿನ ಕಹಿ, ಬೆಲ್ಲ ಸಿಹಿ ಇವೆರಡು ಬದುಕಿನ ಪ್ರತೀಕ. ಆದ್ದರಿಂದ ಈ ಯುಗಾದಿ ಹಬ್ಬದ ಆಚರಣೆಯು ಹಳೆಯ ಮತ್ತು ಹೊಸ ವರ್ಷಗಳನ್ನು ಜೋಡಿಸುವ ಸುವರ್ಣ ಸೇತುವೆಯಾಗಿದೆ. ಯುಗಾದಿಯ ಪಾಲ್ಗುಣ ಬಹುಳ ಅಮವಾಸ್ಯೆಯ ದಿನ ಹಳೆಯ ವರ್ಷಕ್ಕೆ ವಿದಾಯ ಹೇಳಿ, ಮರುದಿನ ಚೈತ್ರ ಶುಕ್ಲ ಪ್ರತಿಪದೆಯೆಂದು, ಹೊಸ ವರ್ಷವನ್ನು ಸ್ವಾಗತಿಸುತ್ತೇವೆ. ಈ ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ಪರಿಸರದ ಜನರಲ್ಲಿ ಉಂಡದ್ದೆ ಉಗಾದಿ, ಮಿಂದದ್ದೆ ದೀಪಾವಳಿ, ಯುಗಾದಿ ಭೋಜನಕ್ಕೆ ಪ್ರಮುಖವಾದರೆ, ದೀಪಾವಳಿ ಅಭ್ಯಂಜನಕ್ಕೆ ಪ್ರಮುಖವಾಗಿದೆ. ಈ ಹಬ್ಬ ಕಾಲಕ್ಕೆ

ಪ್ರಕೃತಿಯಲ್ಲಿ ಆಗುವ ಬದಲಾವಣೆ ನಮ್ಮ ಗಮನ ಸೆಳೆಯುತ್ತವೆ. ಗಿಡ ಮರಗಳು ತಮ್ಮ ಎಲೆಗಳನ್ನು ಕಳಚಿ ಹೊಸ ಚಿಗುರು ಕಾಣಲು ಸಿದ್ಧವಾಗಿರುತ್ತವೆ. ರೈತರಿಗೆಲ್ಲ ಆಗ ಬಿಡುವು. ಮನೆಗೆಲ್ಲ ಸುಣ್ಣಬಣ್ಣ ಬಳಿದು, ಅಲಂಕಾರ ಮಾಡಿ ಸಿಂಗರಿಸುತ್ತಾರೆ. ಮನೆ ಮಂದಿಗೆಲ್ಲಾ ಹೊಸ ಬಟ್ಟೆ ತರುತ್ತಾರೆ. ಹೊಸ ಕಾಲದ ದಿನದಂದೇ ಭಗವಂತನನ್ನು ಸ್ಮರಿಸುತ್ತಾ ಬಲಮಗ್ಗುಲ್ಲು ಏಳಬೇಕು. ಎಣ್ಣೆ ಸ್ನಾನಮಾಡಿ, ಹೊಸ ಬಟ್ಟೆ ಧರಿಸಿ, ದೇವರಿಗೆ, ಗುರು–ಹಿರಿಯರಿಗೆ ನಮಸ್ಕರಿಸಿ, ಬೇವು ಬೆಲ್ಲ ತಿಂದು, ಅನಂತರ ಸಿಹಿ ಅಡುಗೆ ಊಟ ಮಾಡುವುದು. ಆ ದಿನದಲ್ಲಿ ಗ್ರಾಮದಲ್ಲಿ ವಿವಿಧ ಕ್ರೀಡೆಗಳು, ಮನೋರಂಜನೆಗಳು ನಡೆಯುತ್ತವೆ. ಸಂಜೆ ಸಮಯದಲ್ಲಿ ಪಂಚಾಂಗ ಶ್ರವಣ ಚಂದ್ರೋದಯ ಕಾಲದಲ್ಲಿ ಪೂರ್ವ ದಿಗಂತದಲ್ಲಿ ಮೂಡಿ ಬರುವ ಒಂದು ಕಲೆಯಿಂದ ಬೆಳಗಿಸುವ ಚಂದ್ರನನ್ನು ಕಂಡು ನಮಸ್ಕರಿಸುವುದು, ಗುರು–ಹಿರಿಯರ, ದೇವರ ಆಶೀರ್ವಾದ ಪಡೆಯುವುದು ಈ ಪರಿಸರದ ವಾಡಿಕೆಯಾಗಿದೆ.

ನಾಗರಪಂಚಮಿ

ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ಈ ಹಬ್ಬವನ್ನು ಎಲ್ಲಾ ಮತ–ಪಂಥಗಳೂ ಆಚರಿಸುವರು. ಭಾರತದಲ್ಲಿ ನಾಗರ ಪಂಥದ ಆರಾಧನೆಯು ವೇದ, ಪುರಾಣ, ಮಹಾಕಾವ್ಯ, ಸಾಹಿತ್ಯಗಳಲ್ಲಿ ನಾಗನಿಗೆ ಸಂಬಂಧಿಸಿದ ಅನೇಕ ಉಲ್ಲೇಖಗಳು ಕಂಡುಬಂದಿವೆ. ಹರಪ್ಪಾ ಸಂಸ್ಕೃತಿಯಲ್ಲೂ ನಾಗಾರಾಧನೆಗೆ ಬಹಳ ಮಹತ್ವ ನೀಡಲಾಗಿದೆ. ಶೈವ, ವೈಷ್ಣವ, ಜೈನ, ಬೌದ್ಧ ಮುಂತಾದ ಮತಗಳಲ್ಲಿಯೂ ನಾಗನಿಗೆ ವಿಶೇಷ ಪ್ರಧಾನ್ಯತೆ ನೀಡಲಾಗಿದೆ. ಈ ಪ್ರದೇಶದಲ್ಲಿಯೂ ಸಹ ನಾಗಪಂಚಮಿಯನ್ನು ವಿಶೇಷವಾಗಿ ಆಚರಣೆ ಮಾಡುವರು. ಹಿಂದಿನಿಂದಲೂ ಬೆಳೆದು ಬಂದಿರುವ ಹಬ್ಬವಾಗಿದೆ. ಊರಿನ ಯಾವುದೇ ದೇವಾಲಯಗಳ ಒಳ ನೋಡಿದರೂ ಸುಮಾರು ಐದರಿಂದ ಆರು ನಾಗಶಿಲ್ಪಗಳು ಕಂಡುಬರುತ್ತವೆ. ಈ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸಲಾಗುವುದು. ಮೊದಲ ದಿನ ಅಮವಾಸ್ಯೆ, ಎರಡನೆಯ ದಿನ ನಾಗರ ಶಿಲ್ಪಕ್ಕೆ ಹಾಲೆರೆಯುವುದು, ಕೈಗೆ ದಾರ ಕಟ್ಟುವುದು. ಮೂರನೇ ದಿನ ಶಿಲ್ಪಕ್ಕೆ ಹೋಳಿಗೆ, ಪಾಯಸ, ತಂಬಿಟ್ಟು, ಚಿಗಳಿ, ಕಡಲೆಕಾಳು ನೈವೇಧ್ಯ ಮಾಡುವುದು.

ಗಣೇಶನ ಹಬ್ಬ

ಗಣೇಶನು ಯಾವುದೇ ಮತ ಪಂಥಗಳ ದೇವತೆಯಲ್ಲ. ಭಾರತೀಯ ಜನಾಂಗದಲ್ಲಿ ಶತ ಶತಮಾನಗಳಿಂದ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆಯುತ್ತಾ ಬಂದಿರುವ ರಾಷ್ಟ್ರೀಯ ಹಬ್ಬವಾಗಿದೆ. ಆರಂಭದಿಂದಲೂ ಸರ್ವಕಾಲದಲ್ಲೂ, ಸರ್ವದೇಶದಲ್ಲೂ ನೆಲೆಸಿ ಪೂಜೆಗೊಂಡ ದೇವತೆ. ಗಣೇಶನ ಪ್ರಭಾವ ವಿಶ್ವ ವ್ಯಾಪ್ತಿಯಾದುದು. ಹಿಂದೂ ಧರ್ಮದ ಎಲ್ಲ ಪಂಥಗಳ ಅಗ್ರ ಪೂಜೆಗೆ ಪಾತ್ರನಾಗಿರುವ ಏಕೈಕ ದೇವತೆ. ಶಿವನನ್ನು ಪೂಜಿಸುವವರು, ವಿಷ್ಣುವೇ

ಸರ್ವೋತ್ತಮ ಎನ್ನುವವರು ಗಣಪತಿಯನ್ನು ಆರಾಧಿಸುವ 'ಗಣಪಥ್ಯ' ಎಂಬ ಪಂಥವು ನಮ್ಮ ದೇಶದಲ್ಲಿದೆ. ತುರುವನೂರಿನಲ್ಲಿ ಸಹ ಸಾಂಸ್ಕೃತಿವಾಗಿ ಈ ಗಣೇಶೋತ್ಸವವನ್ನು ಸಾರ್ವಜನಿಕವಾಗಿ ಬಗೆಬಗೆಯ ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ಸಾಮಾನ್ಯವಾಗಿ ಮಣ್ಣಿನಿಂದ ಮಾಡಿದ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿ, ಪುಷ್ಪ, ಪತ್ರ, ಪೂಜೆ, ಅಷ್ಟೋತ್ತರ ನಾಮಾವಳಿ ಮಾಡಿ, ಅನೇಕ ಬಗೆಯ ತಿಂಡಿಗಳು, ಫಲ, ತಾಂಬೂಲ ನೀಡಿ, ತಟ್ಟೆಯಲ್ಲಿ ಹಾಕಿ ಅದರಲ್ಲಿಟ್ಟು ಕೂರಿಸುವರು. ಅದೇ ದಿನ ಮಂಗಳೋತ್ಸವವಾಗಿ ಐದು ಬಗೆಯ ಅನ್ನಗಳನ್ನು ಮಾಡಿ ನೈವೇದ್ಯ ನೀಡಿ, ವಿಸರ್ಜನೆ ಮಾಡಲಾಗುವುದು. ಹೀಗೆ ಈ ಜನಪ್ರಿಯ ದೇವತೆಯ ಹುಟ್ಟು ಇಂದು ನೆನ್ನೆಯದಲ್ಲ ಶತಮಾನಗಳಷ್ಟು ಹಳೆಯದು.

ಗೌರಿ ಹಬ್ಬ

ಗ್ರಾಮೀಣ ಪ್ರದೇಶದಲ್ಲಿ ಆಚರಿಸುವಂತ ಆಚರಣೆಗಳು ಅರ್ಥಗರ್ಭಿತವಾಗಿರುತ್ತವೆ. ದಸರಾ ನಂತರ ಬರುವ ಆಶ್ವೀಜ ಹಣ್ಣಿಮೆಯಂದು ಚಿಕ್ಕ ಗೌರಿಯನ್ನು ಹಾಗೂ ದೀಪವಾಳಿ ಹಬ್ಬದ ನಂತರ ಬರುವ ಕಾರ್ತಿಕ ಹುಣ್ಣಿಮೆಯ ದಿನ ದೊಡ್ಡ ಗೌರಿ ಹಬ್ಬವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಹುಣ್ಣಿಮೆಯ ಮೂರು ದಿನ ಮುಂಚೆ ಹದಿನೈದು ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ತಾಯಂದಿರು ಸೀರೆ ಉಡಿಸಿ, ಸೊಂಟಕ್ಕೆ ಬೆಳ್ಳಿ ಡಾಬು ತೊಡಿಸಿ, ಒಡವೆ, ಮೊಗ್ಗಿನ ಜಡೆ ಹಾಕಿ, ಗೌರಿ ಮಕ್ಕಳನ್ನಾಗಿ ಮಾಡಲಾಗುತ್ತದೆ. ಗೌರಿ ಮಕ್ಕಳಾದವರಿಗೆ ಮನೆ ಮಂದಿಯೆಲ್ಲ ದುಡ್ಡು ಕೊಡುತ್ತಿದ್ದರು. ಕೆಲವರು ರಸ್ತೆಯಲ್ಲಿ ಹೋಗುವವರನ್ನು ಅಡ್ಡಗಟ್ಟಿ ಹಣ ಪಡೆಯುತ್ತಿದ್ದರು.ನಂತರ ಊರಿನ ಗಾಂಧಿ ಕೋಟೆಗೆ ತೆರಳಿ ತಮ್ಮ ಸ್ನೇಹಿತರಿಂದ ಹಣ ಪಡೆದದ್ದಕ್ಕೆ ತಿಂಡಿ ತಿಂದು, ಕುಣಿದು ಕುಪ್ಪಳಿಸಿ ಸಂತೋಷ ಪಡುತ್ತಿದ್ದರು. ಗೌರಿ ಹುಣ್ಣಿಮೆಯ ದಿನದಂದು ಹೊತ್ತು ಮುಳುಗುವ ಮುನ್ನ ಅವರವರ ಮನೆಯ ಮಾಳಿಗೆಗಳ ಮೇಲೆ ಮಣ್ಣಿನಿಂದ ಮಾಡಿದ ಕೊಂತಮ್ಮ ಗೊಂಬೆಗೆ ತಂಗಡಿಕೆ ಹೂ ಮುಡಿಸಿ, ಊದುಬತ್ತಿ ಹಚ್ಚಿ, ಕೈಮುಗಿದು ಪೂಜೆ ಮಾಡಲಾಗುತ್ತದೆ. ನಂತರ ಎಳ್ಳು, ಮೆಣಸು ಬೀಜ, ಹಚ್ಚಿ ಸಜ್ಜೆ ರೊಟ್ಟಿ ಮಾಡಿ ಮಾಳಿಗೆಯಲ್ಲಿ ಚಾಪೆ ಹಾಸಿ ಮನೆ ಮಂದಿಯೆಲ್ಲ ಕುಳಿತು ಊಟ ಮಾಡುವ ಸಂಪ್ರದಾಯವು ಬೆಳೆದುಬಂದಿದೆ.

ದಸರಾ

ನಾಡಾ ಹಬ್ಬವೆಂದು ಪ್ರಸಿದ್ಧಿ ಪಡೆದಿರುವ ದಸರಾ ಹಬ್ಬ ನವರಾತ್ರಿ ಆಶ್ವಿಜ ಮಾಸದ ಶುಕ್ಲ ಪಕ್ಷದ ಪಾಡ್ಯದಿಂದ, ನವಮಿಯವರೆಗೂ ದುರ್ಗೆಯನ್ನು ವಿವಿಧ ರೂಪಗಳಲ್ಲಿ ಪೂಜಿಸಲಾಗುವುದು. ಈ ಹಬ್ಬವನ್ನು ಕೆಲವರು ನವಮಿವರೆಗೆ ಒಂಬತ್ತು ದಿನ, ಕೆಲವರು ತದಿಗೆಯಿಂದ ಏಳು ದಿನ, ಮತ್ತೆ ಕೆಲವರು ಪಂಚಮಿಯಿಂದ ಐದು ದಿನ, ಸಪ್ತಮಿಯಿಂದ

ಮೂರು ದಿನ. ಹೀಗೆ ವಿಶೇಷವಾಗಿ ನಡೆಯುತ್ತದೆ. ಒಂಬತ್ತು ದಿನಗಳ ಕಾಲ ಅವಿವಾಹಿತರು, ಸಂತಾನ ಹೀನರು ಮಡಿಯಿಂದ ಬೆಳಗಿನ ಜಾವ ಬನ್ನಿಮಹಾಕಾಳಿ ಮರಕ್ಕೆ ಪೂಜೆ ಸಲ್ಲಿಸುವರು. ನವರಾತ್ರಿಯಲ್ಲಿ ಮನೆಯಲ್ಲಿರುವಂತಹ ಆಯುಧೋಪಕರಣ, ಯಂತ್ರೋಪಕರಣ, ವಾಹನಗಳಿಗೆ ವಿಶೇಷವಾಗಿ ನಿಂಬೆ ಹಣ್ಣು, ಬೂದುಕುಂಬಳ ಕಾಯಿಗಳಿಗೆ, ಕುಂಕುಮ ತುಂಬಿ, ಕರ್ಪೂರ ಉರಿಸಿ ವಾಹನಾದಿಗಳಿಗೆ ಪೂಜೆ ಸಲ್ಲಿಸಿ ಸಿಹಿ ಹಂಚುತ್ತಾರೆ. ನವರಾತ್ರಿ ಕಳೆದು ಹತ್ತನೆಯ ಹಾಗೂ ದಸರೆಯ ಕೊನೆಯ ದಿನವಾದ ವಿಜಯದಶಮಿ ಯೆಂದು ಬನ್ನಿಮರದ ಪೂಜೆ ನಡೆಯುವುದು. ಬನ್ನಿಯ ಎಲೆಯನ್ನು ತಂದು ಎಲ್ಲಾ ದೇವರಿಗೆ ಹಾಕಿ, ಗುರು–ಹಿರಿಯರಿಗೂ ನೀಡಿ ಆಶೀರ್ವಾದ ಪಡೆಯಲಾಗುವುದು.

ದೀಪಾವಳಿ

ದೀಪಾವಳಿ ಎಂದರೆ ದೀಪಗಳ ಸಾಲು, ದೀಪಗಳ ಹಬ್ಬ, ಇದು ಕಾರ್ತಿಕ ಮಾಸದ ಹಬ್ಬವಾದರೂ ಆಶ್ವೀಜ ಕೃಷ್ಣ ತ್ರಯೋದಶಿ ಸಂಜೆಯಂದು ಸತತ ಐದು ದಿನಗಳವರೆಗೂ ನಡೆಯುತ್ತದೆ. ಈ ಹಬ್ಬದ ಸಡಗರ ಸಂಭ್ರಮದಲ್ಲಿ ಶ್ರೀಮಂತರು, ಮಧ್ಯಮ ವರ್ಗದವರು, ಸಾಮಾನ್ಯ ಜನರು ಎಲ್ಲಾ ಜಾತಿ, ವರ್ಗದವರು ಚತುರ್ದಶಿಯ ಮುಂದಿನ ದಿನದಂದು ಸಂಜೆ ವೇಳೆಯಲ್ಲಿ ಧನಲಕ್ಷ್ಮಿಯನ್ನು ಪೂಜೆ ಮಾಡುವರು. ಹಣ, ಚಿನ್ನವನ್ನು ಕಲಶದ ಜೊತೆ ಇಟ್ಟು, ಲಕ್ಷ್ಮೀಯನ್ನು ಪೂಜಿಸಿ ಉತ್ತರೋತ್ತರ ಅಭಿವೃದ್ಧಿ ಮಾಡುವಂತೆ ಪ್ರಾರ್ಥಿಸುತ್ತಾರೆ. ಈ ದಿನದಂದು ಬೆಳಗ್ಗೆ ಅಭ್ಯಂಜ ಸ್ನಾನ ಮಾಡಿ ಲಕ್ಷ್ಮೀಯನ್ನು ಪೂಜೆ ಮಾಡಿದರೆ ದಾರಿದ್ರ್ಯ, ದುರದೃಷ್ಟಗಳು ಪರಿಹಾರವಾಗುತ್ತವೆ. ಅಲ್ಲದೇ ತಮ್ಮ ಜಮೀನುಗಳಲ್ಲಿ ನೀರೆತ್ತುವ ಪಂಪುಗಳಲ್ಲಿ ಲಕ್ಷ್ಮೀ ಪೂಜೆ ಮಾಡಿ, ಐದು ಜನ ಮುತ್ತೈದೆಯರನ್ನು ಇರಿಸಿ, ಅವರ ಹುಡಿ ತುಂಬಿ ಹಬ್ಬವನ್ನು ಆನಂದದಿಂದ ಆಚರಿಸುತ್ತಾರೆ. ಈ ಹಬ್ಬದಲ್ಲಿ ಪ್ರತಿಯೊಬ್ಬರು ಹೊಸ ಬಟ್ಟೆಗಳನ್ನು ಧರಿಸಿರುತ್ತಾರೆ. ಹಾಗಾಗಿ ಯಾರು ಶ್ರೀಮಂತರು ಯಾರು ಬಡವರೆಂಬ ಭೇದವಿಲ್ಲದೆ ಎಲ್ಲರೂ ಸಂತೋಷದಿಂದ ನಲಿಯುತ್ತಾರೆ. ದೀಪದ ಬೆಳಕಿನಲ್ಲಿ ಬಣ್ಣದ ಪಟಾಕಿಗಳನ್ನು ಹಾರಿಸುತ್ತಾರೆ.

ಮಹಾಶಿವರಾತ್ರಿ

ಭಾರತೀಯ ಹಬ್ಬಗಳಲ್ಲಿ ಪ್ರಮುಖವಾದ ಹಬ್ಬ ಮಹಾಶಿವರಾತ್ರಿ. ಮಾಘಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಶಿವನ ಆರಾಧಕರು ಈ ಹಬ್ಬವನ್ನು ಹಿಂದಿನಿಂದ ಆಚರಿಸಿಕೊಂಡು ಬಂದಿದ್ದಾರೆ. ಶಿವರಾತ್ರಿ ವೇಳೆಯಲ್ಲಿ ನಡೆಯುವ ಉಪವಾಸ, ರಾತ್ರಿಯಿಡೀ ಜಾಗರಣೆಯಾಗಿರುವಂತ ಆಚರಣೆ. ಆ ದಿನದಂದು ಶಿವಲಿಂಗಕ್ಕೆ ಮೊದಲ ಜಾವ ಹಾಲಿನ, ಎರಡನೇ ಜಾವ ಮೊಸರಿನ, ಮೂರನೇ ಜಾವ ತುಪ್ಪದಿಂದ, ನಾಲ್ಕನೇ ಜಾವ ಜೇನುತುಪ್ಪದ ಅಭಿಷೇಕ ಮಾಡಿ ಮಂತ್ರಗಳನ್ನು ಉಪದೇಶಿಸಲಾಗುವುದು. ಬಿಲ್ವಪತ್ರೆ, ಎಕ್ಕ, ಕಣಗಿಲೆ, ದತ್ತೂರಿ, ಬೃಹತೀ

ಪತ್ರೆಗಳನ್ನು ಸ್ವೀಕರಿಸಿ ತಲೆಯಲ್ಲಿ ಮುಡಿಯುವುದು. ಫಲಹಾರ, ಮಂಡಕ್ಕಿಯಂತ ಆಹಾರವನ್ನು ಸೇವಿಸುತ್ತಾ ದೇವರ ಧ್ಯಾನ ಮಾಡುತ್ತಾ ಶಿವರಾತ್ರಿ ಜಾಗರಣೆ ಆಚರಿಸಲಾಗುವುದು.

ಮಕರ ಸಂಕ್ರಾಂತಿ

ಈ ಹಬ್ಬವನ್ನು ಎಳ್ಳು ಬೆಲ್ಲ, ಸುಗ್ಗಿಯ ಹಬ್ಬವೆಂತಲೂ ಕರೆಯುವರು. ಸಂಕ್ರಮಣ, ಮಕರ ಸಂಕ್ರಮಣ ಎಂದೆಲ್ಲಾ ಹೆಸರಾದ ಈ ಹಬ್ಬ ಸಂಕ್ರಾಂತಿ ಎಂದರೆ ವಿಶಿಷ್ಟವಾದ ಬದಲಾವಣೆ ಹಾಗೂ ಉಜ್ವಲವಾದ ಬೆಳಕು ಎಂದರ್ಥ. ಪುಷ್ಯ ಲಕ್ಷ್ಮೀಯ ಆಗಮನದ ತರುವಾಯ ಸೂರ್ಯನು ತನ್ನ ದ್ವಾದಶ ರಾಶಿಗಳಲ್ಲಿ ಒಂದಾದ ಮಕರ ರಾಶಿಗೆ ಪ್ರವೇಶಿಸಿ ದಕ್ಷಿಣದಿಂದ ಉತ್ತರಾಭಿಮುಖವಾಗಿ ಆರು ತಿಂಗಳ ಕಾಲ ಪ್ರಯಾಣ ಬೆಳೆಸುವನು. ಈ ಪಥ ಬದಲಿಕೆಯ ದಿನವನ್ನು ಮಕರ ಸಂಕ್ರಮಣ ಅಥವಾ ಮಕರ ಸಂಕ್ರಾಂತಿ ಎಂದು ಕರೆಯುವರು.

ಮಕರ ಸಂಕ್ರಮಣದ ಹಿಂದಿನ ದಿನ ಪ್ರಾತಃಕಾಲದಲ್ಲಿ ಎದ್ದು ಮತ್ತೈದೆಯರಿಗೆ ಮಂಗಳಕರವಾದ ವಸ್ತುಗಳನ್ನು ಕೊಡುತ್ತಾರೆ. ಈ ದಿನ ಧರ್ನುಮಾಸದ ಕೊನೆಯ ದಿನವಾಗಿದ್ದುದರಿಂದ ದೇವರಿಗೆ ಗೋಧಿ ಪಾಯಸ, ಸಜ್ಜೆ ರೊಟ್ಟಿ, ಕುಂಬಳಕಾಯಿ ನೈವೇಧ್ಯ ಮಾಡುತ್ತಾರೆ. ಮಾರನೇ ದಿನವೇ ಸಂಕ್ರಮಣ. ಈ ದಿನದಂದು ಹೆಣ್ಣು ಮಗಳು ಹೊಸ ವಸ್ತ್ರ ಧರಿಸಿ ಎಳ್ಳು, ಸಕ್ಕರೆ, ಕೊಬ್ಬರಿ, ಕಬ್ಬು, ನೆಲಗಡಲೆ, ಬಾಳೆ ಹಣ್ಣುಗಳನ್ನು ಮನೆ ಮನೆಗೂ ಬೀರುವ ಪದ್ಧತಿ ಇದೆ. ಸಂಕ್ರಮಣದ ಮರುದಿನ ಕರಿ ಎರೆಯುವ ಸಂಪ್ರದಾಯವಿದೆ. ಅಂದು ಮಕ್ಕಳಿಗೆ ಹೊಸ ವಸ್ತ್ರ ತೊಡಿಸಿ, ಅಲಂಕರಿಸಿ ತಲೆಯ ಮೇಲೆ ಎಳ್ಳನ್ನು ಸುರಿದು ಆರತಿ ಮಾಡುತ್ತಾರೆ. ಮಕರ ಸಂಕ್ರಮಣ ಈ ಪ್ರದೇಶವನ್ನೊಳಗೊಂಡಂತೆ ಕರ್ನಾಟಕದಲ್ಲೆಲ್ಲಾ ಆಚರಣೆಯಲ್ಲಿದೆ. ಹೀಗೆ ಹಬ್ಬಗಳು ತುರುವನೂರಿನ ಸಾಂಸ್ಕೃತಿಕ ಪ್ರತಿಬಿಂಬಗಳಾಗಿ ಜನತೆಯ ದುಃಖಗಳನ್ನು ನಿವಾರಿಸುವ ಸಾಧನಗಳೆಂದರೆ ತಪ್ಪಾಗಲಾರದು.

ಜಾತ್ರೆಗಳು

ಜಾತ್ರೆಗಳು ಎಲ್ಲಾ ಸಮುದಾಯದಲ್ಲಿ ಕಂಡುಬಂದಿವೆ. ಯಾತ್ರೆಯ ತದ್ಭವ ರೂಪವೇ ಜಾತ್ರೆಯಾಗಿದೆ. ಇದು ತನ್ನದೆಯಾದ ವೈಶಿಷ್ಟ್ಯದಿಂದ ಕೂಡಿದೆ. 'ಯಾನೇ ನತ್ರಾಯತೇ ಇತಿಯಾತ್ರಾ' ಅಂದರೆ ಪುಣ್ಯಕ್ಷೇತ್ರದ ದರ್ಶನಕ್ಕೆ ಹೋಗುವವರ ರಕ್ಷಣೆಯೇ ಯಾತ್ರೆಯಾಗಿದೆ. ಈ ಯಾತ್ರೆಯು ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದ ದೇವಾನುದೇವತೆಗಳನ್ನು ಭಯ, ಭಕ್ತಿಯಿಂದ ಸಾಮೂಹಿಕವಾಗಿ ಪೂಜಿಸಿ, ಪ್ರಾರ್ಥಿಸಿ, ಸಂಭ್ರಮಿಸುವ ಒಂದು ಜನ ಸಮೂಹವಾಗಿದೆ. ಮಾನವನು ಪ್ರಕೃತಿಯಲ್ಲಿ ಅದ್ಭುತ ಶಕ್ತಿ ಇದೆ ಎಂದು ತಿಳಿದು ಅವುಗಳಿಗೆ ಗೌರವ, ಪವಿತ್ರ ಭಾವನೆಯಿಂದ ನೋಡಿ ಆರಾಧಿಸಲು ಮಾಡಲು ಪ್ರಾರಂಭ ಮಾಡಿದ. ಹೀಗೆ ಆಚರಣೆಗೆ ಬಂದ ಆರಾಧನೆ ಪ್ರಾರಂಭದಲ್ಲಿ ಕುಟುಂಬ ವ್ಯಕ್ತಿಗಳ ಗುಂಪಿಗೆ ಮೀಸಲಾಗಿತ್ತು.

ಜನಸಂಖ್ಯೆ ಬೆಳೆದಂತೆ ನಾಗರೀಕತೆ ವಿಕಾಸಗೊಂಡಂತೆ ಆರಾಧನೆ ಕುಟುಂಬದ ಚೌಕಟ್ಟನ್ನು ಮೀರಿ ಸಮಾಜ ಸೇರಿತು. ಆರಾಧನೆಗಳೇ ಜಾತ್ರೆಗಳಿಗೆ ಕಾರಣವಾಯಿತು.[೧೧] ಜಾತ್ರೆಯನ್ನು ಒಂದು ಸಾಮಾಜಿಕ ಚಟುವಟಿಕೆಯಾಗಿ ವಿಶ್ಲೇಷಿಸುವಾಗ ನಮಗೆ ಎರಡು ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ. ಒಂದು ಆರಾಧನೆಯ ಅಂಶ ಹಾಗೂ ಇನ್ನೊಂದು ಸಡಗರದ ಅಂಶ.[೧೨] ಜನರ ಅನೇಕ ಕಾರ್ಯಗಳಿಗೆ ಜಾತ್ರೆಯು ಒಂದು ಗಡುವಾಗಿರುತ್ತದೆ. ಬಟ್ಟೆ ಖರೀದಿ, ಮನೆ ರಿಪೇರಿ, ಗೋಡೆಗಳಿಗೆ ಸುಣ್ಣ ಬಣ್ಣ ಹೊಡೆಯುವುದು. ನೆಂಟರನ್ನು ಬರಹೇಳುವುದು ಇತ್ಯಾದಿಗಳೆಲ್ಲವು ಜಾತ್ರೆಯ ಒಂದು ಒಳ್ಳೆಯ ಸಂದರ್ಭವಾಗಿದೆ. ದೇವಸ್ಥಾನದ ಜಾತ್ರೆಯ ಮಹತ್ವ ಎಷ್ಟಿರುತ್ತದೆಂದರೆ, ಜಾತ್ರೆಗಾಗಿ ಗೊನೆ ಕಡಿದ ಬಳಿಕ ಉತ್ಸವದ ಕೊನೆಯಲ್ಲಿ ಧ್ವಜವಿಳಿಸುವ ತನಕ ಆಯಾ ಗ್ರಾಮದಲ್ಲಿ ಊರಿನ ಮದುವೆ, ಇತ್ಯಾದಿ ಸಮಾರಂಭಗಳನ್ನು ಮಾಡಬಾರದು. ಏಕೆಂದರೆ ದೇವರಿಗೆ ತೋರಣ ಕಟ್ಟಿದ ಬಳಿಕ ಮನೆಗಳಲ್ಲಿ ಚಪ್ಪರ, ತೋರಣ ಹಾಕಬಾರದೆಂಬ ನಂಬಿಕೆಯಿದೆ. ಸಾಮಾನ್ಯವಾಗಿ ಜಾತ್ರೆಯ ಕಟ್ಟಳೆಗಳನ್ನು ಯಾರು ಮೀರುವಂತೆಯೂ ಇಲ್ಲ. ಹಾಗೆ ಯಾರಾದರೂ ಮಾಡಿದರೆ ಕೋಪಕ್ಕೆ ಈಡಾಗಿ ಅವಘಡಗಳು ಉಂಟಾಗುವುದುವೆಂಬ ನಂಬಿಕೆಯು ಪ್ರಚಲಿತವಿದೆ. ಈ ನಿಯಮಗಳು ಬಹುಶಃ ಜಾತ್ರೆಯಲ್ಲಿ ಊರಿನ ಪ್ರತಿಯೊಬ್ಬರು ತಪ್ಪದೇ ಭಾಗವಹಿಸಿ ಯಶಸ್ವಿಗೊಳಿಸಬೇಕೆಂಬುವುದಕ್ಕಾಗಿ ಮಾಡಿದ ಉಪಾಯಗಳಾಗಿರಬೇಕು.[೧೩]

ತುರುವನೂರಿನಲ್ಲಿ ಆಚರಿಸುವ ಜಾತ್ರೆಗಳಲ್ಲಿ ಆಂಜನೇಯ ಜಾತ್ರೆ, ಕಲ್ಲಪ್ಪನ ಜಾತ್ರೆ, ಮಾರಮ್ಮನ ಜಾತ್ರೆಗಳು ಪ್ರಮುಖವೆನಿಸಿವೆ. ಸಾಮಾನ್ಯವಾಗಿ ಆಂಜನೇಯ, ಕಲ್ಲಪ್ಪನ ಜಾತ್ರೆಗಳು ಒಂದು–ಎರಡು ದಿನ ನಡೆಯುತ್ತವೆ. ಮಾರಮ್ಮನ ಜಾತ್ರೆ ಮೂರರಿಂದ ಐದು ದಿನಗಳ ಕಾಲ ನಡೆಯುತ್ತವೆ. ಅಂತಹ ಜಾತ್ರೆಗಳು ಈ ಕೆಳಗಿನಂತೆ ಕಂಡುಬಂದಿವೆ.

ಆಂಜನೇಯ ಜಾತ್ರೆ

ತುರುವನೂರಿನ ಪ್ರಮುಖ ಜಾತ್ರೆಯಾಗಿದೆ. ಇದು ಪ್ರತಿವರ್ಷ ಆಚರಣೆಯಲ್ತಿದೆ. ಈ ಜಾತ್ರೆಯನ್ನು ಭರತ ಹುಣ್ಣಿಮೆಯ ಮಾಘ ನಕ್ಷತ್ರ ದಿನದಲ್ಲಿ ಆಚರಿಸಲಾಗುವುದು. ತುರುವನೂರಿನ ಆಂಜನೇಯ ಜಾತ್ರೆಯ ಕೇಂದ್ರ ಬಿಂದು ರಥೋತ್ಸವ ಮತ್ತು ದಾಸಯ್ಯನ ಪವಾಡವಾಗಿದೆ.

ರಥೋತ್ಸವ: ಜನರು ತಮ್ಮ ಮಧ್ಯೆ ದೇವರನ್ನು ಸನ್ಮಾನಿಸುವ ಮೆರವಣಿಗೆ ಮಾಡುವ ಸಂಭ್ರಮವನ್ನಾಚರಿಸುವ ಸಂದರ್ಭವೇ ರಥೋತ್ಸವವಾಗಿರುತ್ತದೆ. ದೇವರ ಮೇಲಿನ ಅಭಿಮಾನದ ಪರಾಕಾಷ್ಟೆ ಕಂಡುಬರುವುದು ಈ ತೇರನ್ನೆಳೆಯುವುದರಲ್ಲಿ. ತುರುವನೂರಿನ ರಥೋತ್ಸವ ಬೆಳಿಗ್ಗೆ ನಡೆಯುತ್ತದೆ. ದೇವಾಲಯದ ಆಂಜನೇಯ ಉತ್ಸವ ಮೂರ್ತಿಯನ್ನು ರಥದ ಒಳಗಡೆ ಪೀಠದ ಮೇಲೆ ಕೂರಿಸುತ್ತಾರೆ. ಅಲ್ಲಿಂದ ಊರಿನ ಆಚೆ ಇರುವ ಅಡವಿ ಆಂಜನೇಯ

ದೇವಾಲಯ ಬಳಿವರೆಗೆ ರಥವನ್ನು ಎಳೆಯಲಾಗುತ್ತದೆ. ಅಲ್ಲಿ ಪೂಜೆ ನಡೆಸಿ ನಂತರ ಮೂಲ ದೇವಾಲಯ ಬಳಿ ರಥವನ್ನು ಎಳೆದು ತರುತ್ತಾರೆ.

ದಾಸಯ್ಯನ ಪವಾಡ: ಸ್ಥಳೀಯರು ದಾಸಯ್ಯ ಆದವರನ್ನು 'ಮುರುಡಪ್ಪ'ಎಂದು ಕರೆಯುತ್ತಾರೆ. ರಥೋತ್ಸವ ನಂತರ ಮಧ್ಯಾಹ್ನ ಮೂರು ಗಂಟೆಯ ನಂತರ ದಾಸಯ್ಯನ ಪವಾಡ ಆರಂಭವಾಗುತ್ತದೆ. ದಾಸಯ್ಯ ಆದವರು ಸುಮಾರು ಜಾತ್ರೆಯಾಗುವುದಕ್ಕೆ ಮುಂಚಿತವಾಗಿ ಒಂಬತ್ತು ದಿನಗಳ ಕಾಲ ಉಪವಾಸ ಇರುತ್ತಾರೆ. ಈ ಅವಧಿಯಲ್ಲಿ ಮನೆ ಮನೆಗಳಲ್ಲಿ ಹೋಗಿ ಭಿಕ್ಷಾಟನೆ ಮಾಡಿ ಬರುತ್ತಿರುತ್ತಾರೆ ಒಂಬತ್ತನೆ ದಿನದಂದು ಮುಖಕ್ಕೆ ಅರಿಶಿಣ, ತಲೆಗೆ ಹಳದಿ ಪೇಟ, ಹೂವಿನ ಹಾರ, ಕಾಲು ಕಡಗ ಧರಿಸಿಕೊಂಡು ಸಾವಿರಾರು ಭಕ್ತರ ಸಮೂಹದಲ್ಲಿ ಮನೆಯಿಂದ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಕರೆತರಲಾಗುತ್ತದೆ. ದೇವಾಲಯದಲ್ಲಿ ಆಂಜನೇಯನಿಗೆ ಪೂಜೆ ಸಲ್ಲಿಸುತ್ತಾರೆ. ಅಲ್ಲಿಂದ ಅಡವಿ ಆಂಜನೇಯ ದೇವಾಲಯದಲ್ಲಿ ದೊಡಘಟ್ಟದ ಗುಡ್ಡಕ್ಕೆ ದಾಸಯ್ಯ ತೆರಳುತ್ತಾನೆ. ಮೂರು ಕಿಲೋಮೀಟರ್ ದೂರದ ಸ್ಥಳಕ್ಕೆ ಕೇವಲ ಅರ್ಧ ಗಂಟೆಯಲ್ಲಿ ದಾಸಯ್ಯ ಜೊತೆ ಅನೇಕ ಭಕ್ತಾದಿಗಳು ಹೋಗುವರು.

ದೊಡ್ಡಘಟ್ಟ ಲಕ್ಷ್ಮೀನರಸಿಂಹ ದೇವರಿಗೆ ಪೂಜೆ ಸಲ್ಲಿಸಿ, ನಂತರ ದಾಸಯ್ಯ ಪವಾಡ ನಡೆಯುತ್ತದೆ. ದಾಸಯ್ಯ ಮುಳ್ಳಿನ ಪಲ್ಲಕ್ಕಿಯಲ್ಲಿ ಮಲಗುತ್ತಾರೆ. ಅಲ್ಲಿಂದ ಮುಳ್ಳಿನ ಪಲ್ಲಕ್ಕಿ ಸಮೀಪ ದೊಡ್ಡಘಟ್ಟದ ಮನೆ ಮನೆಗೂ ತೆರಳಿ ಭಿಕ್ಷಾಟನೆ ನಡೆಸುತ್ತಾ ಆಂಜನೇಯ ದೇವಾಲಯಕ್ಕೆ ಪೂಜೆ ಸಲ್ಲಿಸಿ, ತುರುವನೂರಿಗೆ ವಾಪಸ್ಸಾಗುತ್ತಾರೆ. ರಾತ್ರಿ ಹಿಂದಿರುಗಿದ ನಂತರ ತುರುವನೂರಿನಲ್ಲಿ ಆಂಜನೇಯ ದೇವಾಲಯಕ್ಕೆ ತೆರಳಿ ಪುನಃ ಊರಿನ ಗಲ್ಲಿ ಗಲ್ಲಿಗೂ ಮುಳ್ಳಿನ ಪಲ್ಲಕ್ಕಿಯಲ್ಲಿ ದಾಸಯ್ಯನನ್ನು ಹೊತ್ತು ಮೆರವಣಿಗೆ ನಡೆಸುತ್ತಾರೆ. ಈ ವೇಳೆಯಲ್ಲಿ ಹರಕೆ ಹೊತ್ತವರು ತಮ್ಮ ಮನೆ ಬಳಿಯಲ್ಲಿ ಬಂದಾಗ ಕಂಬಳಿ ಹಾಸಿ, ಬೆಲ್ಲ ಬಾಳೆಹಣ್ಣು ಇಡುತ್ತಾರೆ. ಪಲ್ಲಕ್ಕಿಯಲ್ಲಿನ ದಾಸಯ್ಯನನ್ನು ಅದರ ಸುತ್ತ ತಿರುಗಿ 'ಭೂತ ತೃಪ್ತಿಯಾಯಿತು' ಎಂದು ಹೇಳುವರು.. ಈ ರೀತಿಯಾಗಿ ಆಚರಣೆ ಸುಮಾರು ರಾತ್ರಿ ಒಂದು ಗಂಟೆಯವರೆಗೂ ನಡೆಯುತ್ತಿರುತ್ತದೆ.

ನಂತರದಲ್ಲಿ ಮುಳ್ಳಿನ ಪಲ್ಲಕ್ಕಿಯನ್ನು ತಂದು ದೇವಾಲಯದ ಮುಂಭಾಗದಲ್ಲಿನ ರಥವನ್ನು ಸ್ವಲ್ಪ ಮುಂದೆ ಎಳೆಯಲಾಗುತ್ತದೆ. ಪಲ್ಲಕ್ಕಿ ಉತ್ಸವ ಮುಗಿಯುವ ವೇಳೆಗೆ ರಥ ತಾನೇ ದೇವಾಲಯದ ಮುಂದೆ ಬಂದು ನಿಂತಿರುತ್ತದೆ. ಇದಾದ ಮಾರನೆ ದಿನ ಹೋಕಳಿ ಆಟ ಆಡುವ ಮೂಲಕ ದೇವರನ್ನು ಗುಡಿಯೊಳಗೆ ತುಂಬಿಕೊಳ್ಳಲಾಗುತ್ತದೆ.

ಮಾರಮ್ಮನ(ಮಾರಿಕಾಂಬೆ) ಜಾತ್ರೆ

ತುರುವನೂರು ಗ್ರಾಮದ ಮಧ್ಯದಲ್ಲಿ ಗ್ರಾಮದೇವತೆಯಾದ ಮಾರಿಕಾಂಬೆಯ ದೇವಾಲಯವಿದೆ. ಈ ಜಾತ್ರೆ ಐದು ವರ್ಷಕ್ಕೊಮ್ಮೆ ನಡೆಯುತ್ತದೆ. ಇದನ್ನು ಶೂನ್ಯ ಮಾಸದಲ್ಲಿ

ಮಂಗಳವಾರ ದಿವಸದಿಂದ ದೇವಿಜಾತ್ರೆಯ ಉತ್ಸವ ಪ್ರಾರಂಭವಾಗುತ್ತದೆ. ಜಾತ್ರೆಗೆ ತುರುವನೂರ ಸುತ್ತಮುತ್ತಲ ಗ್ರಾಮದವರು ಬರುತ್ತಾರೆ. ಉತ್ಸವದ ದಿನಗಳಲ್ಲಿ ಮಾರಮ್ಮನಿಗೆ ಒಂದು ಕೋಣ, ನೂರಾರು ಕುರಿಗಳನ್ನು ಬಲಿಕೊಡುವ ಪದ್ಧತಿ ಇದೆ. ಮಾನವ ಸಂಸ್ಕೃತಿಯ ಪ್ರಾಥಮಿಕ ಹಂತದಲ್ಲಿ ಜನಸಾಮಾನ್ಯರು ಊರನ್ನು ಕಬಳಿಸುವ ಸಾಂಕ್ರಾಮಿಕ ರೋಗಗಳು, ಕ್ಷಾಮ ಮುಂತಾದವುಗಳ ಭಯದಿಂದ ತತ್ತರಿಸಿದರು. ಈ ಘೋರ ಶಕ್ತಿಗೆ ತಲೆಬಾಗಿದರೆ, ಪೂಜೆ, ಬಲಿಗಳಿಂದ ಸಂತೃಪ್ತಿಗೊಳಿಸಿದರೆ ತಮ್ಮ ಬದುಕಿಗೆ ನೆಮ್ಮದಿ ಇದೆಯೆಂದು ತಿಳಿದರು. ತಮ್ಮ ಭಯ ಭಕ್ತಿಯ ಭಾವವನ್ನೇ ವ್ಯಕ್ತಪಡಿಸಲು ಆ ಶಕ್ತಿಗೆ ಉಗ್ರ ಸ್ವರೂಪ ಸೃಷ್ಟಿಸಿ ಅದಕ್ಕೊಂದು ಅದ್ಭುತ ಕತೆ ಕಟ್ಟಿ ಭಯ, ಭಕ್ತಿಯಿಂದ ತಲೆಬಾಗಿದರು. ಹೀಗೆ ಸಂಸ್ಕೃತಿಯ ಮೊದಲ ಹಂತದಲ್ಲಿ ಉಗ್ರ ಸ್ವರೂಪದ ದೇವತೆಗಳಲ್ಲಿ ಮಾರಮ್ಮ ಒಬ್ಬಳು ಎನ್ನುವಂತಹ ನಂಬಿಕೆ ಜನಪದರಲ್ಲಿದೆ.

ಮಾರಮ್ಮನ ರೌದ್ರರೂಪದ ಮೂರ್ತಿಗೆ ಅಲಂಕರಿಸಿ, ರಾತ್ರಿ ತಮಟೆ, ಹಲಗೆ, ಕೊಂಬು, ಕಹಳೆ ಇತ್ಯಾದಿ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಮಾರಮ್ಮನ ತೆಗೆದುಕೊಂಡು ಸ್ನಾನ ಮಾಡಿಸಿ ಅರಿಸಿನ ಕುಂಕುಮ ಹಚ್ಚಿ, ಸರ್ವವಿಧದ ಅಲಂಕಾರ ಮಾಡಿ ಹಣ್ಣು, ಕಾಯಿಗಳಿಂದ ಪೂಜೆ ಮಾಡುವರು. ಅನಂತರ ಮಡಿವಾಳರು ನಡೆ ಮುಡಿಯನ್ನು ಹಾಸುವರು. ಅದರ ಮೇಲೆ ಮಾರಮ್ಮನ ಮೆರವಣಿಗೆ ಮಾಡುತ್ತಾ ದೇವಸ್ಥಾನಕ್ಕೆ ಊರವರೆಲ್ಲ ಆರತಿ ತಂದು ಬೆಳಗುವರು. ಆರತಿ ಬೆಳಗಿದ ನಂತರ ಹರಕೆ ಹೊತ್ತವರು ಕುರಿಯನ್ನು ಬಲಿಕೊಡುವರು. ಅನಂತರ ಕೋಣವನ್ನು ಬಲಿಕೊಡುವರು. ಮಾರಮ್ಮನಿಗೆ ಬಲಿ ಕೊಡುವ ಕೋಣ ವಿಶಿಷ್ಟ ಲಕ್ಷಣವನ್ನು ಒಳಗೊಂಡಿರಬೇಕು. ಅದರ ಬೆನ್ನು ಮತ್ತು ಹಣೆಯ ಮೇಲೆ ಮಾತ್ರ ಸುಳಿ ಇರಬೇಕು. ನಾಲ್ಕು ಕಾಲುಗಳ ಮೇಲೆ ಬಿಳಿ ಕೂದಲು ಇರಬಾರದು. ಇಂತಹ ಕೋಣವನ್ನು ಹರಕೆ ಹೊತ್ತವರು ಬಲಿಯಾಗಿ ಇಟ್ಟಿರುತ್ತಾರೆ. ಜಾತ್ರೆ ಒಂದು ವಾರ ಇರುವಾಗಲೇ, ಕೋಣಕ್ಕೆ ಬೇವಿನ ಹಾರ ಹಾಕಿ ಮಾದಿಗ ಸಮುದಾಯದವರು ಕ್ರಮವಾಗಿ ಊರಿನ ಗೌಡರ ಮನೆಯಿಂದ ಹೊರಟು, ಊರ ಸುತ್ತ ಮೆರವಣಿಗೆ ಮಾಡುವರು. ಮನೆಯವರು ಕುಂಕುಮ, ಎಣ್ಣೆ ಹಾಕಿ, ಪೂಜೆ ಮಾಡಿ ಧವಸ ಧಾನ್ಯ ಕೊಡುವರು. ಹೀಗೆ ಸಿದ್ಧಮಾಡಿ ಮಂಗಳವಾರ ರಾತ್ರಿ ನಂತರ ಬುಧವಾರ ಬೆಳಗಿನ ಜಾವದಲ್ಲಿ ಮಾರಮ್ಮಗೆ ಬಲಿಕೊಡುವರು. ತಳವಾರ ದೇವಿಗೆ ಪೂಜೆ ಮಾಡಿ ಕೋಣಕ್ಕೆ ತೀರ್ಥ ಚಿಮುಕಿಸಿ ಒಂದೇ ಏಟಿಗೆ ತಲೆ ಕಡಿಯುವನು. ತಲೆಕೆಳಗೆ ಬಿದ್ದ ತಕ್ಷಣ ಅದರ ಬಲಗಾಲನ್ನು ಕತ್ತರಿಸಿ ಬಾಯಿಯೊಳಗೆ ಇರಿಸಿ, ಹೊಟ್ಟೆ ಸೀಳಿ ಕರುಳನ್ನು ತೆಗೆದು ಬತ್ತಿ ಮಾಡಿ ಅದರ ಹಣೆಯ ಮೇಲೆ ದೀಪ ಹೊತ್ತಿಸುವರು. ತಟ್ಟೆಯಲ್ಲಿ ಕೋಣನ ರಕ್ತ ಹಿಡಿದು ಬೂದಿಯನ್ನು ಕಲೆಸಿ ಊರ ಗುಡಿಯ ಸುತ್ತ ಚರಗ ಚೆಲ್ಲುವರು. ಕೋಣ ಬಲಿಕೊಡುವಾಗ ಬೇರೆ ಊರಿನವರು ಅಲ್ಲಿ ಸೇರುವುದಿಲ್ಲ. ಒಂದು ವೇಳೆ ಕೋಣನ ರಕ್ತವನ್ನು

ಬೇರೆ ಊರಿನವರು ಮುಟ್ಟಿದರೆ ಪುಣ್ಯವೆಲ್ಲ ಹೋಗುತ್ತದೆಂಬ ನಂಬಿಕೆಯಿದೆ. ಗುಡಿ ಮುಂದೆ ತಯಾರಿಸಿದ ಅನ್ನವನ್ನು ಆ ಕೋಣನ ಮಾಂಸವನ್ನು ಮಾದಿಗ ಸಮುದಾಯದವರು ತೆಗೆದುಕೊಂಡು ಹೋಗುವರು. ನಂತರ ಊರಿನ ಜನರೆಲ್ಲಾ ತಮ್ಮ ತಮ್ಮ ಮನೆಗಳಲ್ಲಿ ಹಬ್ಬದ ಅಡುಗೆ ಮಾಡಿ ಊಟ ಮಾಡುವರು. ನಂತರ ದೇವಿಯನ್ನು ಊರಿನ ಸುತ್ತಮುತ್ತ ಮೆರವಣಿಗೆ ಮಾಡಿ ಆಕೆಗೆ ಮತ್ತೊಮ್ಮೆ ಬಾವಿ ಅಥವಾ ಹಳ್ಳ-ಕೊಳ್ಳ, ಕೆರೆಗಳಿಂದ ನೀರನ್ನು ತಂದು ಪೂಜೆ ಮಾಡಿ ದೇವಾಲಯದ ಒಳಗೆ ಬಿಡುವರು. ಇಲ್ಲಿಗೆ ಜಾತ್ರೆ ಮುಕ್ತಾಯವಾಗುತ್ತದೆ. ಹೀಗೆ ನಡೆಯುವ ಜಾತ್ರೆಯಿಂದ ಮಾರಮ್ಮಳಿಗೆ ತೃಪ್ತಿಯಾಗಿ ಬೇಡಿದ ವರವನ್ನು ಗ್ರಾಮಕ್ಕೆ ತಂದುಕೊಡುವವಳೆಂದು ಜನರ ನಂಬಿಕೆಗೆ ಅದೇ ದಿನ ಜನರು ತಾವು ಹರಕೆ ಮಾಡಿಕೊಂಡ ಕುರಿ, ಮೇಕೆಗಳ ಬಲಿ ನೀಡಿ ದೇವಿಯನ್ನು ಸಂತೃಪ್ತಿಗೊಳಿಸುವರು.

ಕಲ್ಲೇಶ್ವರ ರಥೋತ್ಸವ

ಗ್ರಾಮದಲ್ಲಿ ಬಳ್ಳಾರಿಯಿಂದ ವಲಸೆ ಬಂದ ಸಮುದಾಯದವರು ಆಚರಿಸುವ ವಿಶೇಷ ಉತ್ಸವವಾಗಿದೆ. ಇದನ್ನು ಹಂಪೆ ಹುಣ್ಣಿಮೆ ಚಿತ್ತ ನಕ್ಷತ್ರ ವೇಳೆಯಲ್ಲಿ ಆಚರಿಸಲಾಗುವುದು. ಇದು ಮೂರು ದಿನಗಳ ಕಾಲ ಗಿರಿಯಪ್ಪ ಮನೆತದ ಮುಖಂಡತ್ವದಲ್ಲಿ ಜರುಗುತ್ತದೆ. ಮೊದಲ ದಿನ ಊರು ಆಚೆಗಿನ ಬಾವಿ ಬಳಿ ದೇವರಮೂರ್ತಿ ಸಮೇತ ಗಂಗೆ ಪೂಜೆ ಅಲ್ಲಿಂದ ಬಂದ ನಂತರ ದೇವರ ಅಲಂಕಾರ, ಅದೇ ವೇಳೆ ಹೊಸ ಮಡಿಕೆಯಲ್ಲಿ ಬಲಿ ಅನ್ನ ತಯಾರಿಸಿ ಅದನ್ನು ತೇರಿನ ಬಳಿ ಕೊಂಡೊಯ್ಯುವರು. ನಂತರ ಮೂರ್ತಿಯನ್ನು ರಥದಲ್ಲಿ ಕೂರಿಸಿ, ಹೂವಿನ ಹಾರದ ಹಾರಜು ಕ್ರಿಯೆ ಆರಂಭ, ನಕ್ಷತ್ರ ಕಾಲಾವಧಿಯಲ್ಲಿ ಉತ್ಸವಕ್ಕೆ ಚಾಲನೆ. ಈ ವೇಳೆ ನಂದಿಕುಣಿತ, ಕೋಲಾಟ, ಡೊಳ್ಳು ಬಾರಿಸುವುದು ನಡೆಯುತ್ತದೆ. ನಂತರದಲ್ಲಿ ಮಾರನೆ ದಿನ ಆಂಜನೇಯ ಕಲ್ಲೇಶ್ವರನ ಮೂರ್ತಿಗಳನ್ನು ಒಂದು ಸ್ಥಳದಲ್ಲಿ ಕೂರಿಸಿ ಪಾನಕ ಹಂಚುವುದು, ಓಕಳಿ ಆಡುವುದು, ಕೊನೆಯ ದಿನದಂದು ಪುನಃ ಗಂಗೆ ಪೂಜೆ ಮಾಡಿಕೊಂಡು ಬಂದು, ಆಲಯದೊಳಗೆ ದೇವರನ್ನು ಪ್ರತಿಷ್ಠಾಪಿಸುವ ಮೂಲಕ ಉತ್ಸವವನ್ನು ಅಂತ್ಯಗೊಳಿಸುವುದು.

ಜಾತ್ರೆಗಳ ಸಾಂಸ್ಕೃತಿಕ ನೋಟ

ಈ ಗ್ರಾಮದ ಯಾವುದೇ ಜಾತ್ರೆ ನಡೆಯಲಿ, ಆಯಾ ದೇವಾಲಯದ ಸುತ್ತಮುತ್ತಲಿನ ಹಳ್ಳಿಯ ಮುಖಂಡರು, ಪೂಜಾರಿಗಳು, ಜಾತ್ರೆ ಸಮಿತಿಯವರ ಪಾತ್ರ ಮುಖ್ಯವಾಗಿರುತ್ತದೆ. ನಿರ್ದಿಷ್ಟ ಸಮಯದಲ್ಲಿ ಜಾತ್ರೆ ಜರುಗುವಂತೆ ಎಲ್ಲಾ ಹಂತದ ವ್ಯವಸ್ಥೆ ನೋಡಿಕೊಳ್ಳುತ್ತಾರೆ. ಕರ ಪತ್ರ ಪ್ರಕಟಿಸಿ ಪ್ರಚಾರ ಮಾಡುವುದು ಚಂದಾ ಹಣದೊಂದಿಗೆ ಧವಸ ಧಾನ್ಯಗಳನ್ನು ಸಂಗ್ರಹಿಸುವುದು ದೇವಾಲಯಕ್ಕೆ ಸುಣ್ಣ ಬಣ್ಣ ಬಳಿದು ತಳಿರು ತೋರಣ ಕಟ್ಟುತ್ತಾರೆ. ದ್ವಾರಗಳು, ವಿದ್ಯುತ್ ದೀಪಾಲಂಕಾರ, ಧ್ವನಿವರ್ಧಕಗಳು ಅಳವಡಿಸಿ ಜಾತ್ರೆ ನಡೆಸುತ್ತಾರೆ. ಈ

ಪ್ರದೇಶದ ಜಾತ್ರೆಗಳು ಜರುಗುವಾಗ ಈ ಕೆಳಕಂಡ ಪ್ರಮುಖ ಪದ್ಧತಿಗಳು ಸಾಮಾನ್ಯ ಸ್ವರೂಪ ಪಡೆದುಕೊಳ್ಳುತ್ತವೆ.

೧. ಜಾತ್ರೆ ಜರುಗುವ ಸಮಯ

ಜಾತ್ರೆ ನಡೆಯುವ ಕಾಲ ಮತ್ತು ಸ್ಥಳ ಹೆಚ್ಚು ಪ್ರಶಸ್ತವಾಗಿರಬೇಕು. ಸಂಕ್ರಾಂತಿ ಹಬ್ಬದ ವೇಳೆಗೆ ಕೂಯಿಲು ಕಾಲ ಮುಗಿದಿರುವುದು. ಆ ವೇಳೆಗೆ ಧಾನ್ಯ ಸಂಗ್ರಹಣೆಯ ಕೆಲಸವು ಬಹುಮಟ್ಟಿಗೆ ಮುಗಿದಿರುತ್ತದೆ. ಅಲ್ಲಿಂದ ಮಳೆ ಆರಂಭವಾಗುವವರೆಗೆ ಜನ ಪೂರ್ಣ ವಿರಾಮದಿಂದ ಕೂಡಿದ್ದು, ರಾಸುಗಳು ವಿಶ್ರಮಿಸುತ್ತಿರುತ್ತವೆ. ಚಳಿಗಾಲ ಮುಕ್ತಾಯ ಹಂತದಲ್ಲಿರುವಾಗ ವಾತಾವರಣ ಹಿತಕರವಾಗಿರುವುದು. ಹಾಗಾಗಿ ಪೂರ್ವಿಕರು ಬೇಸಿಗೆ ಕಾಲದಲ್ಲಿ ಹೆಚ್ಚಾಗಿ ಜಾತ್ರೆಯನ್ನು ಆರಂಭಿಸಿದ್ದು, ಅದು ಹಾಗೆಯೇ ಮುಂದುವರೆದುಕೊಂಡು ಬಂದಿದೆ.

೨. ಉಪವಾಸ

ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ದೇವರ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯೋಗಿಸುವ ಒಂದು ಮಾರ್ಗವೇ ಉಪವಾಸ. ಮನಸ್ಸಿನ ನೈರ್ಮಲ್ಯ, ಧಾರ್ಮಿಕ ಸತ್ವ, ನೈತಿಕ ಬಲ, ಶಿಸ್ತು ನಮ್ರತೆ ಹೆಚ್ಚಿಸಿಕೊಳ್ಳಲು ಈ ಮಾರ್ಗ ಉಪಯುಕ್ತ. ಆದರೆ ಇಂದು ಇದರ ಮಹತ್ವ ಕಡಿಮೆ ಆಗುತ್ತಲಿದ್ದು, ಹಣ್ಣು ಹಂಪಲು ಹೊಟ್ಟೆ ತುಂಬಾ ತಿಂದು ಉಪವಾಸ ಮಾಡುವವರ ಸಂಖ್ಯೆಯೇ ಅಧಿಕವಾಗುತ್ತದೆ.

೩. ಎಡೆಯೊಪ್ಪಿಸುವುದು

ದೇವರುಗಳಲ್ಲಿ ಸಾತ್ವಿಕ ಮತ್ತು ಉಗ್ರದೇವತೆಗಳೆಂಬ ಎರಡು ಪ್ರಕಾರಗಳುಂಟು. ಈ ಗ್ರಾಮದಲ್ಲಿನ ದೇವರುಗಳಲ್ಲಿ ಗ್ರಾಮದೇವತೆ ಮಾರಿಕಾಂಬೆಯನ್ನು ಹೊರತುಪಡಿಸಿ, ಉಳಿದೆಲ್ಲ ದೇವರಿಗೆ ಸಸ್ಯಹಾರ ಉಪಹಾರವನ್ನು ನೈವೇದ್ಯ ಮಾಡಿದರೆ, ಉಳಿದಂತೆ ಮಾರಮ್ಮಗೆ ಮಾಂಸಹಾರವನ್ನು ನೈವೇದ್ಯ ಮಾಡಿಡುವುದು ರೂಢಿಯಲ್ಲಿದೆ. ಆದರೆ ಈ ಪದ್ಧತಿ ಭಕ್ತರ ನಾಲಿಗೆ ರುಚಿಗೋಸ್ಕರವೇ ಹೊರತು ಬೇರೆಯಲ್ಲ ಎನಿಸುತ್ತದೆ.

೪. ನಂದಿ ಕೋಲು ಕುಣಿತ

ವಿಜಯಘೋಷದ ಶಿವಭಕ್ತರ ಧರ್ಮದ ಪ್ರತೀಕವೇ ನಂದಿಕೋಲು ಕುಣಿತ. ಸುಮಾರು ಇಪ್ಪತ್ತೈದರಿಂದ ಮೂವತ್ತು ಅಡಿ ಎತ್ತರದ ಬಿದಿರ ಕೋಲಿಗೆ ತಾಮ್ರದ ತಗಡಿನ ರಚನೆ, ಕೆಂಪು ವಸ್ತ್ರವನ್ನು ಸುತ್ತಿರುತ್ತಾರೆ. ಅದರ ತುದಿಗೆ ಹಿತ್ತಾಳೆಯಿಂದ ಗೋಪುರ ಮಾದರಿ ರಚಿಸಿ ಅದಕ್ಕೆ ಸಿಂಗಾರ ಮಾಡಿರುತ್ತಾರೆ. ಗಂಡಸರು ಅದನ್ನು ಹಿಡಿದು ಹೆಜ್ಜೆ ಹಾಕುವುದು ಜಾತ್ರೆಯ ವಿಶೇಷತೆ ಆಗಿರುತ್ತದೆ.

೫. ಗಾವು

ಗ್ರಾಮದ ಮಾರಮ್ಮ ದೇವಿ ಜಾತ್ರೆಯ ಉತ್ಸವದಲ್ಲಿ ಗಾವು ಜಿಗಿಯುವ ಪದ್ಧತಿ ರೂಢಿಯಲ್ಲಿದೆ. ಇಲ್ಲಿ ಕಪ್ಪನೆಯ ಎಳೆಯದಾದ ಮೇಕೆ ಮರಿಯನ್ನು ಬಚ್ಚಿಟ್ಟು ನಂತರ ಅದನ್ನು ಪೋತರಾಜರು ಹುಡುಕಿ ತಂದು ಹಲ್ಲಿನಿಂದ ಕಡಿದು ಅದರ ರಕ್ತ ಚೆಲ್ಲದಂತೆ ಹೀರುತ್ತಾನೆ. ದೇವತೆಯು ಮೈ ತುಂಬಿದಾಗ ಗಾವು ಜಗಿಯುತ್ತಾರೆ. ಗಾವು ಜಗಿಯುವಾತ ಮೂರು ದಿನಗಳ ಹಿಂದಿನಿಂದ ಉಪವಾಸ ಇರಬೇಕು. ಮಡಿಯಿಂದ ಶುಚಿತ್ವನಾಗಿರಬೇಕು. ಗಾವು ಸಿಗಿತ ನಂತರ ಮರಿಯನ್ನು ಹೂಳುವ ಪದ್ಧತಿ ರೂಢಿಯಲ್ಲಿದೆ.

೭. ಕೋಲಾಟ

ಕೋಲುಗಳನ್ನು ಹೊಡೆಯುತ್ತಾ ಸೇರಿ ಆಡುವ ಆಟವೇ ಕೋಲಾಟ. ಇದು ದೇವಿ ಆರಾಧನೆಯ ಜನಪದ ಕಲೆ. ಹಾಡನ್ನು ಒಳಗೊಂಡ ಒಂದು ಆಕರ್ಷಕ ನೃತ್ಯ. ಜಾತ್ರೆಯ ಮೆರವಣಿಗೆಯಲ್ಲಿ ಇಂತಹ ಕೋಲಾಟದ ಪರಿಪಾಠವಿದ್ದು, ಭಕ್ತಾದಿಗಳಿಗೆ ಮನೋರಂಜನೆ ನೀಡುವುದಾಗಿದೆ. ಕೋಲಿಗೆ ತಕ್ಕ ಹೆಜ್ಜೆ, ಹೆಜ್ಜೆಗೆ ತಕ್ಕ ಗೆಜ್ಜೆಯಂತೆ ೮ ರಿಂದ ೨೪ ಜನ ಸೇರಿ ಕೋಲಾಟ ಆಡುತ್ತಾರೆ. ಗಂಡಸರಾದವರು ಹೆಣ್ಣಿನ ವೇಷಧರಿಸಿ, ಮುಖಕ್ಕೆ ಬಣ್ಣ ಬಳಿದು, ತಲೆಗೆ ಪೇಟ ಸುತ್ತಿ ಕೋಲಾಟ ಪ್ರಾರಂಭಿಸುತ್ತಾರೆ.

ಅಡಿಟಿಪ್ಪಣಿಗಳು

೧. ವಸು ಎಂ.ವಿ., **ಮೌಖಿಕ ಇತಿಹಾಸ,** ಪು.೯

೨. ಅದೇ

೩. ವಿರೂಪಾಕ್ಷಿ ಪೂಜಾರಹಳ್ಳಿ, **ಸ್ಥಳೀಯ ಚರಿತ್ರೆ: ಆಕರಗಳ ಸ್ವರೂಪ ಮತ್ತು ಅಧ್ಯಯನ ವಿಧಾನ, ಸ್ಥಳೀಯ ಚರಿತ್ರೆ, ಅಧ್ಯಯನದ ತಾತ್ವೀಕತೆ ಮತ್ತು ಸ್ವರೂಪ,** ಲಕ್ಷಣ್ ತೆಲಗಾವಿ(ಸಂ), ಪು.೨೫–೨೬

೪. ಕರಿಬಸಪ್ಪ ಎ., **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು,** ಪು.೭

೫. ಅದೇ, ಪು.೮

೭. ಮಂಜುನಾಥ ಬೇವಿನಕಟ್ಟಿ, **ಕನ್ನಡ ಜನಪದ ನಂಬಿಕೆಗಳು,** ಪು.೩೧

೮. ಅದೇ

೯. ರಮೇಶ್ ಬಿ.ಜಿ., **ನಮ್ಮ ಹಬ್ಬಗಳು,** ಪು.೨

೧೦. ಜಗನ್ನಾಥ ಹೆಬ್ಬಾಳೆ, ಹೈದರಾಬಾದ್ ಕರ್ನಾಟಕದ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪು.೧

೧೧. ಚಂದ್ರಶೇಖರ ದಾಮ್ಲೆ, ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು, ಪು.೬೬

೧೨. ಅದೇ, ಪು.೫೮-೫೯

೧೩. ಅದೇ

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ ಅಪಾರವಾದುದು. ಇಲ್ಲಿನ ಪ್ರತಿಯೊಂದು ಹಳ್ಳಿಯು ಭಾರತೀಯ ಸಂಸ್ಕೃತಿಗೆ ತನ್ನದೆಯಾದ ಕೊಡುಗೆಗಳನ್ನು ನೀಡಿದೆ ಎಂಬ ಮಾತು ಒಪ್ಪುವಂತಹದ್ದು. ಇಂದು ಮರೆಯಾಗಿರುವ ಸಾಂಸ್ಕೃತಿಕ ಚಟುವಟಿಕೆಯನ್ನು ಮರುಜೋಡಣೆ ಮಾಡುವ ಕಾರ್ಯ ಸ್ಥಳೀಯ ಇತಿಹಾಸದಿಂದಾಗಬೇಕಾದುದು ಅನಿವಾರ್ಯವಾಗಿದೆ. ಇತಿಹಾಸವು ಪ್ರದೇಶ, ಪ್ರಾಂತ್ಯ, ರಾಜ್ಯ, ಸಂಸ್ಥೆ ಹಾಗೂ ಜನಾಂಗಗಳ ಕತೆಯೆನ್ನುವುದನ್ನು ಮತ್ತೊಮ್ಮೆ ಪರಿಶೀಲಿಸುವುದು ಅಗತ್ಯ. ವಿವಿಧ ಪ್ರದೇಶಗಳಲ್ಲಿರುವ ಜನರ ಜೀವನ ವಿಧಾನ, ಧರ್ಮ, ಸಂಸ್ಕೃತಿ, ಆಚರಣೆಗಳಲ್ಲಿ ಭಿನ್ನತೆಗಳಿವೆ. ಇವುಗಳನ್ನು ಒಟ್ಟುಗೂಡಿಸಿ ನಾಡಿನ ಇತಿಹಾಸ ನಿರ್ಮಿಸಬೇಕಾಗಿದೆ. ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆ ತನ್ನ ವ್ಯಾಪ್ತಿಯಲ್ಲಿ ಆರು ತಾಲೂಕುಗಳನ್ನು ಒಳಗೊಂಡಿದೆ. ಪ್ರಸ್ತುತ ಶೀರ್ಷಿಕೆಯ ಪ್ರದೇಶವಾದ ತುರುವನೂರು ಚಿತ್ರದುರ್ಗ ತಾಲೂಕಿನ ಒಂದು ಹೋಬಳಿ ಕೇಂದ್ರ ಹಾಗೂ ಗ್ರಾಮ. ಭೌಗೋಳಿಕವಾಗಿ ದಟ್ಟ ಅರಣ್ಯದಿಂದ ಕೂಡಿದ್ದ ತುರುವನೂರು ತುರುಬಯಲು ಎಂದು ಕರೆಯಲ್ಪಡುತ್ತಿತ್ತು. ಅಲ್ಲದೆ ಕಡಬನಕಟ್ಟೆ, ದೊಡ್ಡಗಟ್ಟದಂತಹ ಪ್ರದೇಶಗಳ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮಲೆನಾಡಿನ ಕೊನೆಯ ಘಟ್ಟಪ್ರದೇಶ, ವಿಫುಲವಾದ ಪ್ರಾಣಿ ಸಂಪತ್ತು, ನೀರಿನಾಸರೆ, ಕಪ್ಪು-ಕೆಂಪು ಭೂಭಾಗವನ್ನು ಒಳಗೊಂಡು ಕೃಷಿ ಚಟುವಟಿಕೆಗೆ ಉತ್ತಮ ಪ್ರದೇಶವಾಗಿದೆ.

ತುರುವನೂರು ಸಾಂಸ್ಕೃತಿಕ ಅಧ್ಯಯನದಿಂದ ಅನೇಕ ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಚಿತ್ರದುರ್ಗ ಜಿಲ್ಲೆಯ ಬೌಗೋಳಿಕ ಪರಿಸರದಲ್ಲಿ ಶಿಲಾಯುಗ ಕಾಲದಿಂದ ಪ್ರಸ್ತುತದವರೆಗೆ ಮಾನವ ಚಟುವಟಿಕೆಯ ಕುರುಹುಗಳು, ಆಳ್ವಿಕೆ ನಡೆಸಿದಂತಹ ವಿವಿಧ ಕಾಲಘಟ್ಟದ ರಾಜಮನೆತನಗಳು ಕಂಡುಬಂದಿವೆ. ತುರುವನೂರು ಇದರಿಂದ ಹೊರತಾಗಿಲ್ಲ. ಅದು ಪ್ರಾಗಿತಿಹಾಸ, ಇತಿಹಾಸ, ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಮಹತ್ವದ್ದು ಎನ್ನುವುದಕ್ಕೆ ಇಲ್ಲಿ ದೊರೆಯುವ

ಅವಶೇಷಗಳಾದ ದೇವಾಲಯಗಳು, ಶಿಲ್ಪಗಳು, ಸ್ಮಾರಕ ಶಿಲ್ಪಗಳು, ಮೌಖಿಕ ಆಕರಗಳು ಮುಂತಾದವುಗಳು ನಮಗೆ ಮಾಹಿತಿ ಒದಗಿಸುತ್ತವೆ.

ತುರುವನೂರು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಯ ಪ್ರಮುಖ ನೆಲೆ. ಇದಕ್ಕೆ ನಿದರ್ಶನವಾಗಿ ಸ್ಥಳೀಯವಾಗಿ ಬರುವಂತ ಮೋರಿಯರ ಕಲ್ಲು, ಮೋರಿಯರ ಮಟ್ಟಿ ಎಂಬ ಬೃಹತ್ ಶಿಲಾನೆಲೆಗಳು. ಅಲ್ಲದೆ ತುರುವನೂರು ಪರಿಸರದಲ್ಲಿನ ಕೂನಬೇವು, ದೊಡ್ಡಘಟ್ಟ, ಸಂಗೇನಹಳ್ಳಿಗಳಲ್ಲಿ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಬೃಹತ್‌ಶಿಲಾಯುಗ, ಮಾನವರ ಕುರುಹುಗಳು ಪತ್ತೆಯಾಗಿದ್ದು ತುರುವನೂರಿನ ಚರಿತ್ರೆ ಪ್ರಾಗಿತಿಹಾಸ ಕಾಲಘಟ್ಟಕ್ಕೆ ಒಳಪಟ್ಟಿದೆ. ತುರುವನೂರಿನ ರಾಜಕೀಯ ಇತಿಹಾಸ ಮೌರ್ಯರ ಕಾಲದಿಂದ ಆರಂಭಗೊಂಡು ಕ್ರಮೇಣವಾಗಿ ಅರಣ್ಯ ಸತ್ಯಾಗ್ರಹದವರೆಗೂ ವಿಸ್ತಾರಗೊಂಡಿದೆ. ಮೌರ್ಯರ ಕಾಲದ ಕುರುಹುಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಜಟಿಂಗರಾಮೇಶ್ವರ, ಸಿದ್ಧಾಪುರದಲ್ಲಿ ಸಿಕ್ಕಿದ್ದು ತುರುವನೂರು ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದು ದೃಢವಾಗಿದೆ. ಮೌರ್ಯರ ನಂತರ ಬಂದಂತಹ ಶಾತವಾಹನರು ಕ್ರಿ.ಪೂ.೨೩೫ರಿಂದ ಕ್ರಿ.ಶ.೨೭೫ರಲ್ಲಿ ಆಳ್ವಿಕೆ ಒಳಪಟ್ಟಿತ್ತು. ಚಂದ್ರವಳ್ಳಿ ಯಲ್ಲಿ ಅವರ ಕಾಲದ ಹಾಗೂ ಸಾಮಂತರಾದ ಚುಟು, ಮಹಾರಥಿಗಳು ರೋಮನ್ನರ ನಾಣ್ಯಗಳು, ಮಡಕೆ ಚೂರುಗಳು ದೊರಕಿವೆ. ಇದೇ ಮಾದರಿಯ ಸೀಸದ ನಾಣ್ಯ ತುರುವನೂರು, ಚಿಪ್ಪಿನಕರೆಯಲ್ಲೂ ನಾಣ್ಯ ಹಾಗೂ ಮಡಕೆ ಚೂರುಗಳು ಲಭ್ಯವಾಗಿದ್ದು, ತುರುವನೂರು ಶಾತವಾಹನರು ಹಾಗೂ ಮಾಂಡಲೀಕರ ಆಳ್ವಿಕೆಗೆ ಒಳಪಟ್ಟಿತ್ತು. ಚಿತ್ರದುರ್ಗದ ಚಂದ್ರವಳ್ಳಿ ಮಯೂರವರ್ಮನ ಶಾಸನವು ಕದಂಬರ ಆಳ್ವಿಕೆಗೆ ಒಳಪಟ್ಟಿರುವುದನ್ನು, ಚಿತ್ರದುರ್ಗದ ಗಂಜಿ ಗಟ್ಟೆಯ ಶಾಸನದಲ್ಲಿ ಶ್ರೀಬಿಜಾಜೆ ಎಂಬ ಲಿಪಿ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ತುರುವನೂರು ಒಳಪಟ್ಟಿರುವುದನ್ನು ತಿಳಿಸುತ್ತದೆ. ನೊಳಂಬರ ಆಳ್ವಿಕೆಯ ಕುರುಹುಗಳಾಗಿ ತುರುವನೂರಿನ ರಾಮಲಿಂಗೇಶ್ವರ ದೇವಾಲಯ ಲಿಂಗ, ನಂದಿಶಿಲ್ಪ ಬಾಗೇನಾಳು ಮುಷ್ಟೂರಿನ ಶಾಸನಗಳು, ದೇವಾಲಯಗಳು ಕಂಡುಬಂದಿದ್ದು, ತುರುವನೂರು ನೊಳಂಬರ ಆಳ್ವಿಕೆಗೆ ಒಳಪಟ್ಟ ಗ್ರಾಮವಾಗಿ ತ್ತೆಂದು ದೃಢಪಟ್ಟಿದೆ. ಕಲಚೂರಿನ ಸೋಮದೇವನ ಕಾಲದ ಯಳಗೋಡು ಶಾಸನ ಕಲ್ಲದೇವರಪುರದ ಹೊಯ್ಸಳರ ಕಾಲದ ಶಾಸನಗಳಲ್ಲಿ ಗಂಗವಾಡಿ–೯೬೦೦೦ ಶಾಸನ ನೊಳಂಬವಾಡಿ–೩೨೦೦೦ ನಾಡನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ. ಇದು ತುರುವನೂರಿನ ಮೇಲೆ ಹೊಯ್ಸಳರ ಆಡಳಿತದ ಪ್ರಭಾವ ಇರುವುದನ್ನು ತಿಳಿಸುತ್ತದೆ. ವಿಜಯನಗರದ ಅರಸರು ಪಾಳೆಯಗಾರರ ಮೂಲಕ ಪರೋಕ್ಷವಾಗಿ ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿರುತ್ತಾರೆ. ಚಿತ್ರದುರ್ಗದಲ್ಲಿ ಪಾಳೆಗಾರರು ಕ್ರಿ.ಶ.೧೫೫೮ರಿಂದ ೧೭೭೯ರವರೆಗೆ ಆಳ್ವಿಕೆ ನಡೆಸಿದ್ದರು. ಇವರ ಕಾಲದಲ್ಲಿ ರಚನೆಯಾದಂತಹ ದೇವಾಲಯಗಳು, ಕೋಟೆ, ವೀರಗಲ್ಲುಗಳು, ಕಾವಲು ಗೋಪುರಗಳು ಸ್ಮಾರಕ ಅವಶೇಷಗಳಾಗಿ ಉಳಿದುಕೊಂಡಿದೆ. ತುರುವನೂರು ಪಾಳೆಯಗಾರರ

ಆಳ್ವಿಕೆಗೆ ಒಳಪಟ್ಟಿರುವುದು ತಿಳಿಯುತ್ತದೆ. ತುರುವನೂರು ಕೇವಲ ರಾಜ ಮಹಾರಾಜ, ಸಾಮಂತರ ಆಳ್ವಿಕೆಗಷ್ಟೇ ಸಿಮೀತವಾಗಿರದೇ ದೇಶದ ಸ್ವಾತಂತ್ರ್ಯ ಹೋರಾಟದಲ್ಲೂ ಪ್ರಮುಖ ಪಾತ್ರವಹಿಸಿತ್ತು. ನೂರಾರು ಈಚಲು ಮರಗಳನ್ನು ಕಡಿಯುವ ಮೂಲಕ ಅರಣ್ಯ ಸತ್ಯಾಗ್ರಹ ಚಳವಳಿಗೆ ಚಾಲನೆ ನೀಡಿತು. ಈ ಮೂಲಕ ತುರುವನೂರು ೧೯೩೯ ಸೆಪ್ಟೆಂಬರ್ ೧೮ರಲ್ಲಿ ನಡೆಸಿದ ಈಚಲು ಮರದ ಚಳವಳಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಚಳವಳಿ ಆರಂಭಿಸಿದ ಮೊದಲ ಗ್ರಾಮ. ಇದರ ಕುರುಹಾಗಿ ಗ್ರಾಮದ ಕೋಟೆ ಬುರುಜಿನ ಮೇಲೆ ಗಾಂಧೀಜಿಯ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಿರುವುದು ಗಮನಾರ್ಹ.

ತುರುವನೂರಿನ ಸ್ಥಳನಾಮ, ಐತಿಹ್ಯಗಳು ಮಹತ್ವವನ್ನು ಪಡೆದಿದ್ದು, ಇತಿಹಾಸದ ರಚನೆಗೆ ಸಹಾಯಕವಾಗಿವೆ. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಕರ್ನಾಟಕದ ವೈಶಿಷ್ಟ್ಯ ಗಳನ್ನು ಚಿತ್ರದುರ್ಗ ಜಿಲ್ಲೆಯು ಮೈಗೂಡಿಸಿಕೊಂಡಿದೆ. ಕರ್ನಾಟಕದ ಕಲೆಗೆ ತನ್ನದೆಯಾದ ಅಪೂರ್ವ ಕಾಣಿಕೆಯನ್ನು ಅರ್ಪಿಸಿ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕವಾಗಿ ಪ್ರಸಿದ್ಧಿ ಪಡೆದ ತುರುವನೂರು ಅನೇಕ ದೇವಾಲಯಗಳು, ಮೂರ್ತಿಶಿಲ್ಪಗಳನ್ನು ಒಳಗೊಂಡಿದೆ. ಈ ಅಂಶವನ್ನು ಪರೀಕ್ಷಿಸಿದಾಗ ನೊಳಂಬಪಲ್ಲವ, ಪಾಳೆಯಗಾರರ ಕಾಲದಲ್ಲಿ ದೇವಾಲಯಗಳಾಗಿದ್ದು, ಮೂಲ ಸ್ವರೂಪವನ್ನು ಕಳೆದುಕೊಂಡು ಜೀರ್ಣೋದ್ಧಾರಕ್ಕೆ ಒಳಪಟ್ಟಿವೆ. ತುರುವನೂರು ಪಾಳೆಯಗಾರರ ಕಾಲದಲ್ಲಿ ನೇರ ಆಳ್ವಿಕೆಗೆ ಒಳಪಟ್ಟಿತ್ತೆಂಬುದಕ್ಕೆ ಇಲ್ಲಿನ ಕೋಟೆ–ಕೊತ್ತಲಗಳು, ದೇವಾಲಯಗಳೇ ಸಾಕ್ಷಿ. ಇವುಗಳ ಅಧ್ಯಯನದಿಂದ ಸಾಮಾಜಿಕ ಜೀವನದ ರಕ್ಷಣೆ ಯಾವ ರೀತಿಯಾಗಿತ್ತು ಎಂಬುದು ತಿಳಿದುಬರುತ್ತದೆ.

ಈ ಪರಿಸರದ ಇತಿಹಾಸ ರಚನೆಗೆ ಮೂರ್ತಿಶಿಲ್ಪಗಳು ಕೂಡ ಸಹಾಯಕ. ಶೈವ, ವೈಷ್ಣವ, ಶಾಕ್ತಪಂಥಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ. ಶೈವ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಸೋಮಸೂತ್ರಗಳನ್ನೊಳಗೊಂಡ ವಿವಿಧ ಬಗೆಯ ಶಿವಲಿಂಗಗಳು ನಂದಿ, ಗಣೇಶನ ಶಿಲ್ಪಗಳು ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಹನುಮಂತ ಗರುಡ ಶಿಲ್ಪಗಳು, ಶಾಕ್ತಪಂಥಕ್ಕೆ ಸಂಬಂಧಿಸಿದ ಸರಸ್ವತಿ, ಮಹಿಷಮರ್ದಿನಿ, ಮಾರಮ್ಮ ಶಿಲ್ಪಗಳು ಉಳಿದಂತೆ ಮಹಿಷಾಸುರ, ನಾಗಬಂಧ ಉಬ್ಬುಶಿಲ್ಪಗಳು ಕಂಡುಬಂದಿವೆ. ಇವುಗಳಿಂದ ಈ ಪ್ರದೇಶದ ಜನರು ತಮ್ಮದೆಯಾದ ದೈವತ್ವವನ್ನು ಸ್ವೀಕರಿಸಿ ಪೂಜಿಸುತ್ತಿದ್ದಾರೆಂಬುದು ಸತ್ಯ. ಸ್ಮಾರಕ ಶಿಲ್ಪಗಳಾದ ವೀರಮಾಸ್ತಿ ಮಹಾಸತಿಕಲ್ಲುಗಳು ಕಂಡುಬಂದಿದ್ದು, ಈ ಪ್ರದೇಶದ ಸಾಮಾಜಿಕ ಸ್ಥಿತಿಗತಿ, ತ್ಯಾಗ ಬಲಿದಾನ, ವೀರರ ಶೌರ್ಯವನ್ನು ನಿರ್ಧರಿಸುವಲ್ಲಿ ನೆರವಾಗಿವೆ.

ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ನಂಬಿಕೆ ಆಚರಣೆಯು ತಲೆಮಾರುಗಳಿಂದ ನಡೆದುಕೊಂಡು ಬಂದ ಆಚಾರಯುಕ್ತವಾದ ಸಂಪ್ರದಾಯವಾಗಿದೆ. ತುರುವನೂರು ಅನೇಕ ಆಚರಣೆಗಳು ಒಳಗೊಂಡು ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ರೂಢಿಸಿಕೊಂಡು ಬಂದಿದೆ.

ಮೂಲತಃ ಶೈವ, ವೈಷ್ಣವ ಶಾಕ್ತಪಂಥದ ಆಚರಣೆಗಳು ರೂಢಿಯಲ್ಲಿವೆ. ಈ ಪ್ರದೇಶದ ಕಳ್ಳದೇವರು ಎಂಬ ಆಚರಣೆಯು ಶೈವ, ವೈಷ್ಣವ ಸಮಾಗಮದ ಸಂಕೇತವಾಗಿ ಇಲ್ಲಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಾ ಬಂದಿದೆ. ಗ್ರಾಮೀಣ ಜನರು ತಮ್ಮ ಸುಖಸಂತೋಷಕ್ಕಾಗಿ ಅನೇಕ ಆಚರಣೆಗಳನ್ನು ಅಂದರೆ ದೇವರ ಹರಕೆ ಮಾಡಿಕೊಳ್ಳುವುದರಿಂದ ರೋಗರುಜಿನಗಳು ವಾಸಿಯಾಗುತ್ತವೆ. ಇಷ್ಟಾರ್ಥಗಳು ಈಡೇರುತ್ತವೆ ಎಂಬ ಬಲವಾದ ನಂಬಿಕೆ ಉಳಿದುಕೊಂಡಿದೆ. ಇಲ್ಲಿನ ಜಾತ್ರೆಗಳು ಉಳಿದ ಪ್ರದೇಶಗಳಿಗಿಂತ ಭಿನ್ನ.

ಒಟ್ಟಾರೆಯಾಗಿ ಈ ಅಧ್ಯಯನದ ಕುರಿತಾಗಿ ಹೇಳುವುದಾದರೆ ಈ ಪ್ರದೇಶದಲ್ಲಿ ಕಂಡುಬರುವ ದೇವಾಲಯಗಳು ಕೋಟೆ, ಮೂರ್ತಿಶಿಲ್ಪಗಳು, ವೀರಮಾಸ್ತಿಕಲ್ಲುಗಳು, ಮೌಖಿಕ ಆಕರಗಳು ಲಭ್ಯವಿದ್ದು, ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಾಚ್ಯಾವಶೇಷಗಳು ಹಾಗೂ ಈಗಾಗಲೇ ಬಿಡಿ ಬಿಡಿಯಾಗಿ ದಾಖಲೆಗೊಂಡ ಈ ಪ್ರದೇಶದ ಚಾರಿತ್ರಿಕ ಅಂಶಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿ ತುರುವನೂರು ಗ್ರಾಮದ ಸ್ಥಳೀಯ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ತುರುವನೂರಿನಲ್ಲಿರುವ ಆವಶೇಷಗಳು ಅಳಿವಿನ ಹಂಚಿನಲ್ಲಿದ್ದು, ಜೀರ್ಣೋದ್ಧಾರಗೊಳಿಸಿ ಮೂಲ ಸ್ವರೂಪಕ್ಕೆ ಧಕ್ಕೆಯಾಗಿದೆ. ಈ ಪರಿಸರ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗದ ಮಾನವನ ನೆಲೆಯಾಗಿತ್ತು ಎನ್ನುವುದಕ್ಕೆ ನಿಖರವಾದ ಅವಶೇಷಗಳು ಕಂಡುಬಂದಿಲ್ಲ. ಇದರಿಂದ ಈ ಭಾಗದ ಅಧ್ಯಯನಕ್ಕೆ ಸ್ವಲ್ಪ ಹಿನ್ನಡೆ ಉಂಟಾಗಿರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಇವುಗಳ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದರೆ ನಾಡಿನ ಇತಿಹಾಸದಲ್ಲಿ ತುರುವನೂರಿನ ಪಾತ್ರ ಮತ್ತು ಮಹತ್ವ ತಿಳಿದುಬರುತ್ತದೆ.

ಅನುಬಂಧಗಳು

೧. ಗ್ರಂಥಋಣ
೨. ನಕ್ಷೆಗಳು
೩. ಛಾಯಾಚಿತ್ರಗಳು

ಗ್ರಂಥಋಣ

* ಅರ್ಪಣಾ ಕೂ.ಸ., **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.
* **ಎಪಿಗ್ರಾಫಿ ಕರ್ನಾಟಿಕ(ಹಳೆಯದು),** ಸಂಪುಟ ೧೧, ಬೆಂಗಳೂರು, ೧೯೦೩.
* ಕರೋವ್ಕಿನ್ ಎಫ್., **ಪುರಾತನ ಜಗತ್ತಿನ ಇತಿಹಾಸ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೭.
* ಕಲಬುರ್ಗಿ ಎಂ.ಎಂ., **ಸಮಾಧಿ–ಬಲಿದಾನ–ವೀರ ಮರಣ ಸ್ಮಾರಕಗಳು,** ಪ್ರಕಾಶನ, ಸಪ್ನಬುಕ್ ಹೌಸ್, ಬೆಂಗಳೂರು, ೧೯೮೦
* **ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೫.
* ಗಂಡುಗಲಿ ಟಿ.ಎನ್., **ನೋಡಬನ್ನಿ ಚಿತ್ರದುರ್ಗ,** ಮದಕರಿ ಪ್ರಕಾಶನ, ಚಿತ್ರದುರ್ಗ, ೧೯೯೫.
* ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ, ೧೯೯೧.
* ಗೋಪಾಲ್ ಆರ್.(ಸಂ), **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೫.
* ಜ್ಞಾನಾನಂದ ಜಿ., **ಶಿಲ್ಪದರ್ಶ,** ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.
* ಚನ್ನಪ್ಪ ಎಸ್.ಪಾಟೀಲ್, **ಕರ್ನಾಟಕದ ಕೋಟೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.
* ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೨.

* ತಂಬಂಡ ವಿಜಯ್ ಪೂಣಚ್ಚ(ಸಂ), **ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಶ್ವಕೋಶ, ಚರಿತ್ರೆ, ಸಂ.೪,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.
* ತಿಪ್ಪೇರುದ್ರಸ್ವಾಮಿ ಹೆಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೨೦೦೧.
* ದಿವಾಕರ್ ಆರ್.ಆರ್., **ಕರ್ನಾಟಕ ಪರಂಪರೆ, ಸಂಪುಟ ೧,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬
* ನರಸಿಂಹಮೂರ್ತಿ ಎಚ್.ಡಿ., **ನಮ್ಮಹಬ್ಬಗಳು,** ವಿಕಾಸ ಪ್ರಕಾಸನ, ಹಂಪಿ, ೨೦೦೨.
* ಪರಮಶಿವಮೂರ್ತಿ ಡಿ.ವಿ., **ಕನ್ನಡ ಶಾಸನ ಶಿಲ್ಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.
* ಪ್ರಭಾಕರ್ ಎಂ.ಎಂ., **ದೇವಾಲಯ ವಾಸ್ತು ಚಂದ್ರಿಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
* ಪ್ರಭಾಕರ್ ಎಂ.ಎಂ., **ದೇವಾಲಯ ವಾಸ್ತು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.
* ಭಗವತಿ ಎಸ್.ಎಸ್., ಮೇಲಿನಮನಿ ಎಚ್.ಎಸ್., **ಕನ್ನಡ ಶಾಸನಗಳ ಅಧ್ಯಯನ,** ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.
* ಬೆಟಗೇರಿ ಕೃಷ್ಣಶರ್ಮ, **ಕರ್ನಾಟಕದ ಜನಜೀವನ,** ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩.
* ಭಟ್ ವಿ.ಎನ್., **ಭಾರತೀಯ ಹಬ್ಬಗಳ ವೈಶಿಷ್ಟ್ಯ,** ವಿಶ್ವನಾಥ ಪ್ರಕಾಶನ, ಶಿವಮೊಗ್ಗ, ೨೦೦೭.
* ಮೂರ್ತಿ ಕೆ.ಎಲ್.ಎನ್., **ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ,** ರಂಜಿತ ಪ್ರಕಾಶನ, ತುಮಕೂರು, ೧೯೯೮.
* ರಮೇಶನಾಯಕ(ಸಂ), **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.
* ರಾಜಾರಾಂ ಹೆಗಡೆ, *ಭಾರತೀಯ ಮೂರ್ತಿಶಾಸ್ತ್ರ, ಧರ್ಮ ದೇವತಾರಾಧನೆ, ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ ವಿಶ್ಲೇಷಣೆ,* **ಅರಿವು ಬರಹ,** ಸಂ.೨, ಭಾಗ ೧, ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ೧೯೯೨.

* ರಾಜಶೇಖರಪ್ಪ ಜಿ., **ಇತಿಹಾಸ ಕಥನ,** ಸಿ.ವಿ.ಜಿ.ಪಬ್ಲಿಕೇಶನ್ಸ್, ಬೆಂಗಳೂರು, ೨೦೦೧
* ರಾಮದಾಸರೆಡ್ಡಿ, **ಚಿತ್ರದುರ್ಗ ಜಿಲ್ಲೆ ಪ್ರಾಕ್ಚಾರಿತ್ರಿಕ ಅಧ್ಯಯನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯
* ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.
* ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.(ಸಂ), **ಚಂದ್ರವಳ್ಳಿ,** ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ, ೧೯೭೬.
* ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನಯುಗ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.
* ಲಕ್ಷ್ಮಣ್ ತೆಲಗಾವಿ, **ಹರತಿಸಿರಿ,** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.
* ಶಿವತಾರಕ್ ಕೆ.ಬಿ., **ಕರ್ನಾಟಕದ ಪುರಾತತ್ವ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.
* ಸತ್ಯನ್ ಬಿ.ಎನ್.(ಸಂ), **ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್,** ಕರ್ನಾಟಕ ಸರ್ಕಾರ, ಬೆಂಗಳೂರು, ೧೯೬೭.
* ಸುರೇಶ್ ಬಿ., **ಚಿತ್ರದುರ್ಗ-ದಾವಣಗೆರೆ ಜಿಲ್ಲೆಯ ದೇವಾಲಯಗಳು,** ಸಂಶೋಧನಾ ಪ್ರಕಾಶನ, ಬಾಲೇನಹಳ್ಳಿ, ೨೦೦೯.
* ಸೂರ್ಯನಾಥ ಯು. ಕಾಮತ್, **ಕರ್ನಾಟಕದ ಗ್ಯಾಜೆಟಿಯರ್ ಭಾಗ ೧,** ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೪
* ಸೋಮಶೇಖರ್ ಎಸ್.ವೈ.(ಸಂ), **ಜಗಳೂರು(ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ೪),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.


ಅಪ್ರಕಟಿತ ಪ್ರಬಂಧಗಳು

* ಜಯಣ್ಣ ಯು., **ಮೊಳಕಾಲ್ಮೂರು ತಾಲೂಕಿನ ಪುರಾತತ್ವೀಯ ಪರಿಸರ,** ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ೨೦೦೭.
* ಬಸವರಾಜ ಹೆಚ್.ಇ., **ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿಗಳು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೦೭.

* ಮಹಾಲಿಂಗಪ್ಪ, **ತುರುವನೂರು ಗ್ರಾಮದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ, ಹೋರಾಟದ ನೆನಪು,** ಸ್ಮರಣ ಸಂಚಿಕೆ, ೧೯೯೬.

* ಶರತಬಾಬು ಕೆ.ಎಸ್., **ತುರುವನೂರು ಹೋಬಳಿಯ ಪುರಾತತ್ತ್ವೀಯ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಎಂ.ಫಿಲ್. ಪ್ರಬಂಧ, ೨೦೧೦

ನಕ್ಷೆಗಳು



ತುರುವನೂರು ಹೋಬಳಿ ನಕ್ಷೆ



ಛಾಯಾಚಿತ್ರಗಳು


ಆಂಜನೇಯ ದೇವಾಲಯ


ಗವಿಗಂಗಾಧರೇಶ್ವರ ದೇವಾಲಯ


ಚಂದ್ರಮೌಳೇಶ್ವರ


ರಾಮಲಿಂಗೇಶ್ವರ ಪಾರ್ಶ್ವನೋಟ



ಕಲ್ಲೇಶ್ವರ ದೇವಾಲಯ



ಪಾರ್ಶ್ವನೋಟ



ಗವಿಗಂಗಾಧರೇಶ್ವರ ಲಿಂಗ



ರಾಮಲಿಂಗೇಶ್ವರ ಲಿಂಗ




ಕೋಟೆ ಗೋಡೆ



ಕೋಟೆ ಬುರುಜು



ಮಹಿಷಮರ್ಧಿನಿ




ಸರಸ್ವತಿ





ಗಣೇಶ

ಆಂಜನೇಯ





ನಂದಿಶಿಲ್ಪಗಳು





ವೀರಮಾಸ್ತಿಗಲ್ಲುಗಳು



ಮಹಿಷಾಸುರ



ನಾಗಬಂಧ



ತ್ರಿಭಂಗಿ ಹಸು



ಬೃಹತ್ ಶಿಲಾನೆಲೆ



ರಥೋತ್ಸವ



ಮುಳ್ಳುಗದ್ದಿಗೆ



ದಾಸಪ್ಪ (ಮುರಡಪ್ಪ)



ಗಾಂಧೀಜಿ ಕಂಚಿನ ಪ್ರತಿಮೆ



ಈಚಲ ಮರದ ಚಳುವಳಿಯ ಸನ್ನಿವೇಶ



ಎಸ್.ನಿಜಲಿಂಗಪ್ಪನವರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ